Sri C. J. MUCKANNAPPA (Sira).—The member wants to know whether in view of the reply available, is the member entitled to give notice to the same question ?

Mr. SPEAKER—It is not a matter that can be discussed on the Floor of the House.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್ (ಮೈಸೂರು ಸಿಟಿ).—ಸ್ವಾಮಿ ನಮಗೆ ಮೆಂಬರ್ಸ್ ಲೆಟರ್ ಹೆಡ್ ಪ್ಯಾಡ್‌ಗಳನ್ನು ಸಪ್ಲೈಮಾಡುತ್ತಿಲ್ಲ. ನಾವು ಇಲ್ಲಿ ಯಾವುದೋ ಕಾಗದಗಳನ್ನು ಇಟ್ಟುಕೊಂಡು ಅವುಗಳಲ್ಲಿ ಬರೆದು ಕಳುಹಿಸುತ್ತಿದ್ದೇವೆ.

Mr. SPEAKER.—I will see that paper is supplied.

BUDGET ESTIMATES FOR 1966-67

Motion for Demands for Grants

Demand No.—21 and 25.

Sri R. M. PATIL (Minister for Development, Panchayati Raj and Municipal Administration).—Sir, on the recommendation of the Governor of Mysore, I beg to move :

Demand No 21-32. Rural Development

" That a sum not exceeding Rs. 32,30,000 be granted to the Government to defray the charges which will come in course of payment during the financial year for the period ending 31st day of March 1967, in respect of ' Rural Development.'"

Demand No. 25-37 CD projects, NES and Local Development Works.

" That a sum not exceeding Rs. 4,02,07,000 be granted to the Government to defray the charges which will come in course of payment during the financial year for the period ending 31st day of March 1967, in respect of ' Community Development Projects, National Extension Service and Local Development Works'."

Mr. SPEAKER.—Motion moved :

Demand No. 21—32 Rural Development

" That on the recommendation of the Governor, a sum not exceeding Rs. 32,30,000 be granted to the Government to defray the charges which will come in course of payment during the financial year for the period ending 31st day of March 1967 in respect of ' Rural Development,"

(MR. SPEAKER)

Demand No. 25-37 CD Projects NES and Local Development Works.

"That on the recommendation of the Governor, a sum not exceeding Rs. 4,02,07,000 be granted to the Government to defray the charges which will come in course of payment during the financial year for the period ending 31st day of March 1967, in respect of 'Community Development Projects, National Extension Service and Local Development Works'."

ಶ್ರೀ ಸಿದ್ದಯ್ಯ ಕಾಶೀಮಠ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ಸರಕಾರದವರು ಡಿಮ್ಯಾಂಡು 21ರಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿ 32,30,000 ರೂಪಾಯಿಗಳಷ್ಟು ಹಾಗೂ ಡಿಮ್ಯಾಂಡು 25ರಲ್ಲಿ ಸಾಮುದಾಯಿಕ ಅಭಿವೃದ್ಧಿ ಯೋಜನೆಗಳಿಗೋಸ್ಕರ 4,02,07,000 ರೂಪಾಯಿಗಳಷ್ಟು ಹಣ ಬೇಕೆಂದು ನಮ್ಮ ಒಪ್ಪಿಗೆಗಾಗಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ನಾನು ಇಲ್ಲಿ ಒಂದೆರಡು ಸಲಹೆಗಳನ್ನು ಗ್ರಾಮೀಣ ಅಭಿವೃದ್ಧಿಗಳ ಬಗ್ಗೆ ಹಾಗೂ ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ಬಗ್ಗೆ ಕೊಡಬಯಸುತ್ತೇನೆ.

ಈಗ ನಮ್ಮ ರಾಜ್ಯದಲ್ಲಿ 268 ಬ್ಲಾಕುಗಳು ಪೂರ್ತಿಯಾಗಿವೆ. ಇದರಲ್ಲಿ ಮೊದಲನೇ ಸ್ಟೇಜಿನಲ್ಲಿ 126, ಎರಡನೇ ಸ್ಟೇಜಿನಲ್ಲಿ 101½ ಹಾಗೂ ಮೂರನೇ ಸ್ಟೇಜಿನಲ್ಲಿ 40½ ಹೀಗೆ ಒಟ್ಟು 268 ಬ್ಲಾಕುಗಳಾಗಿವೆ. ಈ ಬ್ಲಾಕುಗಳು ಹೇಗೆ ನಡೆಯುತ್ತಿವೆ ಎನ್ನುವುದನ್ನು ನೋಡವಾಗು ನಮಗೆ ಇದರಲ್ಲಿನ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಮತ್ತು ಕೆಲವು ಕಡೆಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳೇ ಇರುವುದಿಲ್ಲ. ಎಕ್ಸ್‌ಟೆನ್‌ಷನ್ ಆಫೀಸರುಗಳು ಎಂದು ಇಲ್ಲಿಗೆ ಬರುವವರು ಬೇರೆ ಇಲಾಖೆಗಳಿಂದ ಬರುತ್ತಿದ್ದಾರೆ. ಇದರಿಂದ ಇಲ್ಲಿನ ಅಧಿಕಾರಿಗಳಲ್ಲಿ ಹೊಂದಾಣಿಕೆಯಿಲ್ಲದೆ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲವೆಂದು ವ್ಯಕ್ತವಾಗುತ್ತದೆ. ಸಿ.ಡಿ. ಬ್ಲಾಕುಗಳನ್ನು ಮಾಡಿರುವ ಕಡೆಗಳಿಂದ ಸರಿಯಾಗಿ ವ್ಯವಸ್ಥಿತವಾಗಿ ಕೆಲಸಗಳು ನಡೆಯುತ್ತಿವೆಯೋ ಎಂದು ನಾನು ಇಲ್ಲಿ ಕೇಳುತ್ತೇನೆ. 268 ಬ್ಲಾಕುಗಳು ಎಂದು ಮಾಡಿರುವುದರಲ್ಲಿ ಎಷ್ಟೋ ಕಡೆಗಳಲ್ಲಿ ಗ್ರಾಮ ಸೇವಕರು ಅಥವಾ ಸೇವಿಕೆಯರು ಮತ್ತು ಮುಖ್ಯ ಸೇವಿಕೆಯರು ಎಂದು ಎಷ್ಟು ಕಡೆಗಳಲ್ಲಿದ್ದು ಕೆಲಸ ಮಾಡು ತ್ತಿದ್ದಾರೆ. ಇದರ ವಿವರಗಳನ್ನು ಮಾನ್ಯ ಸಚಿವರು ಇಲ್ಲಿ ಕೊಡಬೇಕೆಂದು ಕೇಳುತ್ತೇನೆ. ಡೆವಲಪ್ ಮೆಂಟು ಬ್ಲಾಕ್‌ಗಳಲ್ಲಿ ಎಷ್ಟು ಜನ ಗ್ರಾಮ ಸೇವಕರು ಇದ್ದಾರೆ, ಮುಖ್ಯ ಸೇವಕರಿದ್ದಾರೆ ಹಾಗೂ ಗ್ರಾಮ ಸೇವಿಕೆಯರಿದ್ದಾರೆ ಇದರ ವಿವರಗಳನ್ನೂ ತಿಳಿಸಬೇಕೆಂದು ಕೇಳುತ್ತೇನೆ. ಉದಾಹರಣೆ ಯಾಗಿ ನಮ್ಮ ಶಿರಹಟ್ಟಿ ಡೆವಲಪ್‌ಮೆಂಟು ಬ್ಲಾಕ್ ಬಗ್ಗೆ ಇಲ್ಲಿ ಹೇಳುತ್ತೇನೆ. ಇಲ್ಲಿ ಇರಬೇಕಾದ ಗ್ರಾಮ ಸೇವಿಕೆಯರು ಹಾಗೂ ಮುಖ್ಯ ಸೇವಿಕೆಯರೇ ಇಲ್ಲ ಮತ್ತು ಎಜುಕೇಷನ್ನಿಗೆ ಸಂಬಂಧಪಟ್ಟ ಪ್ರತಿನಿಧಿಗಳು ಎಂದು ಇರಬೇಕಾದವರು ಇಲ್ಲ. ಇದರೊಳಗಿರುವ ಅಧಿಕಾರಿಗಳೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದರಿಂದಾಗಿ ಜನ ಈ ಬ್ಲಾಕುಗಳಿಂದ ತೊಂದರೆಗೆ ಈಡಾಗಿದ್ದಾರೆ. ತಾಲ್ಲೂಕುಗಳಲ್ಲಿ ತಹಶೀಲುದಾರರು ಎನ್ನುವ ಅಧಿಕಾರಿಗಳಿದ್ದಾರೆ. ಹೊಸ ರೆವೆನ್ಯೂ ಆಕ್ಟು ಪ್ರಕಾರ ಇವರಿಗೆ ಯಾವ ತರಹದ ಉದ್ಯೋಗವೂ ಇಲ್ಲದೆ ಬರೀ ರಿಕವರೀ ಆಫೀಸರು ಎಂದಾಗಿದ್ದಾರೆ. ಆದುದರಿಂದ ಈಗ ಬಿ.ಡಿ.ಓ. ಎಂದು ನೇಮಕ ಮಾಡುವ ಅಧಿಕಾರಿಗಳನ್ನು ತೆಗೆದು ಅವರ ಕೆಲಸ ಗಳನ್ನೆಲ್ಲಾ ಮೊದಲಿದ್ದಂತೆ ಆಯಾ ತಾಲ್ಲೂಕಿನ ತಹಶೀಲುದಾರರುಗಳಿಗೇ ವಹಿಸಿದರೆ ಕೆಲಸಗಳು ಚೆನ್ನಾಗಿ ನಡೆಯಲು ಅನುಕೂಲವಾಗುತ್ತದೆ. ಈಗಿರುವ ಬಿ. ಡಿ. ಓ. ಅಧಿಕಾರಿಗಳಿಂದ ಯಾವ ಉತ್ತಮವಾದ ಕೆಲಸಗಳೂ ನಡೆಯುತ್ತಿಲ್ಲ. ಆದುದರಿಂದ ಇಂತಹ ಪರಿವರ್ತನೆ ಮಾಡಿದರೆ ತಾಲ್ಲೂಕುಗಳಲ್ಲಿ ಸುಗಮವಾಗಿ ಕೆಲಸಗಳು ಆಗಲು ಅನುಕೂಲವಾಗುತ್ತದೆ. ನಮ್ಮ ತಾಲ್ಲೂಕು ಗಳಲ್ಲಿನ ಬ್ಲಾಕುಗಳನ್ನು ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವುದನ್ನು ನಾನು ನೋಡಿದ್ದೇನೆ. ಕೆಲವು ಕಡೆ ಇರುವ ಬ್ಲಾಕುಗಳಲ್ಲಿ ಅಭಿವೃದ್ಧಿ ಅಧಿಕಾರಿಗಳು ಇದ್ದು ಎಕ್ಸ್‌ಟೆನ್‌ಷನ್ ಆಫೀಸರುಗಳು ಇಲ್ಲದೇ ಇರತಕ್ಕ ಪ್ರಮೇಯಗಳೂ ಇವೆ. ಅಲ್ಲದೆ ಕೆಲವು ಕಡೆ ಬರುವ ಎಕ್ಸ್‌ಟೆನ್‌ಷನ್ ಆಫೀಸರು ಗಳು ಬೇರೆ ಇಲಾಖೆಯಿಂದ ಬರುವುದರಿಂದ ಅವರು ಹೋಗುವ ಮಾರ್ಗಗಳೇ ಬೇರೆ. ಉದಾಹರಣೆ ಯಾಗಿ ಹೇಳಬೇಕಾದರೆ ಸಹಕಾರಕ್ಕೆ ಸಂಬಂಧಪಟ್ಟ ಒಬ್ಬ ಎಕ್ಸ್‌ಟೆನ್‌ಷನ್ ಆಫೀಸರು ಇದ್ದರೆ ಅವರಿಗೆ ಬೇರೆ ಅಭಿವೃದ್ಧಿ ವಿಚಾರಗಳಲ್ಲಿ ಅನುಭವ ಸಾಲದಿರುವುದರಿಂದ ಅವರುಗಳು ಸರಿಯಾದ

ರೀತಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಲು ಆಗುವುದಿಲ್ಲ. ಅದೇ ರೀತಿ ಇಂಡಸ್ಟ್ರಿ ವಿಚಾರದಲ್ಲಿ ಅನುಭವ ಇಲ್ಲದೇ ಇರುವ ಅಧಿಕಾರಿಗಳು ಇಲ್ಲಿ ಎಕ್ಸ್‌ಟೆನ್‌ಷನ್ ಆಫೀಸರುಗಳೆಂದು ಮಾಡಿದರೆ ಅದರಿಂದ ಇಂಡಸ್ಟ್ರಿಗೆ ಅನುಕೂಲವಾಗುವುದಿಲ್ಲ. ಆದುದರಿಂದ ಯಾವ ಪೇರೆಂಟು ಇಲಾಖೆಯಿಂದ ಅಧಿಕಾರಿಗಳು ಬರುತ್ತಾರೋ ಅದೇ ವಿಚಾರದಲ್ಲಿ ಅಭಿವೃದ್ಧಿ ಮಾಡಲನುಕೂಲವಾಗುವಂತೆ ಆಯಾ ಬ್ಲಾಕುಗಳಲ್ಲಿ ಎಕ್ಸ್‌ಟೆನ್‌ಷನ್ ಆಫೀಸರುಗಳನ್ನು ನೇಮಕ ಮಾಡಬೇಕೆಂದು ಸಲಹೆ ಮಾಡುತ್ತೇನೆ ಮತ್ತು ತಾಲ್ಲೂಕಿನಲ್ಲಿರುವ ತಹಶೀಲುದಾರರುಗಳಿಗೆ ಬ್ಲಾಕುಗಳ ಕೆಲಸಗಳನ್ನು ವಹಿಸಿದರೆ ಅವರಿಗೆ ಕೆಲಸಗಳನ್ನು ಮಾಡಲು ಅನುಕೂಲವಾಗುತ್ತದೆ ಮತ್ತು ಸರಕಾರ ಅವರಿಗೆ ಸಾಕಷ್ಟು ನೆರವನ್ನು ಕೊಟ್ಟು ಸಹಾಯ ಮಾಡಬಹುದು. ಬಿ.ಡಿ.ಓ. ಗಳಿಗಿಂತ ತಹಶೀಲುದಾರರುಗಳೇ ತಾಲ್ಲೂಕುಗಳ ಕೆಲಸಗಳನ್ನು ಮಾಡಲು ಅನುಕೂಲವಾಗುತ್ತವೆ. ಈಗ ಬಿ.ಡಿ.ಓ.ಗಳು ಎಂದು ಮಾಡಿರುವುದರಿಂದ ಸರಕಾರದ ಹಣ ಇವರುಗಳಿಂದ ದುರುಪಯೋಗವಾಗುತ್ತಿರುವುದು ನಮಗೆ ಕಂಡುಬರುತ್ತಿದೆ. ಈ ಅಪವ್ಯಯವನ್ನು ತಪ್ಪಿಸಲು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರುಗಳು ಎಂದು ನೇಮಕ ಮಾಡುವುದನ್ನು ಬಿಡುವುದು ಒಳ್ಳೆಯದು. ನಮ್ಮ ಬಿಜಾಪುರ ಜಿಲ್ಲೆಯಲ್ಲಿರುವ ಇಂಡಿ ತಾಲ್ಲೂಕ್ ಬ್ಲಾಕ್‌ನ ಬಗ್ಗೆ ಅಲ್ಲಿ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ ಎಂದು ಸರಕಾರಕ್ಕೆ ವರದಿಗಳು ಸಂಬಂಧಪಟ್ಟ ಇಲಾಖೆಯಿಂದ ಬಂದಿರಬಹುದು. ಇಲ್ಲಿನ ಅಧಿಕಾರಿಗಳಿಂದ ಹಣ ದುರುಪಯೋಗವಾಗುತ್ತಿರುವುದರ ಬಗ್ಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರಕಾರದಲ್ಲಿ ಒತ್ತಾಯ ಮಾಡುತ್ತಿದ್ದರೂ ಇದುವರೆಗೂ ಸರಕಾರ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ. ಬೇರೆ ಇಲಾಖೆಗಳ ಅಧಿಕಾರಿಗಳು ಇಲ್ಲಿಗೆ ಬಂದರೆ ಅವರ ನೀತಿಯೇ ಬೇರೆಯಾಗಿರುತ್ತದೆ. ಅಗ್ರಿಕಲ್‌ಚರ್ ಇಲಾಖೆಯಲ್ಲಿದ್ದ ನೌಕರರನ್ನು ಇಲ್ಲಿ ನೇಮಕ ಮಾಡಿದರೆ ಇಲ್ಲ ಬೇರೆ ಇಲಾಖೆಯ ಬಗ್ಗೆ ಆ ಅಧಿಕಾರಿಗಳು ಕೆಲಸ ಮಾಡಲಾಗುವುದಿಲ್ಲ. ನಮ್ಮ ಇಂಡಿ ಬ್ಲಾಕಿನಲ್ಲಿ ಸ್ಕೇರ್‌ಸಿಟಿ ಕೆಲಸಗಳನ್ನು ತೆಗೆದುಕೊಳ್ಳುವಾಗ ಇಲ್ಲಿ ಹಣದುರುಪಯೋಗವಾಗುತ್ತಿದೆ ಇಲ್ಲಿ ಸರಕಾರಕ್ಕೆ ಒತ್ತಿ ಹೇಳಿದರೂ ಕೂಡ ಇದುವರೆಗೆ ಅಲ್ಲಿ ಯಾವ ಅಧಿಕಾರಿಗಳ ಮೇಲೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದೇ ಇರುವುದು ಬಹಳ ಚಿಂತಾಜನಕವಾದ ಸಂಗತಿ. ಸರಕಾರ ಯಾವಾಗಲಾದರೂ ಒಬ್ಬ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಂಡರೆ ಮುಂದೆ ಇಂತಹ ಅನ್ಯಾಯಗಳು ಆಗದೆ ಆಡಳಿತದಲ್ಲಿ ಕೆಲಸಗಳು ಸುಲಲಿತವಾಗಿ ನಡೆಯಲು ಅನುಕೂಲವಾಗುತ್ತವೆ. ಇಲ್ಲಿ ಸರಕಾರದ ಹಣ ದುರುಪಯೋಗವಾಗಿದೆ ಎನ್ನುವುದನ್ನು ಎತ್ತಿ ತೋರಿಸಬೇಕು ಎಂದು ಇದರ ಬಗ್ಗೆ ವಿಜಿಲೆನ್ಸ್ ಕಮಿಷನ್ನಿನವರಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಇನ್ನಿತರ ಕಡೆಗಳಿಗೆ ತಾಲ್ಲೂಕು ಬೋರ್ಡುಗಳಿಂದ ಒತ್ತಾಯವಾಗಿ ಬರೆದಿದ್ದರೂ ಕೂಡ ಇದುವರೆಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳದೇ ಇರುವುದು ತುಂಬಾ ಶೋಚನೀಯವಾಗಿದೆ. ಈಗಲಾದರೂ ಸರಕಾರ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಂಡರೆ ಮುಂದೆ ಇಂತಹ ಅನಾಹುತಗಳನ್ನು ತಡೆಗಟ್ಟಬಹುದು. ಇದನ್ನು ಸರಕಾರ ಈಗಲಾದರೂ ಈಡೇರಿಸುತ್ತಾರೆಂದು ನಂಬುತ್ತೇನೆ.

ಇನ್ನು ಬಿ.ಡಿ.ಓ. ಗಳಿಗೆ ಈಗಿರತಕ್ಕ ತುರ್ತು ಪರಿಸ್ಥಿತಿಯ ಕಾರಣಗಳಿಂದಾಗಿ ಆಹಾರದ ಅಭಾವವನ್ನು ನಿವಾರಿಸಲು ಅನುಕೂಲವಾಗುವಂತೆ ಅವರುಗಳಿಗೆ ಹೆಚ್ಚು ಅಧಿಕಾರಗಳನ್ನು ಕೊಡುತ್ತಿಲ್ಲ. ಆದರೂ ಈಗ ಇರುವ ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಗಳ ಮೂಲಕ ಆಯಾ ತಾಲ್ಲೂಕುಗಳಲ್ಲಿ ಜನಕ್ಕೆ ಬೇಕಾಗುವ ಇರಿಗೇಷನ್ನು ಪಂಪುಸೆಟ್ಟುಗಳು ಹಾಗೂ ಡೀಸಲ್ ಇಂಜನ್ನುಗಳನ್ನು ಕೊಡಬೇಕು ಮತ್ತು ಅವುಗಳನ್ನು ಆಗಾಗ್ಗೆ ಪರೀಕ್ಷಿಸಬೇಕು ಎಂದು ಮಾಡಿದ್ದೀರಿ. ಅದರೆ ಯಾವ ಬಿ.ಡಿ.ಓ. ಅಧಿಕಾರಿಗಳೇ ಆಗಲೀ ಇಲ್ಲಿಯವರೆಗೆ ಕೊಟ್ಟಿರುವ ಪಂಪುಸೆಟ್ಟುಗಳನ್ನು ಅವು ಸರಿಯಾಗಿ ಕೆಲಸ ಮಾಡುತ್ತಿವೆಯೇ ಇಲ್ಲವೇ ಎನ್ನುವುದನ್ನು ನೋಡುತ್ತಿಲ್ಲ. ಅಲ್ಲದೆ ಪಂಪುಗಳನ್ನು ಹಂಚಿಕೆ ಮಾಡುವಾಗ ಬ್ಲಾಕುಗಳಲ್ಲಿ ಐದಾರು ಜನರು ಗುಂಪು ಮಾಡಿಕೊಂಡು ಹಣ ದುರುಪಯೋಗ ಮಾಡುತ್ತಿದ್ದರೂ ಅವನ್ನು ಸರಿಯಾಗಿ ತನಿಖೆ ಮಾಡುತ್ತಿಲ್ಲ. ಅಲ್ಲದೆ ಇಲ್ಲಿರುವ ಒಬ್ಬೊಬ್ಬರು ಗ್ರಾಮ ಸೇವಕಿಯರು ಅಥವಾ ಸೇವಕರಾಗಲಿ 7—8 ಮೈಲಿಗಳಲ್ಲಿರುವ ಹಳ್ಳಿಗಳಲ್ಲಿ ಹೋಗಿ ಅಲ್ಲಿನ ರೈತಾಪಿ ಜನಕ್ಕೆ ಅನುಕೂಲ್ಯಗಳನ್ನು ಮಾಡಿಕೊಡಬೇಕೆಂದು ಇದ್ದರೂ ಆ ರೀತಿ ಯಾರೂ ಹೋಗಿ ಮಾಡುತ್ತಿಲ್ಲ. ಎಷ್ಟೋ ಕಡೆ ಸರಕಾರದ ಹಣ ದುರುಪಯೋಗವಾಗುತ್ತಿದೆ. ಇದನ್ನು ಸರಿಯಾಗಿ ಹತೋಟಿ ಇಟ್ಟುಕೊಂಡು ಮಾಡಬೇಕಾದರೆ ಬಿ. ಡಿ. ಓ. ಎನ್ನುವ ಅಧಿಕಾರಿಗಳಿಗೆ ಬದಲು ಆ ಅಧಿಕಾರಗಳನ್ನು ಆಯಾ ಗ್ರಾಮಪಂಚಾಯತಿಗಳವರಿಗೇ ವಹಿಸಿ ಆಯಾ ತಾಲ್ಲೂಕು ತಹಶೀಲುದಾರರುಗಳು ಅವರ ಮೇಲೆ ಹತೋಟಿ ಮಾಡಿದರೆ ಕೆಲಸಗಳು ಇನ್ನೂ ಚೆನ್ನಾಗಿ ನಡೆಯುತ್ತವೆ ಎಂದು ಇಲ್ಲಿ ಹೇಳಬಯಸುತ್ತೇನೆ. ತಪ್ಪೇನು ಈಗ ಬಿ. ಡಿ. ಓ. ಗಳಿಗೆ ಅಗ್ರಿಕಲ್ಚರು ಸ್ಕೀಂಗಳನ್ನು ಮಾಡಬೇಕೆಂದು ಮಾಡಲು ಹೊರಟಿದ್ದೀರಿ ಅದನ್ನು ಸರಿಯಾಗಿ ಅಳವಡಿಸಿ ಮಾಡಿಲ್ಲ. ಇದರಿಂದಾಗಿ ಅವರು ಸರಿಯಾಗಿ ಕೆಲಸ ಮಾಡಲು ಆಗದೆ ಬಹಳ ಕಷ್ಟವಾಗುತ್ತಿದೆ. ಆದುದರಿಂದ ಈ ಕೆಲಸಗಳನ್ನು ಬಿ. ಡಿ. ಓ. ಗಳಿಗೆ ಕೊಡುವುದಕೆ

(ಶ್ರೀ ಸಿದ್ದಯ್ಯ ಕಾಶೀಮಠ್)

ಬದಲಾಗಿ ಆಯಾ ಗ್ರಾಮ ಪಂಚಾಯತಿಗಳವರಿಗೇ ವಹಿಸಿದರೆ ಚೆನ್ನಾಗಿರುತ್ತದೆ ಎಂದು ಸರಕಾರ ಇದಕ್ಕಾಗಿ ಒಂದು ಯೂನಿಫಾರಂ ಲಾ ಮಾಡಿ ತರುತ್ತೇವೆಂದು ಹೇಳುತ್ತಿದ್ದರು. ಅದರಂತೆ ವಿಲೇಜು ಅಕೌಂಟೆಂಟುಗಳು ಅಥವಾ ಪಂಚಾಯತಿ ಕಾರ್ಯದರ್ಶಿಗಳು ಎಂದು ನೇಮಕ ಮಾಡಿ ಅವರುಗಳಿಗೆ ಟ್ರೈನಿಂಗು ಕೊಡುತ್ತೇವೆಂದು ಹೇಳಿದರು. ಆದರೆ ಅದರಂತೆ ಇನ್ನೂ ಕೆಲವು ಕಡೆಗಳಲ್ಲಿ ಮಾಡದೆ ಇರಲು ಕಾರಣವೇನು ಎನ್ನುವುದು ಗೊತ್ತಾಗುತ್ತಿಲ್ಲ. 1962–63ರಲ್ಲಿ 3600 ಜನರಿಗೆ ಟ್ರೈನಿಂಗು ಕೊಡುತ್ತೇವೆ ಎಂದು ಹೇಳಿದ್ದರು. ಇವೊತ್ತಿನವರೆಗೆ ಅದೇನಾಗಿದೆ ಎನ್ನುವುದು ಗೊತ್ತಾಗಲಿಲ್ಲ. ಇವೊತ್ತು ಏನಾಗಿದೆ ಎಂದರೆ, ಪಂಚಾಯತಿಗಳಲ್ಲಿ ರಾಜಕಾರಣಗಳು ಹೆಚ್ಚಾಗುತ್ತ ಬರುತ್ತಿದೆ. ಹಣದ ದುರುಪಯೋಗಗಳು ಸಾಕಷ್ಟು ನಡೆಯುತ್ತಿದೆ. ಇದರಿಂದಾಗಿ ಎಷ್ಟೋ ಪಂಚಾಯತಿಗಳಲ್ಲಿ ಕೆಲಸಗಳಾಗದೆ ಹಾಗೇ ಸ್ಥಗಿತವಾಗಿದೆ. ಇದನ್ನು ಸರಿಯಾಗಿ ಪರಿಶೀಲನೆ ಮಾಡಿ ಸರಕಾರ ಜರೂರಾದ ಕ್ರಮ ತೆಗೆದುಕೊಂಡು ಸೆಕ್ರೆಟರಿಗಳಿಗೆ ಸರಿಯಾಗಿ ತರಬೇತಿ ಕೊಟ್ಟು ಪಂಚಾಯತಿಗಳಲ್ಲಿ ಹಣ ದುರುಪಯೋಗವಾಗುತ್ತಿರುವುದನ್ನು ತಪ್ಪಿಸಲು ಆದಷ್ಟು ಮಟ್ಟಿಗೆ ಪಂಚಾಯತಿ ಸೆಕ್ರೆಟರಿಗಳಿಗೆ ಸಹಾಯಗಳನ್ನು ಕೊಡುತ್ತಿಲ್ಲ. ಇದರ ಬಗ್ಗೆ ತೀವ್ರವಾಗಿ ಸರಕಾರ ಯೋಚನೆ ಮಾಡಬೇಕು.

ಇನ್ನು ರೂರಲ್ ಡೆವಲಪ್‌ಮೆಂಟು ವರ್ಕುಗಳನ್ನು ಯಾವ ಯಾವ ಗ್ರಾಮಗಳಲ್ಲಿ ತೆಗೆದುಕೊಂಡಿದ್ದಾರೆ ಎನ್ನುವ ವಿವರಗಳನ್ನು ಇಲ್ಲಿ ಕೊಡಬೇಕೆಂದು ಕೇಳುತ್ತೇನೆ. ಸರಕಾರ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಅಗ್ರಿಕಲ್ಚರ್ ಲೇಬರರುಗಳ ವಿಚಾರದಲ್ಲಿ ಮಾಡದೇ ಇರುವುದರಿಂದ ಅಲ್ಲಿ ಕೆಲಸಗಾರರುಗಳಿಗೆ ಕೆಲಸ ಸಿಗದೆ ಬಹಳ ತೊಂದರೆಯಾಗುತ್ತಿದೆ. ಅಲ್ಲದೆ ಸೆಂಟ್ರಲ್ ಗವರ್ನಮೆಂಟಿನವರು ಅಗ್ರಿಕಲ್ಚರು ಲೇಬರು ವರ್ಕುಗಳಿಗಾಗಿ 1960–61 ಹಾಗೂ 1961–62ರಲ್ಲಿ ನೂರಕ್ಕೆ ನೂರರಷ್ಟು ಗ್ರಾಂಟುಗಳನ್ನು ಕೊಡುತ್ತಿದ್ದರು. ಆದರೆ 1962—63ರಲ್ಲಿ ಅಗ್ರಿಕಲ್ಚರು ಕೆಲಸಗಳಿಗಾಗಿ ಯೋಜನೆಗಳನ್ನು ಮಾಡುವಾಗ ಈ ಕೆಲಸಗಳಿಗೆ ಶೇಕಡಾ 50ರಷ್ಟು ಗ್ರಾಂಟು ಹಾಗೂ ಶೇಕಡಾ 50ರಷ್ಟು ಲೋನು ಎಂದು ಕೊಡುವ ಪ್ರಮೇಯ ಈಗ ಬಂದಿದೆ. ಇದಕ್ಕೆ ಕಾರಣ ಬಿ. ಡಿ. ಓ. ಗಳು ಸರಿಯಾಗಿ ಸುವ್ಯವಸ್ಥಿತವಾಗಿ ಕೆಲಸ ಮಾಡದೇ ಇರುವುದು ಅಲ್ಲವೇ ಎಂದು ನಾನು ಕೇಳುತ್ತೇನೆ. 1965–66ರಲ್ಲಿ ಈ ಕೆಲಸಗಳಿಗಾಗಿ ಯಾವ ರೀತಿ ಸ್ಯಾಂಕ್ಷನ್ನು ಬಂದಿದೆಯೋ ಅದನ್ನು ತಿಳಿಸಬೇಕು. ಇದರಲ್ಲಿ ಸಣ್ಣ ನೀರಾವರಿ ಯೋಜನೆಗಳು, ಸಾಯಿಲ್ ಕನ್‌ಸರ್‌ವೇಷನ್ನು, ಅಫಾರೆಸ್ಟೇಷನ್ನು ಕೆಲಸಗಳು, ಗೋಮಾಳಗಳ ಅಭಿವೃದ್ಧಿ, ಫೀಡರು ಜಾನಲ್ಲುಗಳ ಕೆಲಸಗಳು, ರೋಡು ವರ್ಕುಗಳು ಹಾಗೂ ಕಟ್ಟಡಗಳು ಇವುಗಳಿಗೆಲ್ಲಾ ಸಾಕಷ್ಟು ಹಣವನ್ನು ತೆಗೆದುಕೊಂಡು ಕೆಲಸ ಮಾಡಬೇಕೆಂದು ನಾನು ಕೇಳುತ್ತೇನೆ.

1960-61ರಲ್ಲಿ ಕೆಲವೊಂದು ಪ್ರಾಜೆಕ್ಟ್‌ಗಳನ್ನು ಮತ್ತು 1961-62ರಲ್ಲಿ ಕೆಲವೊಂದು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದೀರಿ. ಅವಕ್ಕೆ ಪೂರ್ತಿಯಾಗಿ ಕೇಂದ್ರ ಸರಕಾರದವರೇ ನೂರಕ್ಕೆ ನೂರು ಹಣ ಕೊಟ್ಟಿದ್ದಾರೆ ಅದನ್ನು ಸರಿಯಾಗಿ ವಿನಿಯೋಗ ಮಾಡಿದ್ದೀರಾ ಎಂದು ಕೇಳುತ್ತೇನೆ. ಈ ವರ್ಷ ಅಭಾವ ಪೀಡಿತ ಪರಿಸ್ಥಿತಿ ಇರುವುದರಿಂದ ವ್ಯವಸಾಯಗಾರನು ಹಳ್ಳಿಯಲ್ಲಿ ಕೆಲಸವಿಲ್ಲದೇ ಇರುತ್ತಾನೆ. ಆದ್ದರಿಂದ ಆರು ತಿಂಗಳ ಮಟ್ಟಿಗೆ ಆದರೂ ಕೂಡ ಸಣ್ಣ ನೀರಾವರಿ, ಸಾಯಿಲ್ ಕನ್‌ಸರ್ವೇಷನ್, ಅಫಾರೆಸ್ಟೇಷನ್ ಈ ಕೆಲಸಗಳಲ್ಲಿ ಆ ಜನರಿಗೆ ಕೆಲಸ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಈ ಸಮಯದಲ್ಲಿ ಹೇಳುತ್ತಾ ಇದ್ದೇನೆ. ಈ ರೀತಿ ಕೆಲಸ ಕೊಟ್ಟರೆ ವ್ಯವಸಾಯಗಾರರು ಬದುಕಲಿಕ್ಕೆ ಸಾಧ್ಯವಿದೆ, ಇಲ್ಲದೆ ಇದ್ದರೆ ಅವರು ಬಹಳ ಕೆಟ್ಟ ಪರಿಸ್ಥಿತಿಗೆ ಈಡಾಗಬಹುದು ಎಂದು ಹೇಳುತ್ತಾ ಇದ್ದೇನೆ.

ಹೌಸಿಂಗ್ ಸ್ಕೀಂ ಬಗ್ಗೆ ಈಗಾಗಲೇ ಧಾರವಾಡ ಜಿಲ್ಲೆಯ ಸಿರಹಟ್ಟಿ ಹಾವೇರಿ ಮುಂತಾದ ಕಡೆಗಳಲ್ಲಿ ಕೊಟ್ಟಿದ್ದೀರಿ. ಪೂರ್ತಿಯಾಗಿ ಇದುವರೆಗೂ ಈ ಸೆರ್‌ಗಳಿಗೆ ಹಣ ಕೊಡದೇ ಇರತಕ್ಕ ಪರಿಸ್ಥಿತಿ ಇದೆ, ಹಣ ಕೊಡದಿದ್ದರೆ ಯಾವ ರೀತಿ ಈ ರೂರಲ್ ಹೌಸಿಂಗ್ ಸ್ಕೀಂ ಜಾರಿಗೆ ಬರುತ್ತದೆ ಎಂದು ಕೇಳುತ್ತೇನೆ. ಹಳ್ಳಿಗಳಲ್ಲಿ ಜನರು ಈ ಸ್ಕೀಂಗೆ ಒಳಪಡುವುದಕ್ಕೆ ಚಿಂತೆ ಮಾಡುತ್ತಾ ಇರುವಾಗ ಅವರಿಗೆ ಹಣ ಮುಟ್ಟದಿದ್ದರೆ ಯಾವ ರೀತಿ ಅನುಕೂಲತೆ ಕೊಡುವುದಕ್ಕೆ ಸಾಧ್ಯ ಎಂದು ಕೇಳುತ್ತೇನೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿಗೂ ಈ ಸ್ಕೀಮನ್ನು ಅಳವಡಿಸಿ ಹೆಚ್ಚಿನ ರೀತಿಯಲ್ಲಿ ಮನೆ ಕಟ್ಟಿಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ಮತ್ತೊಂದು ಮುಖ್ಯವಾದ ಕೆಲಸ ಎಂದರೆ ನಮ್ಮ ದೇಶದಲ್ಲಿ ಮಳೆ ಬರಬೇಕಾದರೆ ಕಾಡು ಇರಬೇಕು, ಅದು ಇಲ್ಲದೇ ಇರುವುದರಿಂದ ಮಳೆ ಬಹಳ ಕಡಿಮೆಯಾಗಿದೆ ಎಂದು ಹೇಳುತ್ತಾ ಇದ್ದಾರೆ. ಸರ್ಕಾರದವರು ಅಫಾರೆಸ್ಟೇಷನ್ ವರ್ಕ್‌ಗೆ ಎಂಕರೇಜ್‌ಮೆಂಟ್ ಕೊಡಬೇಕು. ಈಗಾಗಲೆ

3—4 ಸಾವಿರ ಎಕರೆಯಲ್ಲಿ ಅಫಾರೆಸ್ಟೇಷನ್ ಮಾಡಿದ್ದಾರೆ ಅಲ್ಲಿ ಚೆನ್ನಾಗಿ ಗಿಡಗಳು ಬಂದರೆ ಒಳ್ಳೆಯದಾಗುತ್ತದೆ. ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟು ಗಿಡಗಳನ್ನು ಬೆಳೆಸಿದರೆ ದೇಶದಲ್ಲಿ ಅಡವಿ ಹೆಚ್ಚಾಗಿ ಹೆಚ್ಚು ಮಳೆ ಬರಬಹುದು. ಆ ದೃಷ್ಟಿಯಿಂದ ಇದಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಕೂಲಿಗಾರರಿಗೂ ಕೂಡ ಈ ಮೂಲಕ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಹೊಸದಾಗಿ ಟ್ರೈನಿಂಗ್‌ಗಾಗಿ ಲೋಕಲ್ ಸೆಲ್ಫ್ ಗೌರ್ನಮೆಂಟಿನವರು ಸಂಬಂಧಪಟ್ಟ ಪಂಚಾಯಿತ್ತು, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡು ಮೆಂಬರುಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಬೆಂಗಳೂರು, ಗುಲ್ಬರ್ಗ, ಧಾರವಾಡ ಈ ರೀತಿ 8 ಸ್ಥಳಗಳಲ್ಲಿ ಟ್ರೈನಿಂಗ್ ಕೊಡುತ್ತಾ ಇದ್ದರು ಇದನ್ನು ಹಠಾತ್ತಾಗಿ ನಿಲ್ಲಿಸಿದ್ದಾರೆ. ಹೊಸದಾಗಿ ಅಲ್ಲಿಗೆ ಆರಿಸಿ ಬಂದಿರತಕ್ಕ ಮೆಂಬರುಗಳಿಗೆ ಅಲ್ಲಿನ ಕಾನೂನು ಆಗಲಿ, ನಡವಳಿಕೆಗಳಾಗಲಿ ಸಾಕಾದಷ್ಟು ರೀತಿಯಲ್ಲಿ ಗೊತ್ತಿರುವುದಿಲ್ಲ. ಅದರ ಬಗ್ಗೆ ಸಾಕಾದಷ್ಟು ತರಬೇತಿ ಸಿಕ್ಕುವುದರ ಅವಶ್ಯಕತೆ ಬಹಳವಾಗಿದೆ. ಈವತ್ತಿನ ದಿವಸ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಸ್ಥಾನಕ್ಕೂ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುತ್ತಾ ಇರುವುದರಿಂದ, ತಾಲ್ಲೂಕು ಬೋರ್ಡು, ಪಂಚಾಯಿತ್ತು, ಹಾಗೂ ಸಹಕಾರ ಸಂಘಗಳು— ಈ ಸಂಸ್ಥೆಗಳಲ್ಲಿ ಇರತಕ್ಕ ಎಲ್ಲಾ ಮೆಂಬರುಗಳಿಗೂ ಮತ್ತು ಅಲ್ಲಿನ ಸೆಕ್ರೆಟರಿ ಹಾಗೂ ಉಳಿದ ಜನರಿಗೂ ಕೂಡ ಸರಿಯಾದ ರೀತಿಯಲ್ಲಿ ತರಬೇತಿ ಕೊಡುವುದು ಬಹಳ ಅವಶ್ಯಕ, ಅದನ್ನು ಪ್ರಸಕ್ತ ನಿಲ್ಲಿಸಿರುವುದು ಅಷ್ಟು ಉಚಿತವಾಗಿಲ್ಲ. ಆದ್ದರಿಂದ ತರಬೇತಿ ಕೊಡತಕ್ಕ ಏರ್ಪಾಡನ್ನು ಮಾಡಿದರೆ ಅಲ್ಲಿನ ಕೆಲಸ ಕಾರ್ಯಗಳು ಸುಲಲಿತವಾಗಿ ಜರುಗುತ್ತವೆ ಎಂದು ಹೇಳಿ ನನ್ನ ಎರಡು ಸಲಹೆಗಳನ್ನು ಕೊಟ್ಟು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ವಿ. ಘೋರ್ಪಡೆ (ಸಂಡೂರು).—ಮಾನ್ಯ ಸಭಾಪತಿಗಳೇ, ಸ್ವಾತಂತ್ರ್ಯ ಬಂದ ನಂತರ ಗ್ರಾಮಾಂತರ ಪ್ರದೇಶದಲ್ಲಿ ಆಧುನಿಕ ಪ್ರಗತಿ ಮತ್ತು *ಪ್ರಯೋಗಗಳು ಹಾಗೂ ಇತರ ಸೌಖ್ಯಗಳು ಇವನ್ನು ನೇರವಾಗಿ ಒದಗಿಸಿ ಕೊಡುವುದಕ್ಕೆ ನಮ್ಮ ಇಡೀ ದೇಶದಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆ ಪ್ರಾರಂಭವಾಯಿತು. ಈಗ ಅದು ಎಲ್ಲಾ ಕಡೆಗೂ ಹಬ್ಬಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಅಷ್ಟೇ ಅಲ್ಲ, ಪ್ರತಿಯೊಂದು ಬ್ಲಾಕಿಗೂ ಪ್ರತ್ಯೇಕವಾದ ಒಂದು ಬಡ್ಜೆಟ್ ಮಾಡಿ 5 ವರ್ಷಗಳಲ್ಲಿ 12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಒಂದು ಕಾರ್ಯಕ್ರಮವನ್ನು ಹಾಕಿದರು. ಅದನ್ನು ನಮ್ಮ ಇಡೀ ಭಾರತ ದೇಶದಲ್ಲಿ ಎಲ್ಲರೂ ಒಪ್ಪಿ, ನನ್ನ ಪ್ರದೇಶಕ್ಕೆ ಬೇಕು, ನನ್ನ ಪ್ರದೇಶಕ್ಕೆ ಬೇಕು ಎಂದು ಹೇಳಿ ತಮ್ಮ ಪ್ರದೇಶಕ್ಕೆ ಈ ಬ್ಲಾಕನ್ನು ಬರಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದರು. ಇದು ಪ್ರತಿಯೊಬ್ಬರಿಗೂ ಗೊತ್ತಿರತಕ್ಕ ವಿಷಯ. ಮೈಸೂರಿನಲ್ಲಿ ಈಗಾಗಲೇ ಮೊದಲಿನ ಭಾಷಣಕಾರರು ಹೇಳಿದ ಪ್ರಕಾರ 268 ಬ್ಲಾಕುಗಳು ಕೆಲಸ ಮಾಡುತ್ತಾ ಇವೆ. ಅದರಲ್ಲಿ 126 ಬ್ಲಾಕುಗಳು ಮೊದಲನೆ ಸ್ಟೇಜಿನಲ್ಲಿ 101 ಎರಡನೆಯ ಸ್ಟೇಜಿನಲ್ಲಿ ಮತ್ತು 47 ಬ್ಲಾಕುಗಳು ಆಫ್ ಟೇಟ್ ಸ್ಟೇಜ್‌ನಲ್ಲಿ ಇವೆ. ಈಗ ಕೆಲಸ ಮಾಡುತ್ತಾ ಇರತಕ್ಕ ಸಿಬ್ಬಂದಿಯಲ್ಲಿ ನೂರಕ್ಕೆ 75 ಪರ್ಸೆಂಟ್ ಸಿಬ್ಬಂದಿ ಮಾತ್ರ ಖಾಯಂ ಮಾಡಬೇಕೆಂದು ಹೇಳಿ ಸರ್ಕಾರದವರು ಆದೇಶ ಮಾಡಿದ್ದಾರಂತೆ. ಇದನ್ನು ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನ ಪ್ರೋಗ್ರೆಸ್ ರಿಪೋರ್ಟಿನಲ್ಲಿ ಹೇಳಿದ್ದಾರೆ. ನಾನು ಕೇಳುವ ಪ್ರಶ್ನೆ ಎಂದರೆ, ಇನ್ನು 25 ಪರ್ಸೆಂಟ್ ಸಿಬ್ಬಂದಿ ಅವರ ಗತಿ ಏನು ? ಅವರ ಬಗ್ಗೆ ಸರ್ಕಾರದವರು ಏನು ಯೋಚನೆ ಮಾಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಈ ಸಭೆಗೆ ಹೇಳಬೇಕೆಂದು ನನ್ನ ಮೊದಲನೆಯ ವಿನಂತಿ. ಅದೂ ಅಲ್ಲದೆ ಎಕ್ಸ್‌ಟೇನ್‌ಷನ್ ಆಫೀಸರುಗಳ ಬಗ್ಗೆ ಸರಕಾದರದ ಧೋರಣೆ ಏನೆಂಬುದನ್ನೂ ಕೂಡ ಮಾನ್ಯ ಮಂತ್ರಿಗಳು ಸ್ಪಷ್ಟೀಕರಿಸಬೇಕೆಂದು ಹೇಳುತ್ತೇನೆ. ಈ ವಿಷಯದಲ್ಲಿ ನಾನು ಸ್ಪಷ್ಟವಾಗಿ ಹೇಳಬೇಕಾದ ಮಾತು ಏನೆಂದರೆ, ಫೈನಾನ್ಸ್ ಕಮಿಷನ್ ಅವರು ಇಲ್ಲಿಗೆ ಬಂದು ಮೈಸೂರು ರಾಜ್ಯದ committed expenditure ಏನೆಂಬುದನ್ನು ಲೆಕ್ಕ ಮಾಡಿರುತ್ತಾರೆ. ಹಿಂದಿನ ಪ್ಲಾನ್‌ನಲ್ಲಿ ನೇಮಕ ಮಾಡಿರತಕ್ಕ ಸಿಬ್ಬಂದಿ ಸಂಬಳ ನಾವು ಕಮಿಟೆಡ್ ಎಕ್ಸ್‌ಪೆಂಡೀಚರ್ ಅಂತ ಪಟ್ಟಿ ಮಾಡಿ ಕೊಟ್ಟು ಅದರ ಆಧಾರದ ಮೇಲೆ ಗ್ರ್ಯಾಂಟ್ ಬರಬೇಕೆಂದು ಕೇಳಿರುತ್ತಾರೆ, ಅದರ ಆಧಾರದ ಮೇಲೆ ಅವರು ಗ್ರ್ಯಾಂಟ್ ಕೂಡ ಕೊಟ್ಟಿರುತ್ತಾರೆ. ಈ ರೀತಿ ಇರುವಾಗ—ಕಮಿಟೆಡ್ ಎಕ್ಸ್‌ಪೆಂಡೀಚರ್ ಎಂದರೆ ಸಿಬ್ಬಂದಿ ಏನಿದೆ ಅದನ್ನು ಸರ್ಕಾರ ಕಡಿಮೆ ಮಾಡುವುದಾದರೆ ಅದು ನೈತಿಕ ದೃಷ್ಟಿಯಿಂದ ಸರಿಯಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಅಷ್ಟೇ ಅಲ್ಲ, ಈ ರೀತಿ ನೀವೇನಾದರೂ ಮಾಡುವುದಾದರೆ ಇನ್ನೊಂದು ಸಲ ಫೈನಾನ್ಸ್ ಕಮಿಷನ್ ಅವರು ಮೈಸೂರಿಗೆ ಬಂದರೆ ನಮ್ಮ ಬೇಡಿಕೆಗಳನ್ನು ಅವರು ಸಹಾನುಭೂತಿಯಿಂದ ನೋಡಲಿಕ್ಕೆ ಇಲ್ಲ ಎಂದು ಹೇಳಬಯಸುತ್ತೇನೆ. ಆದ ಕಾರಣ ಇದು ಕಮಿಟೆಡ್ ಎಕ್ಸ್‌ಪೆಂಡೀಚರ್ ಇರುವುದರಿಂದ ಇದನ್ನು ಕಡಿಮೆ ಮಾಡುವ ದೃಷ್ಟಿಯಿಂದ ನೋಡಬಾರದು ಎಂದು ಹೇಳುತ್ತಾ ಇದ್ದೇನೆ. ಈಗ ಎಲ್ಲರಿಗೂ ಗೊತ್ತಿರುವಂತೆ

(ಶ್ರೀ ಎಂ. ವಿ. ಘೋರ್ಪಡೆ)

ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಇನ್ನೂ ಅಷ್ಟು ಬಲಪಡಿಸುವ ದೃಷ್ಟಿಯಿಂದ ಇದು ಸಾಮಾನ್ಯ ಜನರ ಒಂದು ಮೂವ್‌ಮೆಂಟ್ ಆಗಬೇಕೆಂಬ ದೃಷ್ಟಿಯಿಂದ ಈ ಸಿಬ್ಬಂದಿ ಎಲ್ಲಾ ಆಯಾಯಾ ಮಟ್ಟದ ಜನರಿಂದ ಆರಿಸಲ್ಪಟ್ಟ ಸಂಸ್ಥೆಗಳ ಆಡಳಿತಕ್ಕೆ ಅದು ಅಧೀನವಾಗಿರಬೇಕೆಂಬ ದೃಷ್ಟಿಯಿಂದ ಕೆಲಸ ಕಾರ್ಯಗಳನ್ನು ಅಳವಡಿಸಿಕೊಳ್ಳಲಾಗಿದೆ. ಇದೇ ನಮ್ಮ ದೇಶದ ಪಂಚಾಯಿತ್ತಿ ರಾಜ್ಯದ ಮೂಲ ಸಿದ್ಧಾಂತ. ಇವತ್ತು ಒಂದು ಮಾತನ್ನು ನಾವು ಮರೆಯುತ್ತಾ ಇದ್ದೇವೆ. ಅಧಿಕಾರ ವಿಕೇಂದ್ರೀಕರಣವಾಗಬೇಕು, ಪಂಚಾಯಿತ್ತಿಗಳಿಗೆ ಅಧಿಕಾರ ಹಂಚಬೇಕು ಎಂದು ಹೇಳಿ ನಮ್ಮ ರಾಜ್ಯಾಂಗದ ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ನಲ್ಲೂ ಕೂಡ ಇದೆ.

2-30 P. M.

ಆ ಒಂದು ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಪ್ರಕಾರ ಮತ್ತು ನಮ್ಮ ದೇಶದಲ್ಲಿ ಅಧಿಕಾರ ಮತ್ತು ಪ್ರಜಾಪ್ರಭುತ್ವ ಉಳಿಯಬೇಕಾದರೆ, ಅಧಿಕಾರ ಬರೀ ದೆಹಲಿಯಲ್ಲಿ ಅಥವಾ ಬೆಂಗಳೂರಿನಲ್ಲಿ ಕೇಂದ್ರೀಕೃತವಾದರೆ ಸಾಲದು. ಹಳ್ಳಿ ಹಳ್ಳಿಗೆ ಹೋಗಬೇಕು ಎಂಬ ವಾದವೇನಿದೆ, ಜವಹರಲಾಲ್ ನೆಹರೂರವರೇನು ಏನು ಹೇಳುತ್ತಿದ್ದರು ಅದಕ್ಕನುಗುಣವಾಗಿ ಪಂಚಾಯಿತಿ ರಾಜ್ಯ ಬಂತು. ಯಾವ ಮಟ್ಟದಲ್ಲಿ ಯಾವ ಕೆಲಸವಾಗಬೇಕೋ ಆ ಮಟ್ಟದಲ್ಲಿ ಅದಾಗದಿದ್ದರೆ ಸುಗುಮವಾಗಿ ಕೆಲಸವಾಗುವುದಿಲ್ಲ. ಎಲ್ಲಾದರೂ ಒಂದು ಬಾವಿಯ ರಿಪೇರಿಯಾಗಬೇಕಾದರೆ ಅಥವಾ ಅದರ ಗಾಲಿ ಮುರಿದು ಅದನ್ನು ಸರಿಮಾಡಬೇಕಾದರೆ ಅದಕ್ಕೆ ಕಲೆಕ್ಟರ್ ಕಡೆ ಅರ್ಜಿ ಕೊಟ್ಟು ಅವರೇ ಬಂದು ರಿಪೇರಿ ಮಾಡಿಸಬೇಕೆಂದರೆ ಅದು ಪ್ರಗತಿಪರವಾದ ಏರ್ಪಾಡಾಗುವುದಿಲ್ಲ, ಗ್ರಾಮದಲ್ಲಿ ಯಾವ ಪ್ರಗತಿಯೂ ಆಗುವುದಿಲ್ಲ ಎಂದು ಸಿದ್ಧಾಂತ ಮಾಡಿ ಪಂಚಾಯಿತಿ ರಾಜ್ಯ ರಚಿಸಬೇಕೆಂದು ಒಪ್ಪಿದೆವು. ಆ ರಾಜ್ಯವೇನಾಗಿದೆ, ಅದರ ಭವಿಷ್ಯವೇನು ಎಂಬುದನ್ನು ಸ್ಪಷ್ಟಪಡಿಸಬೇಕು. ಎಸ್.ಕೆ.ಡೇ.ಅವರು ಇಲ್ಲಿಗೆ ಬಂದಾಗ ಬಹಿರಂಗವಾಗಿ ಹೀಗೆ ಹೇಳಿದರು :

> "I came to Mysore in search of Panchayati Raj like a lover who comes in search of his beloved only to find no Panchayati-raj."

ಆ ಮಾತನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಬೇರೆ ರಾಜ್ಯಗಳಲ್ಲಿ ಯಾವ ಒಂದು ಪ್ರಗತಿಪರವಾದ ರೀತಿಯಲ್ಲಿ ಕಾನೂನುಗಳು ಆಗುತ್ತಿವೆಯೋ ಅದೇ ರೀತಿಯಲ್ಲಿ ಮೈಸೂರಿನಲ್ಲೂ ಕೂಡ ಮಾಡಲು ಪ್ರಯತ್ನ ನಡೆಯಿತು. ಆದರೆ ಆ ಪ್ರಯತ್ನದ ಕೊನೆ ಏನಾಯಿತೆಂಬುದು ಅರ್ಥವಾಗಿಲ್ಲ. ಪಂಚಾಯಿತಿ ರಾಜ್ಯವನ್ನು ಸ್ಥಾಪಿಸಲು ಕಾನೂನು ರೂಪದಲ್ಲಿ ಸಲಹೆ ಕೊಡಲ್ಪಟ್ಟು ಸಾಕಾದಷ್ಟು ಹಣ ಸಹ ಕೊಡಬೇಕೆಂದು ಸಂತಾನಂ ಕಮಿಟಿ ನೇಮಕ ಮಾಡಿದರು. ಆ ಸಮಿತಿಯು ಇಡೀ ದೇಶದಲ್ಲಿ ಪ್ರವಾಸ ಮಾಡಿ ಬೇರೆ ಬೇರೆ ಭಾಗಗಳಲ್ಲಿ ಪಂಚಾಯಿತಿ ರಾಜ್ಯವು ಯಾವ ರೀತಿ ಕೆಲಸಮಾಡುತ್ತಿದೆಯೆಂಬುದನ್ನು ನೋಡಿ ಅದರ ಅನುಭವದಮೇಲೆ ಒಂದು ವರದಿಯನ್ನು ಸಲ್ಲಿಸಿತು. ಅದರಲ್ಲಿ ಕೆಲವು ಮುಖ್ಯವಾದ ಸಲಹೆಗಳಿವೆ. ಈಗ ನಾವು ಪಂಚಾಯಿತಿಗಳನ್ನು ಸ್ಥಾಪನೆಮಾಡಿದ್ದೇವೆ. ಆದರೆ ಈ ಪಂಚಾಯಿತಿಗಳಿಗೆ ಸೆಕ್ರೆಟರಿಗಳನ್ನು ನೇಮಕಮಾಡುವುದಕ್ಕೆ ಕೂಡ ನಮಗೆ ಚೈತನ್ಯವಿಲ್ಲ. ಹಾಗಿರುವಾಗ ಈ ಪಂಚಾಯಿತಿಗಳು ಎಷ್ಟುಮಟ್ಟಿಗೆ ಕೆಲಸಮಾಡುವುದಕ್ಕೆ ಸಾಧ್ಯ ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ. ಇದೂ ಅಲ್ಲದೆ ಬ್ಲಾಕ್ ಏನಿದೆ ಅದರ ಸ್ಟೇಜ್ ಒಂದು, ಸ್ಟೇಜ್ ಎರಡು ಇವುಗಳ ಕೆಲಸ ಹೇಗಾಗಬಹುದು, ಹಣಕಾಸಿನ ಪರಿಸ್ಥಿತಿ ಏನಾಗಬಹುದು, ಎಂಬುದು ನಮ್ಮ ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಒಂದನೆಯ ಮತ್ತು ಎರಡನೆಯ ಸ್ಟೇಜುಗಳಿಗೆ ಸಾಕಾದಷ್ಟು ಕೇಂದ್ರಸರಕಾರದ ಹಣದ ನೆರವಿದೆ. ಆದರೆ ಮುಂದಿಲ್ಲ. ಈ ರೀತಿ ಕೇಂದ್ರದ ನೆರವು ಮುಂದೆ ನಿಂತುಹೋದರೆ ಪಂಚಾಯಿತಿ ರಾಜ್ಯ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಚಳುವಳಿಯು ಹಿಂದಕ್ಕೆ ಹೋಗಬಹುದೆಂಬು ಭಯವಿರುವುದರಿಂದ ಕೆಲವು ಮುಖ್ಯ ಸಲಹೆಗಳನ್ನು ಕೊಡಲಾಗಿದೆ. ಕೇಂದ್ರ ಸರಕಾರದ ಸಹಾಯ ಎರಡನೆಯ ಸ್ಟೇಜ್‌ನಂತರ ತಲೆಗೆ ಒಂದು ರೂಪಾಯಾದರೂ ಇರಬೇಕು ಎಂಬುದು ಒಂದು ಸಲಹೆ ಈಗ ಮಹಾರಾಷ್ಟ್ರದಲ್ಲಿ ನೋಡಿದರೆ ಮಿನಿಮಂ ಪರ್ ಕ್ಯಾಪಿಟ ಒಂದು ರೂಪಾಯಿ ಇದ. ಅದಕ್ಕೆ ಕಡಮೆಯಾದರೆ ಭರ್ತಿಮಾಡಿ ಒಂದು ರೂಪಾಯಾದರೂ ಸಿಕ್ಕುವಹಾಗೆ ಕಾನೂನು ಮಾಡಿದ್ದಾರೆ. ಹಣಕಾಸಿನ ಕಮಿಷನ್ ನವರು ರಾಜ್ಯ ಸರಕಾರಕ್ಕೆ ಸಾಕಷ್ಟು ಗ್ರ್ಯಾಂಟ್ ಕೊಡಿಸಬೇಕು, ಇಲ್ಲದಿದ್ದರೆ ಹೇಗಾದರೂ ಮಾಡಿ ಪಂಚಾಯಿತಿ ರಾಜ್ಯಕ್ಕೆ ಹೇಗಾದರೂ ಮಾಡಿ ಅಷ್ಟು ನೆರವನ್ನು ಕೊಡಲೇಬೇಕು

ಹಾಗೆ ಮಾಡಿದರೆ ಅದು ಉಳಿಯುತ್ತದೆ ಎಂಬುದು ನನ್ನ ಅಭಿಪ್ರಾಯ. ಪ್ರಗತಿಪರವಾದ ಪಂಚಾಯಿತಿ ರಾಜ್ಯ ಸ್ಥಾಪಿಸಲು ಇಷ್ಟು ಕೊಡುತ್ತೇವೆ, ಹಿಂದೆ ಬೀಳುವುದಿಲ್ಲ, ಫೈನಾನ್ಸ್ ಕಮಿಷನ್ ಇಲ್ಲವೆಂದು ಹೇಳಿದರೆ ಕಮಿಟೆಡ್ ಎಕ್ಸ್‌ಪೆಂಡಿಚರ್‌ನಲ್ಲಿ ಬಿಲ್ ಪಾಸಾದರೆ ಸೇರಿಸುತ್ತೇವೆ ಎಂದು ಹಣಕಾಸಿನ ಸಚಿವರು ಹೇಳಬಹುದು. ನಿನ್ನೆ ಅವರ ಭಾಷಣ ಕೇಳಿ ನಾನು ವಿಚಾರಮಾಡಿದೆ. ಪ್ರೆಸಿಡೆಂಟರಿಗಿರುವ ಅಧಿಕಾರವನ್ನುಪಯೋಗಿಸಿ ಬಿಲ್ಲನ್ನು ಅಂಗೀಕಾರಮಾಡಿದರೆ ಅದಕ್ಕೆ ಸಂಬಂಧಪಟ್ಟ ಕಮಿಟೆಡ್ ಎಕ್ಸ್‌ಪೆಂಡಿಚರ್ ಕೇಳಲು ಸಾಧ್ಯ—ಎಂದು ಸಲಹೆ ಇದೆ. ಈ ಬಗ್ಗೆ ಕೂಡ ಮಂತ್ರಿಗಳು ಸ್ಪಷ್ಟವಾದ ತಿಳಿವಳಿಕೆಯನ್ನು ನೀಡಬೇಕೆಂದು ಸೂಚಿಸಬಯಸುತ್ತೇನೆ.

ಈಗ ಸಂತಾನಂ ಕಮಿಟಿಗೆ ಸಂಬಂಧಪಟ್ಟಂತೆ 2-3 ವಿಷಯಗಳನ್ನು ಸೂಚಿಸಬೇಕಾಗಿದೆ. ರಾಜ್ಯ ಸರಕಾರದ ಹತೋಟಿಯಲ್ಲಿದ್ದ ಆಸ್ಪತ್ರೆ, ರಸ್ತೆ, ಪ್ಲಾನ್ಡ್ ಸ್ಕೀಂ ಅಥವ ಇತರ ಕಾರ್ಯ ಇತರ ಕಾರ್ಯಕ್ರಮಗಳನ್ನು ಪಂಚಾಯಿತಿ ರಾಜ್ಯ ಸಂಸ್ಥೆಗೆ ವರ್ಗಾಯಿಸಿದರೆ ಅದಕ್ಕೆ ಕಮಿಟೆಡ್ ಎಕ್ಸ್‌ಪೆಂಡಿಚರ್ ಇರುವುದನ್ನು ಸಂಪೂರ್ಣವಾಗಿ ಕೊಡಬೇಕು ಎಂಬ ಸಲಹೆ ಇದೆ. ಅರ್ಧ ಕೊಟ್ಟರೆ ಸಾಲುವುದಿಲ್ಲ, ಇದು ಮುಖ್ಯವಾದುದು. ಇದನ್ನು ನಾನು ಬಜೆಟ್ ಭಾಷಣದಲ್ಲಿ ಹೇಳಿದೆ. ಫೈನಾನ್ಸ್ ಕಮಿಷನ್ ಸಂಬಂಧ ಒಂದು ಸೈಂಟಿಫಿಕ್ ಬೇಸಿಸ್‌ಮೇಲಿರಬೇಕು. ಇನ್ನೊಂದು ರೆಮ್ಯೂನರೇಟಿವ್ ಅಸೆಟ್ಸ್ ಇರಬೇಕು, ಆದಾಯ ಬರತಕ್ಕಂಥ ಆಸ್ತಿಪಾಸ್ತಿ ಇರಬೇಕು, ಆಸ್ತಿಯನ್ನು ಕಟ್ಟಲು ಸಾಕಾದಷ್ಟು ಹಣ ಸಿಕ್ಕಬೇಕು, ಇದಕೆ ಪಂಚಾಯಿತಿ ಫೈನಾನ್ಸ್ ಕಾರ್ಪೋರೇಷನ್ ಪ್ರತಿಯೊಂದು ರಾಜ್ಯದಲ್ಲೂ ಆಗಬೇಕೆಂಬುದು ಇನ್ನೊಂದು ಸಲಹೆ. ಕೊನೆಯದಾಗಿ ಲೋಕಲ್ ಡೆವಲಪ್‌ಮೆಂಟ್‌ವರ್ಕ್ಸ್ ಕುಡಿಯುವ ನೀರು ಮುಂತಾದ ಸೌಕರ್ಯಗಳನ್ನು ಹಳ್ಳಿಗಳಿಗೆ ಕಲ್ಪಿಸಿಕೊಡಲು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ತಲೆಗೆ 10 ರೂಪಾಯಿನಂತೆ ಖರ್ಚು ಮ್ಯಾಚಿಂಗ್ ಗ್ರಾಂಟ್ ಬೇಸಿಸ್‌ಮೇಲೆ ಮಾಡಿದರೆ 400 ಕೋಟಿ ರೂಪಾಯಿ ಬೇಕಾಗುತ್ತದೆ. ಈ ಆಧಾರದ ಮೇಲೆ 800 ಕೋಟಿ ರೂಪಾಯಿ ಕೆಲಸ ಮಾಡಿದರೆ ಬಹಳ ಹಳ್ಳಿಗಳಲ್ಲಿ ಜನರಿಗೆ ಅನುಕೂಲವಾಗಬಹುದು. ಆ ರೀತಿ ಮಾಡಬೇಕು ಎಂದು ಸಂತಾನಂ ಕಮಿಟಿ ಹೇಳಿದೆ. ಮಾನ್ಯ ಹೆಗ್ಗಡೆಯವರಿಗೆ ಇದು ಗೊತ್ತಿದೆ; ಅವರೇ ಪಂಚಾಯತಿ ರಾಜ್ಯದ ಬಿಲ್ಲನ್ನು ತಯಾರಿಸಿದರು, ಅದು ಪ್ರಗತಿದಾಯಕವಾದ ಬಿಲ್ಲು. ಆ ವಿಷಯದಲ್ಲಿ ಅವರಿಗೆ ಆಸಕ್ತಿಯಿದೆ. ಪಂಚಾಯಿತಿ ರಾಜ್ಯದ ಬಗ್ಗೆ ಸಲಹೆ ಮಾಡಲು ನಮ್ಮರಾಜ್ಯಾಂಗದ ಪ್ರಕಾರ ಒಂದು ಸಮಿತಿ ನೇಮಕ ಮಾಡಿದ್ದರು. ಬಲವಂತ ರಾಯ್ ಮೆಹತಾರವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಮಿತಿಯ ಕೆಲಸವು ಅವರ ನಿಧನದಿಂದ ಮಧ್ಯದಲ್ಲೇ ನಿಂತುಹೋಯಿತು. ಮೈಸೂರಿನಲ್ಲಿ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ಸಮಿತಿಯು ಕೊಟ್ಟಿರುವ ವರದಿಯು ಈಗಾಗಲೇ ಚರ್ಚಿಸಲ್ಪಟ್ಟಿದೆ. ಅದು ಸೆಲೆಕ್ಟ್ ಕಮಿಟಿಗೆ ಹೋಗಲು ಅವಕಾಶ ದೊರೆಯಿತು. ಪ್ರಗತಿಪರವಾದ ಕೆಲಸಮಾಡಲು ಅದನ್ನು ಮಾಡಲಾಯ್ತು. ಅದರೆ ಅದು ಮತ್ತೆ ಸಭೆಯ ಮುಂದೆ ಇನ್ನೂ ಬರಲು ಅವಕಾಶವಾಗಿಲ್ಲ. ಅದು ಆಕ್ಟ್ ಆಗುತ್ತದೆಯೋ ಇಲ್ಲವೋ ಎಂಬ ಸಂದೇಹವಿದೆ. ನಾವೇನಾದರೂ ಪಂಚಾಯಿತಿ ರಾಜ್ಯವನ್ನು ಸ್ಥಾಪಿಸದೇ ಹೋದರೆ ನಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವವು ಕೈಬಿಟ್ಟುಹೋಗುತದೆ. ಇಷ್ಟೇ ಅಲ್ಲದೆ ರಾಜ್ಯಾಂಗದ ಪ್ರಕಾರ ಇರುವ ತತ್ವವೂ ಸಹ ಕೈಬಿಟ್ಟುಹೋಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ಪಾಕೀಸ್ಥಾನದಲ್ಲಿ ಅಯೂಬ್‌ಖಾನರ ನೇತೃತ್ವದಲ್ಲಿ ಏರ್ಪಟ್ಟಿರುವ ಪ್ರಜಾಪ್ರಭುತ್ವದಂತೆ ನಮ್ಮದೂ ಆಗುವುದಕ್ಕೆ ಅವಕಾಶಮಾಡುವುದು ಬೇಡ. ನಮ್ಮ ರಾಜ್ಯಾಂಗದಲ್ಲಿ ಪಂಚಾಯಿತಿ ರಾಜ್ಯದ ವಿಚಾರವಾಗಿ ನಾವು ಕಮಿಟ್ ಮಾಡಿಕೊಂಡಿರುವಂತೆ ಆಬಗ್ಗೆ ಸರಕಾರ ಏನೇನು ಮಾಡಿದೆ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಬೇಕು.

ವ್ಯವಸಾಯದ ಬಗ್ಗೆ ನ್ಯಾಶನಲ್ ಎಕ್ಸ್‌ಟೆನ್‌ಷನ್ ಸರ್ವಿಸ್ ಬಹಳ ಉತ್ತಮ ಕೆಲಸಮಾಡುತ್ತಿದೆ. ಪ್ಯಾಕೇಜ ಪ್ರೋಗ್ರಾಂ ಹೇಗೆ ನಡೆಯುತ್ತಿದೆ ಎಂಬುದಕ್ಕೆ ಮಂಡ್ಯಕ್ಕೆ ಹೋಗಿ ನೋಡಿದರೆ ಗೊತ್ತಾಗುತ್ತದೆ. 200 ಗ್ರಾಮಗಳಿಗೆ ಒಬ್ಬ ಗ್ರಾಮ ಸೇವಕ ಇರುತ್ತಾನೆ. ಅಷ್ಟು ಗ್ರಾಮಗಳ ರೈತರಿಗೆ ಎಷ್ಟು ಬೀಜ ಬೇಕು ಎಷ್ಟು ಗೊಬ್ಬರ ಬೇಕು ಎಂಬುದನ್ನು ಲೆಕ್ಕ ಹಾಕಿ ಅದನ್ನು ಕೊಡಿಸಲು ಅವನಿಗೆ ಸಾಧ್ಯವಾಗುತ್ತದೆ. ಆದರೆ ನಾನ್-ಪ್ಯಾಕೇಜ್ ಏರಿಯಾದಲ್ಲಿ ಸಾವಿರಾರು ರೈತ ಕುಟುಂಬಗಳಿದ್ದರೂ ಕೂಡ ಅಂಥಲ್ಲಿ ಗ್ರಾಮ ಸೇವಕ ಇಲ್ಲ. ರೈತರಿಗೆ ಏನೇನು ಬೇಕು, ಎಷ್ಟು ಫರ್ಟಿಲೈಜರ್ಸ್ ಬೇಕು, ಎಷ್ಟು ಬೀಜ ಬೇಕು, ಎಷ್ಟು ಕ್ರಿಮಿನಾಶಕ ಔಷಧಿ ಬೇಕು ಎಂಬುದನ್ನು ಪರಿಶೀಲಿಸಿ ಗ್ರಾಮ ಸೇವಕ ಅದನ್ನು ರೈತರಿಗೆ ಒದಗಿಸಿ ಕೊಡುತ್ತಿರುವಾಗ್ಗೆ ಅವನು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳುವುದರಲ್ಲಿ ಯಾವ ಸ್ವಾರಸ್ಯ ಇಲ್ಲ. ನನ್ನ ತಾಲ್ಲೂಕಿನಲ್ಲಿ ವಿಲೇಜ್ ಲೆವೆಲ್ ವರ್ಕರ್ ಬಹು ಚೆನ್ನಾಗಿ ಅತ್ಯಂತ ತೃಪ್ತಿಕರವಾಗಿ ಕೆಲಸ ಮಾಡುತ್ತಿದ್ದಾನೆಂದು ಹೇಳಲು ಬಯಸುತ್ತೇನೆ. ಇನ್ನು ಹೈ ಬ್ರೀಡ್ ಸೀಡ್ಸ್ ಕಲ್ಟಿವೇಶನ್ ತೆಗೆದುಕೊಳ್ಳುವ ಕಾಲದಲ್ಲಿ ಒಂದು ವೇಳೆ ಗ್ರಾಮ ಸೇವಕ ಇಲ್ಲದೇ ಹೋಗಿದ್ದರೆ ಈ ಕಾರ್ಯಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ರೈತರಿಗೆ ಭಾಷಣದ ಮೂಲಕ ಎಷ್ಟು

(ಶ್ರೀ ಎಂ. ವಿ. ಘೋರ್ಪಡೆ)

ಹೇಳಿದರೂ ತಿಳಿದು ಕೊಡುವುದಕ್ಕೆ ಸಾಧ್ಯವಿಲ್ಲ. ಪ್ರಾಕ್ಟಿಕಲ್ಲಾಗಿ ಏನೇನು ಮಾಡಬೇಕಾಗುತ್ತದೆ ಎಂಬುದನ್ನು ತೋರಿಸಿಕೊಡಬೇಕಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಹೈ ಬ್ರಿಡ್ ಪ್ರೋಗ್ರಾಮ್ ಸರಿಯಾಗಿ ಮಾಡುವುದಕ್ಕೆ, ಬಿ. ಡಿ. ಓ., ಅಗ್ರಿಕಲ್ಚರಲ್ ಆಫೀಸರ್, ನ್ಯಾಷನಲ್ ಎಕ್ಸಟೆನ್‌ಷನ್ ಸರ್ವಿಸಿಗೆ ಸಂಬಂಧಪಟ್ಟ ಆಫೀಸರ್ ಹಾಗೂ ಸಂಬಂಧಪಟ್ಟ ಗ್ರಾಮ ಸೇವಕ ಇವರ ಸಹಾಯ ತೆಗೆದುಕೊಳ್ಳಲಾಗಿದೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ವಿ. ಎಲ್. ಡಬ್ಲ್ಯೂ. ಇವರ ಕಾರ್ಯಕ್ರಮ ಏನು ಇರುತ್ತದೆ ಎಂಬುದನ್ನು ಒಂದೆರಡು ಹೇಳಬಲ್ಲಿರಾ ?

ಶ್ರೀ ಎಂ. ವೈ. ಘೋರ್ಪಡೆ.—ಅದಕ್ಕೆ ಬಹು ಸುಲಭವಾಗಿ ಉತ್ತರ ಹೇಳಬಹುದು. ಹೈ ಬ್ರೀಡ್ ಪ್ರೊಗ್ರಾಮ್‌ನಲ್ಲಿ ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನವರು ಕೊಡತಕ್ಕ ಬೀಜವನ್ನು ಸರಕಾರ ತಂದು ಕೊಟ್ಟು ಅದನ್ನು ತಾಲ್ಲೂಕ ಮಟ್ಟದಲ್ಲಿ ಹಂಚಬೇಕಾಯಿತು. ಇದಕ್ಕೆ ಗಾಮಸೇವಕನ ಸಹಾಯ ಬೇಕಾಯಿತು.

ಮೊದಲನೇ ಸಲ ನಮ್ಮ ಸೊಂಡೂರು ತಾಲ್ಲೂಕಿನಲ್ಲಿ ಈ ಬೀಜ ಬಿತ್ತನೆಯ ಪ್ರಯೋಗ ಮಾಡಿದ್ದೇವೆ. ಇದಕ್ಕೆ ಒಂದು ಟ್ರೈನಿಂಗ್ ಪ್ರೋಗ್ರಾಂ ಇದೆ. ರೈತ ಈ ಬೀಜ ಬಿತ್ತುವ ಕ್ರಮ ಕಲಿಯಬೇಕಾಗುತ್ತದೆ. ಮೊದಲು ನಮ್ಮ ತಾಲ್ಲೂಕಿನಲ್ಲಿಯ ಎಕ್ಸ್‌ಟೆನ್‌ಷನ್ ಆಫೀಸರ್ ಕಲಿತಿದ್ದಾರೆ. ಅವರು ಪ್ರಯತ್ನ ಮಾಡಿದ್ದಾರೆ. ಅಭ್ಯಾಸವಿಲ್ಲದ್ದರಿಂದ ಫೌಂಡೇಶನ್ ಸೀಡ್ ಪ್ರಯೋಗ ಮಾಡುತ್ತಾ ಇಲ್ಲ. ಈ ಹೈ ಬ್ರೀಡ್ಸ್ ಪ್ರೋಗ್ರಾಂನಲ್ಲಿ ಹಳ್ಳಿಗಳಿಗೆ ಹೋಗಿ ಯಾವ ಯಾವ ರೈತ ಇದರಲ್ಲಿ ಭಾಗವಹಿಸಲು ಸಿದ್ಧನಿದ್ದಾನೆ ಎಂಬುದಕ್ಕೆ ಪಟ್ಟಿ ಮಾಡಿ, ಅಲ್ಲಿ ಯಾವ ತರಹದ ಭೂಮಿ ಇದೆ, ನೀರಾವರಿ ಸೌಕರ್ಯ ಇದೆಯೇ, ನೀರು ಹರಿದು ಹೋಗುವುದಕ್ಕೆ ಸಾಕಷ್ಟು ಅನುಕೂಲ ಪ್ರದೇಶ ಇದೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ಅಂಥ ರೈತರ ಪಟ್ಟಿ ಮೊದಲು ಮಾಡಬೇಕಾಯಿತು. ಆ ನಂತರ ಒಂದು ಎಕರೆ ಭೂಮಿಗೆ ಎಷ್ಟು input ಬೇಕು ಎಂಬುದನ್ನು ಲೆಕ್ಕ ಮಾಡಬೇಕಾಯಿತು. ಅದು ಎಷ್ಟು ಅಂದರೆ, ಒಂದು ಎಕರೆಗೆ 3 ಕೆ. ಜಿ. ಹೈ ಬ್ರೀಡ್ ಬೀಜ ಆಗುತ್ತದೆ. ಕನಿಷ್ಠ ಪಕ್ಷ 500 ಎಕರೆಗೆ 15 ಕ್ವಿಂಟಾಲ್ ಬೀಜ ಬೇಕಾಗುತ್ತದೆ. ನಮಗೆ ರಾಜ್ಯ ಸರಕಾರದಿಂದ 3 ಕ್ವಿಂಟಾಲ್ ಬೀಜ ಸಿಕ್ಕಿದೆ. ಉಳಿದ ಬೀಜ ಹೊರಗಡೆಯಿಂದ ನ್ಯಾಷನಲ್ ಸೀಡ್ ಕಾರ್ಪೊರೇಷನ್ನಿನಿಂದ ತರಿಸಬೇಕಾಯಿತು. ಇನ್ನು ಗೊಬ್ಬರದ ವಿಚಾರ. ಒಂದು ಎಕರೆಗೆ ಸಾಮಾನ್ಯವಾಗಿ 150 ರೂಪಾಯಿ ಬೆಲೆಯ ಗೊಬ್ಬರ ಬೇಕಾಗುತ್ತದೆ. 40 ಕೆ. ಜಿ. ನೈಟ್ರೋಜನ್, 2 ಚೀಲ ಅಮೋನಿಯಂ ಸಲ್ಫೇಟ್ ಮತ್ತು ಪೊಟ್ಯಾಶಿಯಂ ಬೇಕಾಗುತ್ತದೆ. ಇದನ್ನು ಲೆಕ್ಕ ಹಾಕಿದರೆ ಸುಮಾರು 150 ರೂಪಾಯಿ ಗೊಬ್ಬರ ಬೇಕಾಗುತ್ತದೆ. ಕೆಲವು ಫರ್ಟಿಲೈಜರ್ಸ್ ಬೇಕಾಗುತ್ತದೆ ಅದು ಸರಕಾರದಿಂದ ನಮಗೆ ಸಿಕ್ಕುತ್ತದೆ. ಉಳಿದದ್ದನ್ನು ಪ್ರೈವೇಟ್ ಏಜೆನ್ಸಿ ಮೂಲಕ ತೆಗೆದುಕೊಳ್ಳಬೇಕಾಗುತ್ತದೆ. ಇದಲ್ಲದೆ ಬೆಳೆಗೆ ಹುಳ ಹತ್ತಬಾರದೆಂದು ಇನ್‌ಸೆಕ್ಟಿಸೈಡ್ಸ್ ಉಪಯೋಗಿಸುವುದಕ್ಕೆ ಪ್ರೈವೇಟ್ ಏಜೆನ್ಸಿ ಮೂಲಕ ತೆಗೆದುಕೊಳ್ಳಬೇಕಾಗುತ್ತದೆ. ಇಷ್ಟೆಲ್ಲಾ ವ್ಯವಸ್ಥೆ ಮಾಡಿದ ಮೇಲೆ ಈ ಕಾರ್ಯಕ್ರಮದಲ್ಲಿ ಭಾಗವಹಿಸತಕ್ಕ ರೈತನಿಗೆ ವಿಲೇಜ್ ಲೆವೆಲ್ ವರ್ಕರ್ ಮೂಲಕ ಯಾವ ರೀತಿ ಈ ಯೋಜನೆ ಕಾರ್ಯಗತ ಮಾಡಬೇಕು ಎಂಬುದನ್ನು ತೋರಿಸಿ ಕೊಡಬೇಕಾಗುತ್ತದೆ. ಈ ಕಾರ್ಯಕ್ರಮದಲ್ಲಿ ಭಾಗ ವಹಿಸುವ ರೈತನು ಬೆಳೆ ಬಂದ ಮೇಲೆ ಒಂದು ಎಕರೆಗೆ 5 ಕ್ವಿಂಟಲ್ ಬೀಜ ಸರಕಾರ ಗೊತ್ತು ಪಡಿಸಿದ ದರದಂತೆ ಅಂದರೆ ಒಂದು ಕ್ವಿಂಟಲ್ಲಿಗೆ 50 ರೂಪಾಯಿ ಪ್ರಕಾರ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗೆ ಮಾರುವುದಕ್ಕೆ ಒಪ್ಪಿದ್ದಾರೆ. ಈ ಆಧುನಿಕ ಪದ್ಧತಿಯಿಂದ ವ್ಯವಸಾಯ ಮಾಡಲು ರೈತರು ಒಪ್ಪಿಕೊಂಡಿದ್ದಾರೆ. ಈ ಆಧುನಿಕ ಪದ್ಧತಿಯ ಸಣ್ಣ ಸಣ್ಣ ವಿಷಯಗಳನ್ನು ರೈತರಿಗೆ ಗ್ರಾಮ ಸೇವಕ ಹೇಳಿ ಕೊಡಬೇಕಾಗುತ್ತದೆ. ಯಾವ ರೀತಿ ಈ ಹೈ ಬ್ರೀಡ್ ಬೀಜ ಬಿತ್ತನೆ ಮಾಡಬೇಕು. ಎಂದರೆ ಎರಡು ಇಂಚು ಭೂಮಿಯಲ್ಲಿ ಇಡಬೇಕಾಗುತ್ತದೆ; ಎಂಟು ಹತ್ತು ಇಂಚು ಭೂಮಿಯೊಳಗೆ ಹೋದರೆ ಸರಿಯಾಗಿ ಬರುವುದಿಲ್ಲ. ಬೀಜದ ಸಾಲು ಒಂಭತ್ತು ಇಂಚು ದೂರ ಇರಬೇಕಾಗುತ್ತದೆ. ಇದಲ್ಲದೆ ಫರ್ಟಿಲೈಜರ್ಸ್ ಬೀಜದಿಂದ ಪಕ್ಕದಲ್ಲಿ 3 ಇಂಚು ದೂರ ಇಡಬೇಕಾಗುತ್ತದೆ. ಹತ್ತಿರ ಇದನ್ನು ಹಾಕಿದರೆ ಬೀಜಕ್ಕೆ ಅಪಾಯ ಉಂಟಾಗುತ್ತದೆ. ಆದುದರಿಂದ ಈ ವಿಷಯ ರೈತನಿಗೆ ತಿಳಿಸಿಕೊಡುವುದಕ್ಕಾಗಿ ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವೀಸ್ ಬೇಕಾಗುತ್ತದೆ. ಇನ್ನು ಸಸಿಗಳ ಸಾಲು ಸಾಲಿಗೆ 18 ಇಂಚು ದೂರ ಅಂತಹ ಇರಬೇಕು. ಇಲ್ಲದಿದ್ದರೆ ಸಾಕಷ್ಟು ಬೆಳೆ ಬರುವುದಿಲ್ಲ. ಇಷ್ಟೆಲ್ಲಾ ವ್ಯವಸ್ಥೆ ಮಾಡಿದ ಮೇಲೆ ಬೆಳೆಗೆ ಸ್ಪ್ರೇ ಮಾಡಬೇಕಾಗುತ್ತದೆ. ಇದನ್ನು ಸಹ ಕಲಿಯಬೇಕಾಗುತ್ತದೆ. ಸರಿಯಾದ ರೀತಿಯಲ್ಲಿ ಸ್ಪ್ರೇ ಮಾಡುವುದರಿಂದ ಪರಿಣಾಮಕಾರಿಯಾಗಿ ಬೆಳೆ ಬರಲು

ಸಾಧ್ಯವಾಗುತ್ತದೆ. ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವಿಸ್ ಇಲ್ಲದಿದ್ದರೆ ಈ ಹೊಸ ಪದ್ಧತಿಯ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾಕೆಂದರೆ ಪ್ರತ್ಯಕ್ಷವಾಗಿ ಪ್ರಯೋಗ ಮಾಡಿ ತೋರಿಸಬೇಕಾಗುತ್ತದೆ. ವ್ಯವಸಾಯದಲ್ಲಿ ಇಂಥ ಕ್ರಾಂತಿಕಾರಿ ಬದಲಾವಣೆ ಮಾಡುವುದಕ್ಕೆ ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವಿಸ್ ಇಲ್ಲದಿದ್ದರೆ ಸಾಧ್ಯವಿಲ್ಲ. ಈ ರೀತಿ ಇದ್ದರೂ ಕೂಡ ವಿರೋಧ ಪಕ್ಷದವರು ಎನ್. ಇ. ಎಸ್. ಬೇಡ ಎಂದು ಹೇಳುವುದು ಕೇಳಿದರೆ ನನಗೆ ಮರಾಠಿ ಭಾಷೆಯಲ್ಲಿಯ ಒಂದು ಗಾದೆ ಮಾತು ನೆನಪಿಗೆ ಬರುತ್ತಿದೆ. ಅದು ಏನೆಂದರೆ'ನಾಚಾಯಲಾ ಎತ ನಾಹಿ ಮಣೂನ ಅಂಗಣ ವಾಕಡ ಮ್ಹಣಿ'ಎಂದು ಹೇಳಿದಹಾಗೆ ಇದೆ. ತನಗೆ ಕುಣಿಯಲು ಬಾರದೇ ಇದ್ದರೆ ನೆಲ ಸೊಟ್ಟು ಇದೆ ಎಂದು ಹೇಳಿದ ಹಾಗೆ ಇದೆ. ಆದುದರಿಂದ ಎನ್. ಇ. ಎಸ್. ಅನ್ನು ಬಯ್ಯುವುದು ತಪ್ಪು ಎಂದು ಹೇಳುತ್ತೇನೆ. They are not elected bodies- We must take the blame, not the poor officials.

ಶ್ರೀ ಜಿ. ರಾಮೇಗೌಡ.—ಮೈಸೂರು ದೇಶದಲ್ಲಿ ಇರತಕ್ಕ ಭತ್ತದ ಹೆಸರುಗಳನ್ನು ಹೇಳುವುದಕ್ಕೆ ವಿಲೇಜ್ ಲೆವೆಲ್ ವರ್ಕರನಿಗೆ ಬರುತ್ತದೆಯೇ? ಇಂಥಿಂಥ ಭತ್ತ ಎಂದು ಹೆಸರು ಹೇಳುವ ಶಕ್ತಿ ಇದೆಯೇ? ಇದರ ತರಬೇತಿ ಅವನಿಗೆ ಇದೆಯೇ?

ಶ್ರೀ ಎಂ. ವೈ. ಘೋರ್ಪಡೆ.—ಬತ್ತದ ವಿಷಯ ಕೂಡ ಸಾಕಷ್ಟು ಗೊತ್ತಿದೆ. ಮಂಡ್ಯಕ್ಕೆ ಹೋಗಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿ high yielding varieties introduce ಮಾಡಿದ್ದಾರೆ. ಮುಂದಿನ ಖಾರೀಫ್ ಸೀಸನ್‌ನಲ್ಲಿ ಎಕರೆಗೆ 30-40 ಕ್ವಿಂಟಾಲ್ ಬತ್ತವನ್ನು ಅವರು ಬೆಳೆಯಬಲ್ಲರು. ಕೊನೆಯದಾಗಿ, ಒಂದೇ ಒಂದು ಎಂದರೆ, ಈ ಒಂದು ಕಾರ್ಯಕ್ರಮವನ್ನು ನಾನು ಪದೇ ಪದೇ ಪುನಃ ಪುನಃ ಈ ಸಭೆಯ ಮುಂದೆ ಈ ಸಭೆಯ ಹೊರಗೆ ಹೇಳುತ್ತಾ ಬಂದಿದ್ದೇನೆ. ಆಹಾರ ಪರಿಸ್ಥಿತಿಯ ಸಮಸ್ಯೆಯನ್ನು ಬಿಡಿಸಬೇಕಾದರೆ ಪ್ರತಿಯೊಂದು ಬ್ಲಾಕ್‌ನಲ್ಲಿ ನಾವು ಒಂದು ಸಾವಿರ ಎಕರೆಯಲ್ಲಿ ಪ್ರಯೋಗ ಮಾಡುವುದಾದರೆ ಆಹಾರ ದುಸ್ಥಿತಿ ಅಥವಾ ಕ್ಷಾಮ ನಮ್ಮ ರಾಜ್ಯದಲ್ಲಿ ಇರುವುದಿಲ್ಲ. ಅಷ್ಟೇ ಅಲ್ಲ, ವ್ಯವಸಾಯದಲ್ಲಿ ಒಂದು ಆಂದೋಳನವಾಗಬೇಕು. ಬರೀ ವ್ಯವಸಾಯದಲ್ಲಿ ಅಲ್ಲ; ರೈತರ ಮನೋಭಾವದಲ್ಲೂ ಸಹ ಒಂದು ಹೆಚ್ಚಿನ ಕ್ರಾಂತಿಯನ್ನು ಹುಟ್ಟಿಸಿ, ಒಂದು ವರ್ಷದಲ್ಲಿ ಈ ಕಾರ್ಯವನ್ನು ಮಾಡುವುದಕ್ಕೆ ಸಾಧ್ಯವೆಂದು ನನಗೆ ಆತ್ಮ ವಿಶ್ವಾಸವಿದೆ. ಆದರೆ ಹಾಗೆ ಮಾಡಬೇಕಾದರೆ ಬರೀ ಭಾಷಣದಿಂದ ಸಾಧ್ಯವಿಲ್ಲ. ಪ್ರತಿಯೊಂದು ಹಳ್ಳಿ ಹಳ್ಳಿಗೂ, ಪ್ರತಿಯೊಂದು ಹೊಲ ಹೊಲಕ್ಕೂ ಹೋಗಿ ನೋಡಬೇಕಾದ ಜವಾಬ್ದಾರಿ ನಮ್ಮದಿದೆ. ನಮ್ಮ ಗ್ರಾಮದಲ್ಲಿ ಯಾವ ಕಾಲದಲ್ಲೂ ಜೋಳಕ್ಕೆ ಬೀಟೆ ರೋಗ ಬಂದಿರಲಿಲ್ಲ. ಈಗ ಆ ರೋಗ ಬಂದಿದೆ, ರೋಗ ತಡೆಗಟ್ಟಲು ಡಿ.ಡಿ.ಟಿ.ಯನ್ನು ಐವತ್ತು ಪರ್‌ಸೆಂಟ್ ಉಪಯೋಗಿಸಿದ್ದರಿಂದ ರೋಗ ಹೋಗಲು ಸಾಧ್ಯವಾಯಿತು. 3 ದಿನಗಳಲ್ಲೇ ರೋಗ ಹೋಯಿತು. ಈ ರೀತಿಯ ಕ್ರಮ ಕೈಗೊಳ್ಳುವಂತೆ ತಾತಾ ಫ್ಯೂಸನ್ ಕಂಪನಿಯವರು ಬಂದು ಕೆಲಸ ಮಾಡಿ ತೋರಿಸಿದರು. 3 ದಿನಗಳಲ್ಲೇ ರೋಗ ನಿವಾರಣೆ ಮಾಡುವುದು ಸಾಧ್ಯವಿದೆ ಎಂಬುದನ್ನು ರೈತನಿಗೆ ತೋರಿಸಿಕೊಟ್ಟರು. ಸಾಕಷ್ಟು ಔಷಧಿಯ ಪಾಕೆಟ್‌ಗಳನ್ನು ಕೊಟ್ಟರು. ಇಲ್ಲದಿದ್ದರೆ ಯಾರಿಂದಲೂ ಈ ರೋಗ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈ ಒಂದು ಪ್ರಯೋಗವನ್ನು ಪಂಚಾಯಿತಿಯವರು, ವಿಲೇಜ್ ವರ್ಕರ್‌ಗಳು ಮಾಡುವುದಕ್ಕೆ ಸಾಧ್ಯ. ಒಂದು ಸಂತೋಷದ ವಿಷಯವೆಂದರೆ, ಪ್ಲಾನಿಂಗ್ ಕಮೀಷನರ್ ಅವರು ನನ್ನ ಸಲಹೆ ಒಪ್ಪಿಕೊಂಡಿದ್ದಾರೆ. ಮೊನ್ನೆ ಕೇಂದ್ರ ಸರ್ಕಾರದ ಯೋಜನಾಶಾಖೆಯ ಉಪಮಂತ್ರಿಗಳು ಪಾರ್ಲಿಮೆಂಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಸೆಲೆಕ್ಟ್ ಕಮಿಟಿಯನ್ನು ಮಾಡಬೇಕು. ಮೈಸೂರು, ಆಂಧ್ರ, ಕೇರಳ ರಾಜ್ಯಗಳಲ್ಲಿ ಮುಂಬರುವ ಮುಂಗಾರು ಮಳೆಯ ಕಾಲದಲ್ಲಿ ಈ ಪ್ರಯೋಗ ಮಾಡುವರಿದ್ದಾರೆಂದು ಗ್ಯಾರಂಟಿಯಾಗಿ ಹೇಳಿದ್ದಾರೆ. ಇದು ಒಂದು ಸಮಾಧಾನದ ವಿಷಯ. ನಾವು ಇದರಲ್ಲಿ ಆತ್ಮವಿಶ್ವಾಸದಿಂದ ಕೆಲಸ ಮಾಡುವುದಾದರೆ ಯಶಸ್ವಿಯಾಗಿ ಮಾಡಿ ತೋರಿಸಬೇಕು. ನಾವೆಲ್ಲರೂ ಪ್ರಾಮಾಣಿಕವಾಗಿ ಇದನ್ನು ಮಾಡದಿದ್ದರೆ, ರಾಷ್ಟ್ರೀಯ ವಿಸ್ತರಣಾ ಯೋಜನೆಯ ಸ್ಟ್ರಕ್‌ಚರ್‌ಗೆ, ಪಂಚಾಯಿತಿ ರಾಜ್ಯಕ್ಕೆ, ಗ್ರಾಮದ ಜನರಿಗೆ, ಮತ್ತು ಪ್ರಜಾಪ್ರಭುತ್ವಕ್ಕೆ ನಮ್ಮ ಆವೇಶದಲ್ಲಿ ಒಂದು ಕೊಡಲಿ ಪೆಟ್ಟು ಹಾಕಿದ ಹಾಗಾಗುತ್ತದೆ ಎಂದು ಹೇಳುತ್ತೇನೆ. ಈ ವಿಷಯದ ಮೇಲೆ ಮಾನ್ಯ ಮಂತ್ರಿಗಳು ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು. ಇಷ್ಟು ಮಾತಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮಿ, ಈ ಸಭೆಯ ಮುಂದೆ ಇರತಕ್ಕ ಬೇಡಿಕೆಗಳನ್ನು ನಾನು ವಿರೋಧ ಮಾಡಬಯಸುತ್ತೇನೆ. ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಈ ಪಂಚಾಯಿತಿ ಕಾರ್ಯಗಳ ನಡವಳಿಕೆ ಮತ್ತು ಈ ಬ್ಲಾಕ್ ಡೆವಲಪ್‌ಮೆಂಟ್ ಇಲಾಖೆಗಳು ಏನಿವೆ,

(ಶ್ರೀ ಕೆ. ಲಕ್ಕಪ್ಪ)

ಇವುಗಳಿಂದ ನಮ್ಮ ರಾಜ್ಯಕ್ಕೆ ನಾಲ್ಕಾರು ವರ್ಷಗಳ ಅನುಭವವನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುವುದಾದರೆ ಯಾವ ಕಾರ್ಯವೇ ಆಗಲೀ, ಯಾವ ಪ್ರಗತಿಯೇ ಆಗಲಿ ಆಗಿಲ್ಲ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಒಂದು ಸಾರಿ ನಮ್ಮ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಂಗವಾಗಿ, ಈ ಗ್ರಾಮದ ವಿಲೇಜ್ ವರ್ಕರ್ ಎಂದು ಏನು ನೇಮಕ ಮಾಡಿದ್ದಾರೆ ಅವರ ಜೊತೆಯಲ್ಲಿ ನಾನ್ನ ಒಂದು ಹಳ್ಳಿಗೆ ಹೋಗುವ ಸಂದರ್ಭ ಬಂತು. ಅಲ್ಲಿಗೆ ಹೋದಾಗ ಈ ವಿಲೇಜ್ ವರ್ಕರನ್ನು ಒಂದ ಪ್ರಶ್ನೆಯನ್ನು ಅಧಿಕಾರಿಗಳು ಕೇಳಿದರು, ಏನೆಂದರೆ:

Who is a registered grower?

ಅದಕ್ಕೆ ಅವನು ಕೊಟ್ಟ ಉತ್ತರ ಈ ರೀತಿ ಇದೆ:

"A villager who has registered all his lands to the Government and demanding seeds from him."

ಇದರಿಂದ ಗೊತ್ತಾಗುತ್ತದೆ, ರಾಷ್ಟ್ರೀಯ ವಿಸ್ತರಣಾ ಯೋಜನೆಯ ವಿಷಯವನ್ನೆ ತಿಳಿಯದಿರ ತಕ್ಕಂಥ ವಿಲೇಜ್ ವರ್ಕರ್‌ಗಳನ್ನು ದೇಶದಾದ್ಯಂತ ಇಟ್ಟಿದ್ದಾರೆ. ಅವರಿಗಾಗಿ ಸಹಸ್ರಾರು ರೂಪಾಯಿ ಗಳನ್ನು ವೆಚ್ಚ ಮಾಡುತ್ತಿದ್ದಾರೆ ಎಂದು. ಈ ರೀತಿಯಾಗಿ ಹಳ್ಳಿ ಹಳ್ಳಿಗಳಲ್ಲಿ ಅಧಿಕಾರ ವಿಕೇಂದ್ರೀಕರಣ ವಾಗಬೇಕು, ಹಳ್ಳಿ ಹಳ್ಳಿಗಳಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಿ ಹಳ್ಳಿಗಳು ಸ್ವಯಂಪ್ರೇರಿತವಾಗಿ ಕೆಲಸ ಮಾಡಬೇಕೆಂಬ ಉದ್ದೇಶ ಇದ್ದಿದ್ದೇ ಆದರೆ, ಬಹುಶಃ ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಯನ್ನು ಸರ್ಕಾರದವರು ಮೊದಲು ತೆಗೆಯುತ್ತಿದ್ದರು ಎಂದು ನನ್ನ ಭಾವನೆ. ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ಈ ಸಭೆಯಲ್ಲಿ 4 ವರ್ಷಗಳಿಂದ ಪದೇ ಪದೇ ಹೇಳುತ್ತಿದ್ದೇನೆ. ಸರ್ಕಾರದವರು ಅನಾವಶ್ಯಕವಾಗಿ ಹಣವನ್ನು ಪೋಲು ಮಾಡತಕ್ಕಂಥದ್ದನ್ನು, ಖರ್ಚು ಮಾಡತಕ್ಕಂಥದ್ದನ್ನು ಬಿಟ್ಟು ನೇರವಾಗಿ ರೈತನಿಗೆ ಸಹಾಯ ಮಾಡುವಂಥ ಯೋಜನೆಗಳನ್ನು ನಿರೂಪಿಸಬೇಕು ಎಂದು ಹೇಳುತ್ತೇನೆ. ಈ ವಿಲೇಜ್ ವರ್ಕರ್‌ಗಳ, ಪಂಚಾಯಿತಿ ಕಾರ್ಯದರ್ಶಿಗಳ, ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಗಳ ಜೀಪಿನ ದುರುಪ ಯೋಗ ಹೇಳಬೇಕೆಂದರೆ ಬಹುಶಃ ಒಂದು ದಿವಸ ಸಾಕಾಗುವುದಿಲ್ಲ. ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಗಳವರು ಕೂಡ ಲೋಕಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಈ ಎನ್.ಇ.ಎಸ್.ಗೆ ಕೊಟ್ಟಿರತಕ್ಕಂಥ ಜೀಪುಗಳನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳಿದರು. ಅದನ್ನು ಕೇಳಿ ನಾವೆಲ್ಲಾ ಬಹಳ ಸಂತೋಷದಿಂದ ಇದ್ದೆವು. ಈ ರಾಜ್ಯದಲ್ಲೂ ಏನಾದರೂ ಸ್ವಲ್ಪಮಟ್ಟಿಗಾದರೂ ಕೂಡ ಈ ಕಾರ್ಯ ಜಾರಿಗೆ ಬರಬಹುದು, ಈ ದೇಶದಲ್ಲಿ ಅಪವ್ಯಯವಾಗುವುದು ನಿಲ್ಲಬಹುದು ಎಂದು ಭಾವಿಸಿದ್ದೆವು. ಆದರೆ ಸರ್ಕಾರಕ್ಕೆ ಬೇಕಾಗಿರುವುದು ಸರ್ಕಾರಿ ಅಧಿಕಾರಿಗಳ ಮಟ್ಟದಲ್ಲಿ, ತಾಲ್ಲೂಕ್‌ಗಳ ಮಟ್ಟದಲ್ಲಿ, ಹಳ್ಳಿಗಳ ಮಟ್ಟದಲ್ಲಿ, ಕಾಂಗ್ರೆಸ್‌ನ ಅಧಿಕಾರವನ್ನು ಹಿಡಿಯಬೇಕು. ಇಂಥಹ ಜೀಪುಗಳನ್ನು ಕೊಟ್ಟಿರುವುದು ಅಧಿಕಾರಿಗಳು, ಕಾಂಗ್ರೆಸ್‌ನವರ ಏಜೆಂಟ್‌ಗಳಾಗಿರಬೇಕು ಎನ್ನುವ ಉದ್ದೇಶದಿಂದ. ಬಹುಶಃ ಈ ಜೀಪುಗಳು ಇಲ್ಲದಿದ್ದರೆ ತಾಲ್ಲೋಕಿನ ಕಾಂಗ್ರೆಸ್ ಮುಖಂಡರು ಗಳನ್ನು ಭೇಟಿ ಮತ್ತು ಸಂಪರ್ಕ ಮಾಡಲು ಸಾಧ್ಯವಾಗುವುದಿಲ್ಲ ಎನ್ನುವ ಒಂದು ಉದ್ದೇಶ ಇದರಲ್ಲಿ ಇರಬಹುದೆಂದು ಹೇಳಬಯಸುತ್ತೇನೆ. ಏಕೆಂದರೆ ಯಾವ ಹಳ್ಳಿಗೆ ಹೋದರೂ ಕೂಡ ಈ ಎನ್.ಇ.ಎಸ್. ನವರು ಒಂದು ದೊಡ್ಡ ಸಾಹಸವಾದ ಕೆಲಸ ಮಾಡಿದ್ದಾರೆಂದರೆ, ಒಂದು ಜಾರು ಬಂಡೆ. ಅಲ್ಲಿಯ ಮಕ್ಕಳ ಚೆಡ್ಡಿಗಳು ಹರಿದುಹೋಗುವುದಕ್ಕೆ ಒಂದು ಉಪಯೋಗವನ್ನು ಈ ಎನ್.ಇ.ಎಸ್. ಇಲಾಖೆಯವರು ಮಾಡಿದ್ದಾರೆ. ಯಾವ ಹಳ್ಳಿಗೆ ಹೋದರೂ ಸಹ ರೈತರ ಮಕ್ಕಳು ಈ ಜಾರುಬಂಡೆಯಲ್ಲಿ ಜಾರಿ ಚಡ್ಡಿಗಳನ್ನು ಹರಿದುಕೊಂಡಿರುವುದನ್ನು ನೋಡಬಹುದು. ಇದು ಈ ಎನ್.ಇ.ಎಸ್.ನಲ್ಲಿ ಆಗಿರ ತಕ್ಕಂಥ ಮಹತ್ತರವಾದ ಸಾಧನೆ. ಈ ರೀತಿಯಾಗಿ ಪಂಚಾಯಿತಿಗಳು, ಪಂಚಾಯಿತಿ ಕಾರ್ಯದರ್ಶಿಗಳು ದೇಶದಲ್ಲೆಲ್ಲಾ ಜಾಸ್ತಿಯಾಗುತ್ತಿವೆ. ಎಷ್ಟು ಪಂಚಾಯಿತಿಗಳು ಕೆಲಸ ಮಾಡುತ್ತಿವೆ, ಎಷ್ಟು ಪಂಚಾಯಿತಿಗಳು ಮೀಟಿಂಗ್ ನಡೆಸುತ್ತಿದ್ದಾರೆ, ಎಷ್ಟು ಪಂಚಾಯಿತಿ ಕಾರ್ಯದರ್ಶಿಗಳು ಸಮರ್ಪಕ ವಾಗಿ ತಮ್ಮ ಕೆಲಸವನ್ನು ನಡೆಸುತ್ತಿದ್ದಾರೆ ಅನ್ನತಕ್ಕಂಥ ವರದಿಯನ್ನಾಗಲೀ, ಅಂಕಿ ಅಂಶಗಳನ್ನಾಗಲೀ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಬೇಡಿಕೆಗಳನ್ನು ಮಂಡಿಸುವುದಕ್ಕೆ ಮೊದಲೇ ಕೊಟ್ಟಿದ್ದರೆ ಬಹುಶಃ ಬಹಳ ಉಪಯೋಗವಾಗುತ್ತಿತ್ತು ಎಂದು ಭಾವಿಸುತ್ತೇನೆ.

3-00 P.M.

ಒಂದು ಪಂಚಾಯಿತಿಯಲ್ಲಿ ಕಂದಾಯದ ವಸೂಲನ್ನು ಮಾಡತಕ್ಕಂಥ ಕಾರ್ಯವನ್ನು ಒಬ್ಬ ಪಂಚಾಯಿತಿ ಕಾರ್ಯದರ್ಶಿಗೆ ವಹಿಸಿದ್ದೀರಿ. 100-150 ರೂಪಾಯಿ ಕಂದಾಯ ವಸೂಲು

ಮಾಡುವುದಕ್ಕೆ ಅವನಿಗೆ ನೀವು ತಿಂಗಳಿಗೆ 100 ರೂಪಾಯಿ ಹಣ ಕೊಡುತ್ತಿದ್ದೀರಿ. 100 ರೂಪಾಯಿ ನಂತೆ ಲೆಕ್ಕ ಹಾಕಿದರೆ ವರ್ಷಕ್ಕೆ 1200 ರೂಪಾಯಿ ಸಂಬಳವನ್ನು ಕಾರ್ಯದರ್ಶಿಗಳಿಗೆ ಕೊಡುತ್ತಾ ಇದ್ದೀರಿ. ಅವನು ಮಾಡತಕ್ಕ ಕೆಲಸ 90 ಅಥವಾ 100 ರೂಪಾಯಿ ವಸೂಲು ಮಾಡುವುದು. ಈ ಕೆಲಸವನ್ನು ಕೂಡ ಮಾಡದೇ ಇರತಕ್ಕ ಪಂಚಾಯಿತಿ ಕಾರ್ಯದರ್ಶಿಗಳು ದೇಶದಲ್ಲಿ ಎಷ್ಟು ಜನ ಇದ್ದಾರೆ ಎನ್ನತಕ್ಕ ವಿವರಣೆಯನ್ನು ಈ ಸಭೆಯಲ್ಲಿ ಕೊಡಬೇಕು. ಕಾರ್ಯದರ್ಶಿಗಳು ಬೆಳಗ್ಗೆ ಎದ್ದರೆ ಅವರು ಮಾಡತಕ್ಕ ಕೆಲಸಗಳು ಮತ್ತು ಕಾರ್ಯ ಎಷ್ಟರ ಮಟ್ಟಿಗೆ ಇದೆ, ಪಂಚಾಯಿತಿ ಮಟ್ಟದಲ್ಲಿ ಯೋಜನೆಗಳು ಯಶಸ್ವಿಯಾಗುವಂತೆ ಮಾಡಿದ್ದಾರೆಯೇ ಎಂದರೆ ಪಂಚಾಯಿತಿ ಕಾರ್ಯದರ್ಶಿಗಳ ಮೇಲೆ ಹಣದ ದುರುಪಯೋಗ ನೂರಾರು ಮೊಕದ್ದಮ್ಮೆಗಳ ನಿದರ್ಶನಗಳನ್ನು ನನ್ನ ತಾಲ್ಲೂಕು ಮಟ್ಟದಲ್ಲಿ ನಾನು ಕೊಡಬಲ್ಲೆ. ಈ ರೀತಿಯಾಗಿ ನಮ್ಮ ಹಳ್ಳಿ ಉದ್ಧಾರ, ಈ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳನ್ನು ನೇಮಕ ಮಾಡುವುದರಿಂದಾಗಲಿ, ಎನ್.ಇ.ಎಸ್. ಯೋಜನೆಗಳಿಂದಾಗಲೀ, ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಗಳಿಂದಾಗಲೀ ಆಗುತ್ತಾ ಇಲ್ಲ ಮತ್ತು ಅಲ್ಲಿ ಕೆಲಸಗಳು ಯಶಸ್ವಿಯಾಗಿ ನಡೆಯುತ್ತಾ ಇಲ್ಲ. ಈ ಗ್ರಾಮ ಪಂಚಾಯಿತಿ ಉದ್ಧಾರ ಆಗಬೇಕಾದರೆ, ಪಂಚಾಯಿತಿ ಮಟ್ಟದಲ್ಲಿ ಯೋಜನೆಗಳನ್ನು ಹಾಕಬೇಕು. ರೈತನಿಗೆ ಅನುಕೂಲವನ್ನು ಒದಗಿಸಿಕೊಡುವ ಉದ್ದೇಶದಿಂದ ಪಂಚಾಯಿತಿ ಮಟ್ಟದಲ್ಲಿ ಹಾಕಿದ ಯೋಜನೆಗಳಿಗೆ ಬೇಕಾದ ಹಣವನ್ನು ಪಂಚಾಯಿತಿಗಳಿಗೆ ನೇರವಾಗಿ ಕೊಟ್ಟು ಕೆಲಸ ಆಗುವಂತೆ ಮಾಡಿದರೆ ಬಹಳ ಒಳ್ಳೆಯದು. ಆದರೆ ಒಂದು ಪಂಚಾಯಿತಿಗೆ ಕೊಡಬೇಕಾದಂಥ ಹಣವನ್ನು ನಾವು ಅನೇಕ ಏಜೆಂಟರುಗಳ ಮೂಲಕ ಕೊಡುತ್ತಾ ಹೋದರೆ ಅದರಿಂದ ಉಪಯೋಗವಿಲ್ಲ. ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ, ಎಷ್ಟು ಯೋಜನೆಗಳನ್ನು ಯಶಸ್ವಿಯಾಗಿ ಮಾಡಿದ್ದಾರೆ ಎನ್ನುವ ಅಂಕಿ ಅಂಶಗಳನ್ನು ತಾವು ಸಭೆಯಲ್ಲಿ ಇಡಿ. ಸುಮಾರು 150 ಹಳ್ಳಿ ಇರತಕ್ಕ ತುಮಕೂರು ತಾಲ್ಲೂಕಿನಲ್ಲಿ 70-75 ಹಳ್ಳಿಗಳಲ್ಲಿ ಕುಡಿಯುವ ನೀರಿನ ಪ್ರಶ್ನೆ ಇದೆ. ಕುಡಿಯುವ ನೀರು ಒದಗಿಸದೇ ಇರುವ ಪರಿಸ್ಥಿತಿ ಇದೆ. 1948—49ನೆಯ ಇಸವಿಯಲ್ಲಿ ಪ್ರಾರಂಭವಾದಂಥ ಕುಡಿಯುವ ನೀರಿನ ಬಾವಿ ಕೆಲಸ 1966ನೇ ಇಸವಿಗಾದರೂ ಕೂಡ, ಇದುವರೆಗೂ ಆ ಬಾವಿಗಳಿಂದ ನೀರನ್ನು ಒದಗಿಸ ತಕ್ಕಂಥ ಕೆಲಸವಾಗಿದಿಲ್ಲ. ಆದರೆ ಮಾನ್ಯ ಅರ್ಥಿಕಮಂತ್ರಿಗಳು ಹೇಳಿದರು. ಗ್ರಾಮಾಂತರ ಪ್ರದೇಶ ದಲ್ಲಿ ಕುಡಿಯುವ ನೀರನ್ನು ಒದಗಿಸುತ್ತೇವೆ. ಕುಡಿಯುವ ನೀರಿನ ಯೋಜನೆಯನ್ನು, ಕೇಂದ್ರದಿಂದ ಹಣವನ್ನು ಪಡೆದು ಮಾಡುತ್ತೇವೆಂದು. ಆದರೆ ಈ ವರ್ಷದ ಮುಂಗಡ ಪತ್ರ ನೋಡಿದಾಗ ನಮಗೆ ಬಹಳ ಆಶ್ಚರ್ಯವಾಯಿತು, ಕುಡಿಯುವ ನೀರಿನ ಯೋಜನೆಯ ಅನುಕೂಲ ನಮ್ಮ ಹಳ್ಳಿಯವರಿಗೆ ಸಿಗತಕ್ಕಂಥ ಅವಕಾಶ ಇಲ್ಲ ಎನ್ನತಕ್ಕದ್ದನ್ನು ನೋಡಬಹುದಾಗಿತ್ತು. ಮೈಸೂರು ರಾಜ್ಯದಲ್ಲಿ ಪಂಚಾಯಿತಿಗಳಿಗೆ ಅಧಿಕಾರವನ್ನು ಕೊಡುವ ಬಗ್ಗೆ ಒಂದು ದೊಡ್ಡ ಕಮಿಟಿಯನ್ನು ತಾವು ಮಾಡಿದಿರಿ. ಆ ಕಮಿಟಿಯಲ್ಲಿ ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ಕೊಂಡಜ್ಜಿ ಬಸಪ್ಪನವರು ಮತ್ತು ಈ ಸಭೆಯ ಅನೇಕ ಮಾನ್ಯ ಸದಸ್ಯರು ಇದ್ದರು. ಅದಕ್ಕೆ ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡಿದಿರಿ. ಈ ಮಸೂದೆಯನ್ನು ತರಬೇಕಾದ ಕಾಲಕ್ಕೆ ಆ ವರದಿ ಈ ಸಭೆಯಲ್ಲಿ ಚರ್ಚೆ ಮಾಡುವು ದಕ್ಕೂ ಕೂಡ ಬರಲಿಲ್ಲ. ಇದಕ್ಕೆ ಕಾರಣ ಬಹುಷಃ ಉಪಮಂತ್ರಿಗಳಿಗೂ ಈಗಿನ ಆರ್ಥಿಕ ಮಂತ್ರಿ ಗಳಿಗೂ ಇರತಕ್ಕಂಥ ಜಿಜ್ಞಾಸೆಯೋ, ಅಥವಾ ತಮ್ಮಲ್ಲಿ ಇರತಕ್ಕ ಒಡಕೋ, ಅಥವಾ ಹಳ್ಳಿಯವರಿಗೆ ಅಧಿಕಾರ ಕೊಡಬಾರದು ಎಂದೋ ಅಥವಾ ಕಾಂಗ್ರೆಸ್ಸಿನ ನೀತಿಯೋ ? ಅಂತೂ ಇಂತೂ ಪಂಚಾಯಿತಿ ಅಭಿವೃದ್ಧಿ ಮತ್ತು ರೈತನ ಏಳಿಗೆ ಇದರಿಂದ ಕುಂಠಿತವಾಗಿದೆ. ಪಂಚಾಯಿತಿಗಳಿಗೆ ಅಧಿಕಾರ ಕೊಡತಕ್ಕದ್ದು ನಿಮಗೆ ಇಷ್ಟ ಮತ್ತು ಆಶೆ ಇದ್ದಿದ್ದರೆ, ಬಹುಶಃ ಅನೇಕ ಕೆರಿಗೆಗಳ ಮಸೂದೆಗಳನ್ನು ಆತುರಾತುರವಾಗಿ ತರುವ ಸಂದರ್ಭದಲ್ಲಿ ಈ ಪಂಚಾಯಿತಿ ಬಿಲ್ಲನ್ನು ಏತಕ್ಕೋಸ್ಕರ ಸಭೆಯ ಮುಂದೆ ಇಟ್ಟಿಲ್ಲ ಎಂದು ಪ್ರಶ್ನೆ ಮಾಡುತ್ತೇನೆ.

Sri K. PUTTASWAMY (Minister for Development and Co-operation).—May I bring to the notice of the Hon'ble House that a Bill was introduced in this House, discussed and referred to Joint Select Committee. The Bill as recommended by the Joint Select Committee has been presented to this House.

ಶ್ರೀ ಕೆ. ಲಕ್ಕಪ್ಪ.—ಇಷ್ಟು ಹೊತ್ತಿಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಜಿಲ್ಲಾ ಪರಿಷತ್ ಮಟ್ಟದಲ್ಲಿ, ಮತ್ತು ತಾಲ್ಲೂಕು ಬೋರ್ಡುಗಳ ಮಟ್ಟದಲ್ಲಿ ಚುನಾವಣೆ ಆಗಬೇಕಾಗಿತ್ತು. ತುರ್ತು ಪರಿಸ್ಥಿತಿಯ ನೆಪದಲ್ಲಿ ನಮ್ಮ ಪ್ರಜಾಪ್ರಭುತ್ವದ ಅಡಿಪಾಯವನ್ನು ಸಡಿಲಗೊಳಿಸತಕ್ಕ ನೀತಿಯನ್ನು ಏತಕ್ಕೆ ಕಾಂಗ್ರೆಸ್ಸಿನವರು ಅನುಸರಿಸುತ್ತಿದ್ದೀರಿ ಎಂದು ಪ್ರಶ್ನೆ ಮಾಡುತ್ತೇನೆ. ಏತಕ್ಕೋಸ್ಕರ

(ಶ್ರೀ ಕೆ. ಲಕ್ಕಪ್ಪ)

ತಾಲ್ಲೂಕು ಬೋರ್ಡ್, ಜಿಲ್ಲಾ ಪರಿಷತ್ ಮತ್ತು ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಮುಂದುವರಿಸಿದ್ದೀರಿ ? ಅದರ ಔಚಿತ್ಯ ಏನು ಎಂದು ಈ ಸಭೆಗೆ ಹೇಳಬೇಕು. ಸ್ವಾಮಿ, ಈ ದೇಶದಲ್ಲಿ ಪ್ರಜಾಪ್ರಭುತ್ವ ಬೆಳೆಯಬೇಕು. ಪ್ರಜಾಪ್ರಭುತ್ವ ಬೆಳೆಯಲಿಕ್ಕೆ ಬಹುಶಃ ಅಡ್ಡಿ ಅತಂಕಗಳನ್ನು ತಂದೊಡ್ಡಿದರೆ ಬಂಗಾಳದಲ್ಲಿ ಅದಂಥ ಪರಿಸ್ಥಿತಿ ತಾವು ನೆನಸಿಕೊಳ್ಳಬಹುದು. ಅರೀತಿ ಕ್ರಾಂತಿ ಕಾರಕ ಚಳುವಳಿಗಳು ದೇಶದಲ್ಲಿ ನಡೆಯಬೇಕಾಗುತ್ತದೆ. ಚುನಾವಣೆಗಳನ್ನು ಮುಂದೂಡಿ, ಚುನಾವಣೆಗೆ ಮಹತ್ವ ಕೊಡದೇ ಹೋದರೆ ಈ 1967ರಲ್ಲಿ ನೀವು ಯಾವ ಚುನಾವಣೆಗಳನ್ನು ನಡೆಸುತ್ತೀರಿ ಎಂದು ಪ್ರಶ್ನೆ ಮಾಡುತ್ತಾ ಇದ್ದೇನೆ. ಸಣ್ಣಸಣ್ಣ ಚುನಾವಣೆಗಳನ್ನು ರಾಜ್ಯದಲ್ಲಿ ಮಾಡಲು ಅಶಕ್ತತೆ ಹೊಂದಿದಂಥ ಜನ ಈ ಮಹಾಚುನಾವಣೆಗಳನ್ನು 1967ನೇ ಇಸವಿಯಲ್ಲಿ ಯಾವರೀತಿ ನಡೆಸುತ್ತೀರಿ ಎನ್ನುವ ಅನುಮಾನ ನನಗಂತೂ ಕೂಡ ಬಂದಿದೆ. ಏಷ್ಯ ಖಂಡದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ ಇಂಡಿಯಾ ದೇಶದಲ್ಲಿ ಪ್ರಜಾಪ್ರಭುತ್ವ ಇರುವಂತೆ ನೋಡಬೇಕು. ನಮ್ಮ ಸುತ್ತ ಮುತ್ತ ರಾಜ್ಯದಲ್ಲಿ ನಡೆಯುತ್ತಾ ಇರುವ ಕ್ರಾಂತಿಕಾರಕ ಬದಲಾವಣೆಗಳ ಕಾರಣ, ಪ್ರಜಾಪ್ರಭುತ್ವಕ್ಕೆ ಮನ್ನಣೆ ಸಿಕ್ಕದೇ ಇರುವ ಕಾರಣ ಅಲ್ಲಿ ಡಿಕ್ಟೇಟರ್‌ಷಿಪ್ ಬರುತ್ತಾ ಇದೆ. ಇಲ್ಲೂ ಕೂಡ ನೀವು ಯಾವ ಪ್ರಗತಿಯನ್ನೂ ದೇಶದಲ್ಲಿ ನಡೆಸಲಿಲ್ಲ. ಆಹಾರದ ಪರಿಸ್ಥಿತಿಯನ್ನು ಬದಲಾವಣೆ ಮಾಡಿಲ್ಲ. ದೇಶದಲ್ಲಿ ಅನ್ನವನ್ನು ಜನಕ್ಕೆ ಕೊಡಲಿಲ್ಲ, ನೀರನ್ನು ಜನಕ್ಕೆ ಕುಡಿಸಲಿಲ್ಲ. ಈ ಮೂಲಭೂತವಾದಂಥ ಸಾಮಾನ್ಯ ಪ್ರಶ್ನೆಗಳಿಗೋಸ್ಕರ ಜನ ಕ್ರಾಂತಿಯನ್ನು ಮಾಡಬೇಕಾದಂಥ ಪರಿಸ್ಥಿತಿಗೆ ನೀವು ಎಡೆಕೊಡಬಾರದು. ಆದುದರಿಂದ ಪಂಚಾಯಿತಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಚುನಾವಣೆಗಳು ನಡೆಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಜನಕ್ಕೆ ನೀರು ಕುಡಿಸುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಜನಕ್ಕೆ ನೀರು ಕುಡಿಸುವುದಿಲ್ಲ. 80 ಹಳ್ಳಿಗಳಲ್ಲಿ ನೀರಿನ ಬಾವಿಗಳು ಇಲ್ಲ ಎಂದು ಹೇಳಿದ್ದೀರಿ. ಆದ್ದರಿಂದ ಅವರಿಗೆ ನೀರು ಕುಡಿಸಲಿಲ್ಲ. ನೀವು ಅಧಿಕಾರಕ್ಕೆ ಬಂದ ಮೇಲೆ ಬಾವಿಗಳು ಬತ್ತಿ ಹೋದವು. ಆಹಾರ ಇಲ್ಲದ ಹಾಗಾಯಿತು. ಬಟ್ಟೆ ಇಲ್ಲದ ಹಾಗಾಯಿತು. ಬಹುಶಃ ನೀವು ಗಾಳಿಯನ್ನು ಕಂಟ್ರೋಲ್ ಮಾಡುತ್ತೀರಾ ಎನ್ನುವ ಅನುಮಾನ ಬಂದಿದೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಮಾಡತಕ್ಕಂಥ ಕೆಲಸ ಸಮರ್ಪಕವಾಗಿ ನಡೆಯದೆ ಇರುವುದರಿಂದ, ಇದನ್ನು ಮೊಟ್ಟ ಮೊದಲು ರದ್ದು ಮಾಡಬೇಕು. ಆಡಳಿತ ವಿಕೇಂದ್ರೀಕರಣ ಆಗಬೇಕಾದರೆ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್ ಮಟ್ಟದಲ್ಲಿ ಚುನಾಣೆ ಅತಿ ಶೀಘ್ರವಾಗಿ ನಡೆಯಬೇಕು, ಅಧಿಕಾರಿಗಳಿಗೆ ಕೊಟ್ಟಿರತಕ್ಕಂಥ ಜೀಪುಗಳನ್ನು ವಾಪಸು ತೆಗೆದುಕೊಳ್ಳಬೇಕು ಎಂದು ಹೇಳಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಮಾನ್ಯ ಸಭಾಪತಿಗಳೇ, ಇಂದು ನಮ್ಮ ಮುಂದಿರತಕ್ಕಂತಹ ಡಿಮಾಂಡ್ ನಂಬರ್ 21 ಮತ್ತು ಡಿಮಾಂಡ್ ನಂಬರ್ 37ರ ಬಗ್ಗೆ ನನ್ನ ಬೆಂಬಲವನ್ನು ಕೊಡುತ್ತಾ ಕೆಲವು ಸಲಹೆಗಳನ್ನು ನೀಡಲು ಪ್ರಯತ್ನ ಮಾಡುತ್ತೇನೆ. ಸ್ವಾಮಿ, ನಾವು ಇವತ್ತು ನಮ್ಮ ಮುಂದಿಟ್ಟಿರತಕ್ಕಂತಹ ದೇಶದ ತಳಹದಿಯಾಗಿರತಕ್ಕಂತಹ ಗ್ರಾಮಾಭಿವೃದ್ಧಿ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ವಿಷಯದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇದನ್ನು 1958ನೇ ಇಸವಿ ಅಕ್ಟೋಬರ್ 2ನೇ ದಿನ ನಮ್ಮ ರಾಜ್ಯದಲ್ಲಿ ಇದನ್ನು ಫಾರ್ಮು ಮಾಡಿದರು. ಬಹುಶಃ ನಮ್ಮ ಸ್ನೇಹಿತರನೇಕರು ಏನು ಅಭಿಪ್ರಾಯ ಪಡುತ್ತಾರೋ ಹಾಗೆ ನಾವು ಆಲೋಚನೆ ಮಾಡುವುದಾದರೆ, ಬಹುಶಃ ಗ್ರಾಮಾಂತರಗಳಿಗೆ ಅಷ್ಟು ನೇರವಾದ ಸಂಪರ್ಕವಿಟ್ಟುಕೊಂಡು ಕೆಲಸಮಾಡತಕ್ಕಂತದ್ದು ಬೇರೆ ಯಾವುದು ಎನ್ನುವ ಪ್ರಶ್ನೆ ಎದ್ದು ಕಾಣುತ್ತದೆ. ಶ್ರೀಮಾನ್ ಲಕ್ಕಪ್ಪ ನವರು ಭಾಷಣದಲ್ಲಿ ವಿಶದವಾಗಿ ಹೇಳಿದರು, ಜೀಪುಗಳನ್ನು ಬಹಳ ದುರುಪಯೋಗ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದವರು ತಮ್ಮ ಕಾರ್ಯ ಚಟುವಟಿಕೆಗಳಿಗೆ ಉಪಯೋಗಿಸುತ್ತಿದ್ದಾರೆ ಎಂದು. ಬಹುಶಃ ಮಾನ್ಯ ಸ್ನೇಹಿತರ ಕ್ಷೇತ್ರದಲ್ಲಿ ಅವರ ಪಕ್ಷ ಅಧಿಕಾರಕ್ಕೆ ಬರುತ್ತಿದ್ದರೆ, ಅಥವಾ ಬೇರೆ ಕಡೆಗಳಲ್ಲಿ ಅವರ ಪಕ್ಷ ಅಧಿಕಾರಕ್ಕೆ ಬಂದರೆ ಅವರು ಸಹ ಅದನ್ನು ಉಪಯೋಗಿಸುತ್ತಿದ್ದರು ಎಂದು ಕಾಣುತ್ತದೆ. ಅದು ಜನಗಳ ಸೇವೆಗೋಸ್ಕರ ಉಪಯೋಗಿಸುತ್ತಿದ್ದಾರೆ; ವಿನಹ ಅನ್ಯಥಾವಲ್ಲ. ಇದಕ್ಕೆ ಯಾವ ದೃಷ್ಟಿಯನ್ನಾದರೂ ಇಟ್ಟುಕೊಂಡು ಅಪಾದನೆ ಮಾಡಿದರೆ ಅದು ಸರಿಯಲ್ಲ.

ಶ್ರೀ ಕೆ. ಲಕ್ಕಪ್ಪ.—ಲಾಲ್ ಬಹದ್ದೂರ್ ಶಾಸ್ತ್ರಿಯವರು ಜೀಪ್‌ಗಳನ್ನು ವಾಪಸ್ಸು ತೆಗೆದು ಕೊಳ್ಳಬೇಕೆಂದು ಯಾವ ಉದ್ದೇಶದಿಂದ ಹೇಳಿದರು, ಸ್ವಾಮಿ, ಹೇಳುತ್ತೀರಾ ?

ಶ್ರೀ ಕೆ. ವಿ. ಬೈರೇಗೌಡ.—ಶ್ರೀ ಮಹಾತ್ಮ ಗಾಂಧೀಜಿಯವರು ದೇಶದಲ್ಲಿ ಆಡಳಿತವನ್ನು ವಿಕೇಂದ್ರೀಕರಣ ಮಾಡಿ ದೇಶದ ಎಲ್ಲಾ ಭಾಗಗಳಿಗೂ ಸ್ವಾತಂತ್ರ್ಯದ ಶಕ್ತಿಯನ್ನು ಕೊಡ

ಬೇಕೆಂಬ ಘನ ಉದ್ದೇಶವನ್ನು ಮತ್ತು ಆಶೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರು. ಅದನ್ನು ಶ್ರೀ ಜವಾಹರ್‌ಲಾಲ್ ನೆಹ್ರೂರವರು ನೆರವೇರಿಸಿ ಜಾರಿಗೆ ತಂದರು. ಇವತ್ತು ನಾವು ನಮ್ಮ ಗ್ರಾಮಾಂತರ ಪ್ರದೇಶಗಳ ಜನಗಳಿಗೆ ಯೋಗ್ಯವಾದಂತಹ ಜೀವನ ಕಸಬು ಮತ್ತು ಅವರು ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಬೇಕಾದರೆ, ಸಧ್ಯಕ್ಕೆ ನಾವು ಯಾವ ಮಾರ್ಗದಿಂದ ಮುಂದೆ ಹೋಗಬೇಕೆಂಬುದು ಕಾಣತಕ್ಕ ಪ್ರಶ್ನೆ. ಇವತ್ತಿನ ದಿವಸ ಇಡೀ ಪ್ರಪಂಚದಲ್ಲೇ ಯಾವ ರಾಷ್ಟ್ರವಾಗಲೀ, ತನ್ನ ವ್ಯವಸಾಯದ ಅಭಿವೃದ್ಧಿಯಲ್ಲಿ ತನ್ನ ಮೊದಲ ಹಂತದಲ್ಲಿ ಸರಿಯಾಗಿ ಕೆಲಸ ಮಾಡಿದ್ದರಿಂದ ಅವರಿಗೆ ಸಾಕಾದಷ್ಟು ಆಹಾರ ವಗೈರೆಗಳನ್ನು ಬೆಳೆಸಿ ಬೇರೆ ದೇಶಗಳಿಗೆ ಕೊಡುತ್ತಿದ್ದಾರೆ. ಅಂತಹ ಸಂದರ್ಭದಲ್ಲಿ ಇವತ್ತು ನಾವು ಒಂದೇ ಸಾರಿ ನಮ್ಮ ಈ ಬೃಹತ್ ಕೈಗಾರಿಕೆಗಳಿಗೆ ಹೋಗುವ ಮುನ್ನ ನಮ್ಮ ದೇಶದಲ್ಲಿ ಹೆಚ್ಚಿನ ಜನ ಯಾರು ವ್ಯವಸಾಯವನ್ನು ಅವಲಂಭಿಸಿ ನಿರಂತರವಾಗಿ ಜೀವನ ಮಾಡುತ್ತಾರೊ ಮತ್ತು ಗ್ರಾಮಾಭಿವೃದ್ಧಿ ಮತ್ತು ಸಾಮುದಾಯಿಕ ಅಭಿವೃದ್ಧಿ ಯೋಜನೆಗಳನ್ನು ಅವಲಂಬಿಸಿಕೊಂಡು ಇರುವಂತಹ ಜನರಿಗೆ ಅನುಕೂಲಗಳನ್ನು ಕಲ್ಪಿಸುವಂತಾಗಬೇಕು. ಇಲ್ಲದಿದ್ದರೆ ಕಷ್ಟವಾದೀತು. ಈ ನಮ್ಮ ಹೈಬ್ರಿಡ್ ಮೈಜನ್ನು ಉತ್ತಮ ಪಡಿಸುವುದಕ್ಕೋಸ್ಕರ ದೇಶದ ಎಲ್ಲಾ ಕಡೆಗಳಲ್ಲೂ ಎಲ್ಲೆಲ್ಲಿ ನೀರಾವರಿ ಸೌಲಭ್ಯಗಳಿವೆಯೋ, ಅಲ್ಲಿ ತಂದಿದ್ದಾರೆ. 2-3 ವರ್ಷಗಳೊಳಗೆ ಈ ಆಹಾರದ ಕೊರತೆಯನ್ನು ನೀಗಿ ಸ್ವಯಂಪೂರ್ಣತೆಯನ್ನು ಹೊಂದುವುದಕ್ಕೆ ಯಾವ ತರದ ಭಯವೂ ಇಲ್ಲ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ. ಇವತ್ತಿನ ದಿವಸ ನಾವು ಏನೂ ಜಿಗುಪ್ಸೆ ಪಡಬೇಕಾದ್ದಿಲ್ಲ. ನಾನು ಒಬ್ಬ ರೈತನಾಗಿ ಹೇಳುತ್ತೇನೆ, ಈ ವರ್ಷದ ಬೆಳೆಗಳಿಗೆ ದೈವವಶಾತ್ ಏನೋ ಚೆನ್ನಾಗಿ ಬೆಳೆ ಇದೆ. ಬರುವ ವರ್ಷ ಇನ್ನೂ ಹೆಚ್ಚಿನ ಬೆಳೆ ಬೆಳೆಯುವುದರಿಂದ ಬೆಲೆಯು ಕುಸಿದು ಬೀಳುವ ಸಂಭವವಿದೆ. ಅದಲ್ಲದೆ ತುಂಗಭದ್ರಾ ಜಲಾಶಯದಲ್ಲಿ ಸುಮಾರು ಒಂದು ಲಕ್ಷ ಎಕರೆಯಲ್ಲಿ ಬೆಳೆಯುತ್ತಿದ್ದಾರೆ ಅದಕ್ಕೆ ಸರ್ಕಾರದವರು ಈ ಬೆಲೆಯು ಕುಸಿದು ಬೀಳದಂತೆ ತ್ವರಿತವಾಗಿ ಗಮನ ಕೊಟ್ಟು ತಕ್ಕ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ನಾನು ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಈಗ ತುಂಗಭದ್ರಾ ಪ್ರೊಜೆಕ್ಟ್ ಪ್ರದೇಶದಲ್ಲಿ ವ್ಯವಸಾಯ ಮಾಡುವುದಕ್ಕೆ ರೈತರಿಗೆ ಹಣವನ್ನಾಗಲೀ, ಬುಲ್‌ಡೋಜರ್‌ನ್ನಾಗಲೀ ಒದಗಿಸಿದ್ದೀರಾ? ನೀರೆಲ್ಲ ವ್ಯರ್ಥ ಆಗುತ್ತಿದೆ ಅಲ್ಲವೇ?

ಶ್ರೀ ಕೆ. ವಿ. ಬೈರೆಗೌಡ.—ಈಗಾಗಲೇ ಲಕ್ಷಾಂತರ ರೂಪಾಯಿಗಳ ಫರ್ಟಿಲೈಸರ್ ಕೊಟ್ಟಿದ್ದಾರೆ. ಯಾವುದು ಬೇಕು ಅದನ್ನು ಸಪ್ಲೈ ಮಾಡುತ್ತಾರೆ.

ಮತ್ತೊಂದು ಬಹು ವ್ಯಸನಕರವಾದ ಸಂಗತಿ ಎಂದರೆ, ಈ ವಿಕೇಂದ್ರೀಕರಣವಾದ ಮೇಲೆ ಪಂಚಾಯಿತಿ ಆಡಳಿತ ನಾವು ನಿರೀಕ್ಷಣೆ ಮಾಡಿದಷ್ಟು ರೀತಿಯಲ್ಲಿ ಆಗಲಿಲ್ಲ ಎಂದರೆ ತಪ್ಪಾಗಲಾರದು. ಬಹುಶಃ ಇದಕ್ಕೆ ಕಾರಣವೇನೆಂದರೆ, ಇವತ್ತಿನ ದಿವಸ, ಈ ಪಂಚಾಯಿತಿಗೂ, ಮತ್ತು ನಮ್ಮ ತಾಲ್ಲೂಕು ಬೋರ್ಡಿಗೂ ಯಾವ ಒಂದು ಕೋರಿಡಿನೇಶನ್ ಇಲ್ಲ. ಆಡಳಿತ ಯಂತ್ರದಲ್ಲಿ ಸಮಾರ್ಪಕತೆ ಇಲ್ಲದಂತೆ ಕಾಣುತ್ತದೆ. ಇವತ್ತಿನ ದಿವಸ ನಮಗೇನೂ ತೃಪ್ತಿಕರವಾಗಿಲ್ಲ. ಅಲ್ಲಿ ಸೆಕ್ರೆಟರಿ ಇಲ್ಲದೆ, ಮತ್ತು ಸರ್ಕಾರ ಹಣ ಒದಗಿಸದೆ ಇದ್ದುದರಿಂದಲೂ ಇಂತಹ ತೊಂದರೆಗಳಿಗೆ ಕಾರಣವಾಗಿದೆ. ಹಿಂದೆ 2-3 ಸಾರಿ ಮಾನ್ಯ ಮಂತ್ರಿಯವರು ಆಶ್ವಾಸನೆ ಕೊಟ್ಟರೇನೆಂದರೆ, ದೇಶದ ಪೂರ್ತಿಯಾದ ಭೂಕಂದಾಯ ಪಂಚಾಯಿತಿ ಸಂಸ್ಥೆಗಳಿಗೆ ಕೊಡಬೇಕು, ಅಲ್ಲಿಯ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಇತ್ಯಾದಿಗಳನ್ನು ಹೇಳಿದ್ದರು. ಈ ರೀತಿ ಮಾಡಿ ಅಧಿಕಾರಿಗಳು ಉತ್ಸಾಹದಿಂದ ತಾಲ್ಲೂಕು ಮಂಡಲಿಯಲ್ಲಿ ಕೆಲಸ ಮಾಡುವಂತೆ ಮಾಡಬೇಕು. ಅದರಿಂದ ತಾಲ್ಲೂಕು ಬೋರ್ಡಿಗೆ ಬರತಕ್ಕಂತಹ 4-6 ಕೋಟಿ ರೂಪಾಯಿಗಳನ್ನು ಪೂರ್ತಿಯಾಗಿ ಕೊಟ್ಟರೆ, ಪಂಚಾಯಿತಿ ಆಡಳಿತವು ಪೂರ್ತಿಯಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನ ದಿವಸ ತಾಲ್ಲೂಕ್ ಬೋರ್ಡಿನ ಕೆಲಸಕಾರ್ಯಗಳನ್ನು ಇಡೀ ಸಂಸ್ಥಾನಾದ್ಯಂತ ಪರಿಶೀಲನೆ ಮಾಡಿದರೆ ಅದು ಎಲ್ಲಾ ಕಡೆಗಳಲ್ಲೂ ಚೆನ್ನಾಗಿ ಕೆಲಸ ಮಾಡಿದೆ. ನಮ್ಮ ಪ್ರಜಾಪ್ರಭುತ್ವದಲ್ಲಿ ಜನತೆಯಲ್ಲಿ ಸಂಪರ್ಕವನ್ನು ಇಟ್ಟುಕೊಂಡು ಕೆಲಸ ಮಾಡತಕ್ಕಂತಹ ಒಂದು ಏಜನ್ಸಿಯಾಗಿದೆ. ಈಗಿನ ತಾಲ್ಲೂಕು ಬೋರ್ಡಿನ ಹಣದ ಪರಿಸ್ಥಿತಿಯು ಅಷ್ಟಾಗಿ ಸರಿಯಾಗಿಲ್ಲ. ಸಿಬ್ಬಂದಿಗೇನೆ 68-70 ಪರಸೆಂಟ್ ಖರ್ಚಾಗುತ್ತದೆ.

ಬಾಕಿ ಉಳಿದ ಹಣ ಅಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ಸಾಲದೆ ಹೋಗುತ್ತದೆ. ಅದಕ್ಕೆ ಸರಿಯಾಗಿ ಹಣ ಬರುವಂತೆ ಮಾಡಿದರೆ ಅಲ್ಲಿನ ಅಭಿವೃದ್ಧಿ ಕೆಲಸ ಕಾರ್ಯಗಳು ಏನೂ ತೊಂದರೆಯಿಲ್ಲದೆ ಆಗುವುದು ಮತ್ತು ಇದರಿಂದ ನಾವು ಏನು ಕೆಲಸ ನಿರೀಕ್ಷಣೆ ಮಾಡಿದೆವೋ. ಅದನ್ನು ಮಾಡಬಹುದು.

(ಶ್ರೀ ಕೆ. ವಿ. ಬೈರೇಗೌಡ)

ಇನ್ನೊಂದು ವಿಚಾರ ಹೇಳುವುದಾದರೆ, ಈ ತಾಲ್ಲೂಕ್ ಬೋರ್ಡು ಆಡಳಿತದಲ್ಲಿ ಇಂಡಸ್ಟ್ರೀಸ್ ಎಕ್ಸ್‌ಟೆನ್‌ಶನ್ ಆಫೀಸರ್ಸ್ ಮತ್ತು ಸೋಶಿಯಲ್ ವೆಲ್‌ಫೇರ್ ಆರ್ಗನೈಸರ್ಸ್ ಆಗಿ ಇರುವಂತಹ ಮಹಿಳೆಯರು, ಮತ್ತು ಮಹನೀಯರನ್ನು ತೆಗೆದು ಅದರ ಹಣವನ್ನು ನಾವು ನಮ್ಮ ಬೇರೆ ಅಭಿವೃದ್ಧಿ ಕೆಲಸಗಳಿಗೆ ಮೊದಲನೆಯದಾಗಿ ಉಪಯೋಗಿಸಿದರೆ, ಎಷ್ಟೋ ಅನುಕೂಲಗಳನ್ನು ಮಾಡಬಹುದು. ಮತ್ತು ನಾವು ಯಾವುದನ್ನಾದರೂ ಬೆಳೆಸುವುದಕ್ಕೆ ಮುಂಚಿತವಾಗಿ, ಯಾವುದಕ್ಕೆ ಪ್ರಿಯೋರಿಟಿ ಕೊಡಬೇಕು, ನಮಗೆ ಯಾವುದರ ಕೊರತೆ ಇದೆ, ಯಾವುದು ನಮಗೆ ಸಾಲದೆ ಇದೆ ಇತ್ಯಾದಿಗಳನ್ನು ನೋಡಿಕೊಂಡು ನಮ್ಮ ಕೆಲಸಕಾರ್ಯಗಳನ್ನುಮಾಡಿದರೆ, ಅದನ್ನು ನಾವು ನಿಜವಾಗಿಯೂ ನಿವಾರಿಸ ಬಹುದು ಮತ್ತು ಆ ಕೊರತೆಯನ್ನು ಹೋಗಲಾಡಿಸಬಹುದು. ಇವತ್ತು ನಮಗೆ ಮುಖ್ಯವಾಗಿ ಬೇಕಾದಂತಹ ವ್ಯವಸಾಯದ ಕಡೆಗೆ ಪ್ರಾಮುಖ್ಯತೆಯನ್ನು ಕೊಟ್ಟು, ನಮ್ಮ ಎಗ್ರಿಕಲ್ಚರಲ್ ಎಕ್ಸ್ಟೆನ್‌ಶನ್ ಆಫೀಸರು ಯಾರಿದ್ದಾರೆ, ಅವರು ಸಾಲದಿದ್ದರೆ, ಇನ್ನೂ ಒಬ್ಬರನ್ನೂ ನೇಮಕ ಮಾಡಿ ಕೊಂಡು, ಅವರಿಗೆ ಬೇಕಾದ ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟು ರೈತಾಪಿ ಜನರಿಗೆ ಅನುಕೂಲ ಮಾಡಿಕೊಡುವಂತಾಗಬೇಕು. ನಮ್ಮ ಬೆಂಗಳೂರು ನಾರ್ತ್ ತೆಗೆದುಕೊಂಡರೆ, ಅಲ್ಲಿ ಹೆಚ್ಚು ಕೈಗಾರಿಕೆಗಳನ್ನು ಪ್ರಗತಿದಾಯಕವಾಗಿ ಮಾಡಬೇಕೆಂದು ಎಷ್ಟು ಪ್ರಯತ್ನ ಮಾಡಿದರೂ ಇಷ್ಟರ ವರೆಗೆ ಒಂದು ಹೊಸ ಕೈಗಾರಿಕೆಯನ್ನು ಸ್ಥಾಪಿಸಲಾಗಲಿಲ್ಲ. ಮೊದಲು ಏನು ಇದ್ದಿತೋ ಅದೇ ತರಹ ಇಂದೂ ಕೂಡ ಇದೆ. ನಾವು ಮಾತನಾಡತಕ್ಕ ಯಾವ ವಿಷಯವನ್ನಾದರೂ ನಮ್ಮ ಸ್ನೇಹಿತರ ಮುಂದಿಟ್ಟರೆ ಅದರೆಲ್ಲೇನೂ ತಪ್ಪಿಲ್ಲ. ಸ್ಥಳೀಯ ಸಂಸ್ಥೆಗಳು ಚೆನ್ನಾಗಿ ಕೆಲಸ ನಡೆಸಿದರೆ, ಇಡೀ ರಾಜ್ಯವೇ ಅಭಿವೃದ್ಧಿಯಾಗುವುದರಲ್ಲಿ ಯಾವ ಅನುಮಾನವೂ ಇಲ್ಲ.

ಸ್ವಾಮಿ, ಈಗ ಹಣದ ಹಂಚಿಕೆಯನ್ನು ಸ್ವಲ್ಪಮಟ್ಟಿಗೆ ತಾಲ್ಲೂಕು ಬೋರ್ಡಿನಿಂದ ತಾಹ ಸೀಲ್ದಾರವರಿಗೆ ಕೊಟ್ಟಿದ್ದಾರೆ. ಅದನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಕೊಟ್ಟರೆ ನಷ್ಟವೇನೂ ಇಲ್ಲ. ಇದರಿಂದ ಅಭಿವೃದ್ಧಿಯಾಗತಕ್ಕಂತ ಕೆಲಸಗಳು ಬೇಗನೆ ತ್ವರಿತವಾಗಿ ನೆರವೇರಲು ಅನು ಕೂಲವಾಗುತ್ತದೆ. ಏತಕ್ಕೋಸ್ಕರ ತಹಸೀಲ್ದಾರರಿಗೆ ಕೊಟ್ಟಿದ್ದಾರೆ ಎನ್ನುವುದು ಅರ್ಥವಾಗುತ್ತ ಇಲ್ಲ. ಅವರಿಗೆ ಮಾಡುವುದಕ್ಕೆ ಬೇಕಾದಷ್ಟು ಕೆಲಸವಿದೆ. ಆದುದರಿಂದ ಈ ಕೆಲಸವನ್ನು ಜನಗಳಿಗೆ ಹೆಚ್ಚು ಅನುಕೂಲವಾಗುವ ದೃಷ್ಟಿಯಿಂದ ತಾಲ್ಲೂಕು ಬೋರ್ಡುಗಳಿಗೆ ಕೊಡಬೇಕು.

ಪಂಚಾಯಿತಿಗಳ ಮೇಲ್ವಿಚಾರಣೆ ಮೊನ್ನೆ ತಾನೆ ಒಬ್ಬ ಹಿರಿಯ ಅಧಿಕಾರಿ, ಡಿವಿಜನಲ್ ಕಮಿಷನರು ನಮ್ಮ ಗ್ರಾಮಾಂತರಗಳಲ್ಲಿರುವ ಪಂಚಾಯಿತಿಗಳನ್ನು ಇನ್‌ಸ್ಪೆಕ್ಟ್ ಮಾಡುವಾಗ ಬಹಳ ದುಃಖಪಟ್ಟು ಹೇಳಿದರು, ಪಂಚಾಯಿತಿಯ ಕೆಲಸಕಾರ್ಯಗಳನ್ನು ಬೇರೆ ಅಧಿಕಾರಿಗಳು ಯಾರೂ ನೋಡುವ ಗೋಜಿಗೇ ಹೋಗಿಲ್ಲ ಎಂದು. ಪಂಚಾಯಿತಿಗಳಲ್ಲಿ ಇರಬೇಕಾದ ವ್ಯವಸಾಯ ಕಮಿಟಿ ಮತ್ತು ಇತರೆ ಕಮಿಟಿಗಳನ್ನು ಯಾವ ಪಂಚಾಯಿತಿಯವರೂ ಸರಿಯಾಗಿ ಫಾರಂ ಮಾಡಿಲ್ಲ ಪಂಚಾಯಿಗಳ ಸದಸ್ಯರೇ ಬಾಕಿ ಇರುವ ಸನ್ನಿವೇಶಗಳೂ ಇವೆ. ಪಂಚಾಯಿತಿ ಸದಸ್ಯರು ಬಾಕಿ ಇರುವುದಾದರೆ ಅವರು ಆ ಸ್ಥಾನದಲ್ಲಿರುವುದಕ್ಕೆ ಅರ್ಹರಲ್ಲ. ಅತನನ್ನು ತೆಗೆಯುವುದಕ್ಕೆ ಸೆಕ್ರೆಟರಿ ಅಥವಾ ಚೇರ್‌ಮನ್ ಆದವರು ಮುಂದೆ ಬರಬೇಕು. ಇದರಲ್ಲಿ ಬಹಳ ಕಷ್ಟವಾಗುತ್ತದೆ. ಇಂಥ ಸನ್ನಿವೇಶಗಳಲ್ಲಿ ಬಿ. ಡಿ. ಒ. ಆದವರು ಸಿಫಾರಸು ಮಾಡಿ ಸದಸ್ಯ ಸ್ಥಾನದಲ್ಲಿರಲು ಆತ ಅರ್ಹನಲ್ಲ ಎಂದು ಕೂಡಲೇ ತೆಗೆಸುವುದಕ್ಕೆ ಪ್ರಯತ್ನ ಮಾಡಬೇಕು. ಅಥವಾ ಬಾಕಿ ಇರುವ ಹಣದ ವಸೂಲಿ ಕ್ರಮವನ್ನು ಮಾಡಬೇಕು. ಎಷ್ಟು ಕಡೆ ನೋಡಿದರೂ ಕೂಡ ಪಂಚಾಯಿತಿಯ ಬಾಕಿಗಳು ಹಾಗೆಯೇ ಉಳಿದಿವೆ. ಇದರ ಕೆಲಸಗಳು ಸುಸೂತ್ರವಾಗಿ ಆಗುವುದಕ್ಕೆ ಸೆಕ್ರೆಟರಿಗಳು ಅತಂಕವಾಗಿದ್ದಾರೆಯೋ ಏನೋ ಎಂದು ಕಾಣುತ್ತದೆ. ಪಂಚಾಯಿತಿಯ ಹಣವನ್ನು ಖರ್ಚು ಮಾಡಬೇಕಾದರೆ ಖಾಸಗಿ ಚೇರ್‌ಮನ್ ಮತ್ತು ಸೆಕ್ರೆಟರಿ ಚೆಕ್ಕಿಗೆ ರುಜು ಮಾಡಬೇಕು. ಪಂಚಾಯಿತಿಗೆ ಆಗತಕ್ಕ ಕೆಲಸಗಳ ಸ್ಕ್ರೂಟಿನಿಗೆ ತಾಲ್ಲೂಕು ಬೋರ್ಡಿಗೆ ಹೋಗಬೇಕು. ಈ ತರಹ ಎರಡು ಮೂರು ಅಡ್ಡಿಗಳಿವೆ. ಇವುಗಳನ್ನು ಸ್ವಲ್ಪ ಸುಲಭವಾಗಿ ಮಾಡಿದರೆ ಪಂಚಾಯಿತಿಯ ಕೆಲಸಕಾರ್ಯಗಳನ್ನು ನಡೆಸುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನ ದಿವಸ ಪಂಚಾಯಿತಿಗಳಿಗೆ ಎಷ್ಟೋ ಜವಾಬ್ದಾರಿ ಯನ್ನು ಕೊಡಿ, ಅವರ ಮೇಲೆ ಹೆಚ್ಚಿನ ಚೆಕಿಂಗ್ ಇಟ್ಟರೆ ಕೆಲಸಕಾರ್ಯಗಳು ಆಗವುದರಲ್ಲಿ ತಡವಾಗು ತ್ತದೆ: ಕೆಲಸ ಮಾಡುವ ಜನರ ಉತ್ಸಾಹ ಕಡಮೆಯಾಗುತ್ತದೆ. ಸ್ಫೂರ್ತಿ ಕಡಿಮೆಯಾಗುತ್ತದೆ ಪಂಚಾಯಿತಿಗಳಲ್ಲಿ ಕೆಲಸಮಾಡುವವರು ಮುಂದೆ ಪ್ರಜಾಪ್ರಭುತ್ವದಲ್ಲಿ ತರಪೇತಿ ಪಡೆದು ತಾಲ್ಲೂಕು ಬೋರ್ಡ್ ಮತ್ತು ಇತರ ಕ್ಷೇತ್ರಗಳಲ್ಲಿ ಬರುವುದಕ್ಕೆ ಅವಕಾಶವಿರುವುದರಿಂದ ಅವರು ಕೆಲಸ ಮಾಡುವಾಗ ಪ್ರಾಮಾಣಿಕವಾಗಿ ಮಾಡತಕ್ಕ ಸನ್ನಿವೇಶವನ್ನು ಅವರಿಗೆ ಒದಗಿಸಿಕೊಡಬೇಕು. ಸೆಕ್ರೆಟರಿಯವರ ತಾಪತ್ರಯ ಬಹುಮಟ್ಟಿಗೆ ಆಗಿದೆ. ಇದರ ನಿವಾರಣೆ ಮಾಡಬೇಕು.

ಕೋ-ಆಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರ್ ಒಬ್ಬರನ್ನು ಬಿಟ್ಟರೆ ಬೇರೆಯವರು ಯಾರೂ ಹೋಗಿ ಸಹಕಾರ ಸಂಘಗಳು ಹೇಗೆ ಕೆಲಸ ಮಾಡುತ್ತವೆ, ಸಹಕಾರ ತತ್ವದ ಮೇಲೆ ಕೆಲಸ ಮಾಡುತ್ತಿವೆಯೇ ಎಂದು ನೋಡುವ ಗೋಜಿಗೇ ಹೋಗುವುದಿಲ್ಲ. ಜಿಲ್ಲಾ ಮಟ್ಟದ ಅಧಿಕಾರಿಗಳು ಇವುಗಳ ಬೆಳವಣಿಗೆ, ಅದರ ಕೆಲಸಕಾರ್ಯಗಳು ಇವುಗಳನ್ನು ನೋಡುವುದಕ್ಕೆ ಹೋಗುವುದಿಲ್ಲ, ಹಿಂದೆ ಇದ್ದ ಸರ್ಕಾರದಲ್ಲಿ ಅಸಿಸ್ಟೆಂಟ್ ಕಮಿಷನರು, ಡೆಪ್ಯುಟಿ ಕಮಿಷನರು ಮತ್ತು ಚೀಫ್ ಸೆಕ್ರೆಟರಿಗಳು ಕೂಡ ಬಂದು ಕೆಲಸಕಾರ್ಯಗಳನ್ನು ವಿಮರ್ಶೆಮಾಡಿ ಏನು ಲೋಪವಿದೆ ಎಂದು ನೋಡಿ ಅದನ್ನು ಸರಿಪಡಿಸತಕ್ಕ ಕಾರ್ಯವನ್ನು ಮಾಡುತ್ತಿದ್ದರು. ಬರುತ್ತ ಬರುತ್ತ ಅದರ ಗೋಜಿಗೆ ಯಾರೂ ಹೋಗುವುದಿಲ್ಲ. ಇದಾಗಬಾರದು. ಅಧಿಕಾರಿಗಳು ತಮ್ಮ ಕೈಕೆಳಗಿನವರ ಮೇಲೆ ಉಸ್ತುವಾರಿಯನ್ನು ಇಟ್ಟುಕೊಂಡರೆ ಕೆಲಸಕಾರ್ಯಗಳು ಉತ್ತಮವಾಗಿ ಆಗುವುದಕ್ಕೆ ಅನುಕೂಲವಾಗುತ್ತದೆ.

ಮಾನ್ಯ ಅರ್ಥ ಮಂತ್ರಿಗಳು ಕುಡಿಯುವ ಬಾವಿಗಳ ವಿಷಯವನ್ನು ಅವರ ಭಾಷಣದಲ್ಲಿ :

> 'ಅನೇಕಾನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲವಾಗಿದೆ. ಈ ಸದನದಲ್ಲಿ ಮಂಡಿಸಿರುವ ಆಯವ್ಯಯ ಪತ್ರದಲ್ಲಿ ಇದರ ಬಗೆಗೆ ನಾನು ಏರ್ಪಾಡೇನೂ ಮಾಡಿಲ್ಲವಾದರೂ, ಈಗ ನೀರಿನ ಸೌಕರ್ಯವಿಲ್ಲದ ಅನೇಕ ಹಳ್ಳಿಗಳಿಗೆ ಈ ಸೌಕರ್ಯವನ್ನು ಒದಗಿಸಲು ಮುಂದಿನ ವರ್ಷದಲ್ಲಿ ಹಣದ ಏರ್ಪಾಡು ಮಾಡಲು ಶಕ್ಯವಿದೆಯೇ ಎಂಬುದನ್ನು ಸರ್ಕಾರದವರು ಪರಿಶೀಲಿಸುವರು'.

ಎಂದು ಹೇಳಿದ್ದಾರೆ. ನಾವು ಎಲ್ಲ ಗ್ರಾಮಗಳಿಗೂ ಮೊದಲನೆಯದಾಗಿ ಕುಡಿಯುವ ನೀರನ್ನು ಕೊಡಬೇಕು. ಹಾಗೆ ಆಶ್ವಾಸನೆಯನ್ನು ಕೊಟ್ಟಂಥ ಸಂದರ್ಭದಲ್ಲಿ ಎಷ್ಟೇ ತೊಂದರೆ ಇರಲಿ, ಎಂಥ ಸಂದರ್ಭವೇ ಇರಲಿ ಆ ಕೆಲಸಕ್ಕೆ ಹಣವಿಲ್ಲವೆಂದು ಅದನ್ನು ನಿಧಾನ ಮಾಡದೆ ಹೇಗಾದರೂ ಹಣವನ್ನು ಒದಗಿಸಿಕೊಂಡು ಪ್ರತಿಯೊಂದು ಗ್ರಾಮಕ್ಕೂ ಸಾರ್ವಜನಿಕ ಕುಡಿಯುವ ನೀರಿನ ಬಾವಿಯನ್ನು ಒದಗಿಸಿಕೊಡಲೇ ಬೇಕು. ಸಾಕಷ್ಟು ಹಣವನ್ನು ಒದಗಿಸಿಕೊಂಡು ಈ ಬೇಸಿಗೆಯಲ್ಲಾದರೂ ಬಾವಿಗಳ ಕೆಲಸವನ್ನು ತ್ವರಿತವಾಗಿ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಈಗಿನ ಅರ್ಥ ಸಚಿವರು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಾಗಿದ್ದಾಗ ಇದನ್ನು ಏಕೆ ಕೈ ಬಿಟ್ಟರು ಎನ್ನುವುದು ಅರ್ಥವಾಗುತ್ತಿಲ್ಲ. ಅವರು ಮಂಡಿಸಿರುವ ಆಯವ್ಯಯ ಪಟ್ಟಿಯಲ್ಲಿ ಈ ಬಗ್ಗೆ ಹೆಚ್ಚಿಗೆ ಪ್ರಸ್ತಾಪ ಮಾಡಿಲ್ಲ. ಇವತ್ತು ನಾವು ಮಾನವೀಯತೆಯ ದೃಷ್ಟಿಯಿಂದ ನೋಡಿ ಈ ಕೆಲಸ ಕಾರ್ಯಗಳನ್ನು ಬಹಳ ಜಾಗ್ರತೆ ಮಾಡಬೇಕಾಗಿದೆ.

ನಮ್ಮ ಪ್ರಜಾಪ್ರಭುತ್ವ ಚೆನ್ನಾಗಿ ಬೆಳೆದು, ಅದರ ಶಕ್ತಿ ಬೆಳೆಯಬೇಕಾದರೆ ಈ ಸ್ಥಳೀಯ ಸಂಸ್ಥೆಗಳಲ್ಲಿ ತರಬೇಕಾದ ಜನರೇ ಆಡಳಿತಕ್ಕೆ ಯೋಗ್ಯರು ಎನ್ನುವುದು ಅನುಭವದಿಂದ ಬಂದಂಥ ಮಾತಾಗಿದೆ. ಅಲ್ಲಿ ಕೆಲಸ ಮಾಡಿದಂಥ ಜನ ಯಾವ ರೀತಿ ಆಡಳಿತವನ್ನು ನಡೆಸಿದರು ಎನ್ನುವುದು ನಮ್ಮ ಅನುಭವಕ್ಕೆ ಬಂದಿದೆ. ಈ ಖಾತೆಯನ್ನು ವಹಿಸಿಕೊಂಡಿರುವ ಶ್ರೀ ಆರ್. ಎಂ. ಪಾಟೀಲ್ ಅವರು ಈ ಕೊರತೆಯನ್ನು ಭರ್ತಿ ಮಾಡಬೇಕಾಗಿದೆ. ಎಷ್ಟೋ ಮುಖ್ಯವಾದ ಕೆಲಸಗಳು ಆಗಬೇಕಾಗಿವೆ. ಹಳ್ಳಿಗಳಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನವನ್ನು ಸ್ಥಳೀಯ ಸಂಸ್ಥೆಗಳ ಮುಖೇನ ಕೊಡಬೇಕಾಗಿದೆ. ಅಲ್ಲಿ ಪಾಠಶಾಲೆಗಳಾಗಬೇಕಾಗಿವೆ. ಮರದ ಕೆಳಗೆ ಶಾಲೆಗಳನ್ನು ಮಾಡಿ, ಜೋಪಡಿ ಹಾಕಿಕೊಂಡು ಮಾಡಿ ಎಂದು ಹೇಳುವುದು, ತಾರತಮ್ಯ ಮಾಡುವುದು ಸರಿಯಲ್ಲ. ಬೆಂಗಳೂರು ನಗರದಲ್ಲಿ ಎಷ್ಟು ಪಾಠಶಾಲೆಗಳನ್ನು ಖಾಸಗಿಯವರು ಕಟ್ಟಿಸಿದ್ದಾರೆ ಎನ್ನುವ ಪ್ರಶ್ನೆಯನ್ನು ಹಾಕಿಕೊಂಡು ನೋಡಿದರೆ ಸರ್ಕಾರದವರು ಮಾಡುತ್ತಿರುವುದು ನ್ಯಾಯವೇ, ಧರ್ಮವೇ ಎಂದು ಕೇಳಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಿಗೂ ಇದೇ ರೀತಿ ಸರ್ಕಾರದವರು ಏಕೆ ಮಾಡಬಾರದು ? ನಗರಗಳಲ್ಲಿ ಮಾತ್ರ ಸರ್ಕಾರದ ವತಿಯಿಂದ ಕಟ್ಟಡಗಳನ್ನು ಕಟ್ಟಿಸಿಕೊಡಬಹುದು ಅಥವಾ ಬಾಡಿಗೆಗೆ ಕಟ್ಟಡಗಳನ್ನು ತೆಗೆದುಕೊಂಡು ಅವುಗಳಲ್ಲಿ ಶಾಲೆಗಳನ್ನು ನಡೆಸಬಹುದು. ಹಳ್ಳಿಗಳಿಗೆ ಮಾತ್ರ ಕಂಟ್ರಿಬ್ಯೂಷನ್ ಕೊಡಬೇಕು. ಅನುಕೂಲವಾಗಿರತಕ್ಕ ಹಳ್ಳಿಗಳಲ್ಲಿ ಅವರು ಕಂಟ್ರಿಬ್ಯೂಷನ್ ಕೊಡುವುದಕ್ಕೆ ತಯಾರಾಗಿದ್ದಾರೆ. ಆದರೆ ಎಲ್ಲಿ ಬಡ ಜನರಿದ್ದಾರೆ, ಎಲ್ಲಿ ಕೆರೆ ಬಾವಿಗಳ ಆಸರೆ ಇರುವುದಿಲ್ಲ ಎಲ್ಲಿ ಬರೀ ಮಳೆಯ ಆಸರೆಯಿಂದ ವ್ಯವಸಾಯ ಮಾಡಿ ಜೀವಿಸುತ್ತಾರೆ ಅಂಥ ಗ್ರಾಮಗಳಲ್ಲಿ ಕೂಡ ಸ್ಥಳೀಯವಾಗಿ ಕಂಟ್ರಿಬ್ಯೂಷನ್ ಕೊಡಲು ಶಕ್ತಿ ಇಲ್ಲದೆ ಇದ್ದು, ಸರ್ಕಾರ ಕೊಡತಕ್ಕ ಅಲ್ಪಸ್ವಲ್ಪ ಸಹಾಯವಿಲ್ಲದೆ ಹೋದರೆ ಬಹಳ ಕಷ್ಟವಾಗುತ್ತದೆ. ಅಂಥ ಪ್ರದೇಶಗಳಿಗೆ ವಿದ್ಯಾಭ್ಯಾಸದ ಸೌಲಭ್ಯವನ್ನು ಸರ್ಕಾರ ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕು.

ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಹಾಗೆ ಶ್ರೀ ಬಲವಂತರಾಯ ಮೆಹತಾ ಅವರ ವರದಿ ಅದ್ವಿತೀಯವಾಗಿದೆ. ಅವರು ಮಾಡಿರುವ ಸಲಹೆಗಳನ್ನು ಕಾರ್ಯಗತ ಮಾಡುವ ಸಲುವಾಗಿ ಶ್ರೀ ಕೊಂಡಜ್ಜಿ ಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಸರ್ಕಾರ ನೇಮಿಸಿತು. ಆ ಸಮಿತಿ

(ಶ್ರೀ ಕೆ. ವಿ. ಬೈರೇಗೌಡ)

ಯವರೂ ಕೂಡ ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ. ಇವುಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ತಡವಾಗಿದೆ. ಸಂದರ್ಭ ಬಂದಾಗ ಕಮಿಟಿಗಳನ್ನು ನೇಮಕ ಮಾಡಿ ಅವುಗಳಿಗೆ ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡಿ ಆ ಸಮಿತಿಗಳು ವರದಿಗಳನ್ನು ತಯಾರು ಮಾಡಿಸುತ್ತವೆ. ಆದರೆ ಕೊನೆಗೆ ಆ ವರದಿಗಳು ಏನಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ಕಾರ್ಯರೂಪಕ್ಕೆ ಬಾರದೆ ಇರುವ ವರದಿಗಳು ಹತ್ತಾರು ಇರಬಹುದು. ಈ ರೀತಿ ವರದಿಗಳಲ್ಲಿ ಕೊಟ್ಟಿರುವ ಸಲಹೆಗಳನ್ನು ಕಾರ್ಯರೂಪಕ್ಕೆ ತರದೆ ಇದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ವರದಿಗಳನ್ನು ಒಂದು ಕಡೆ ಇಟ್ಟು ಅವುಗಳು ಪ್ರಯೋಜನವಿಲ್ಲದಂತೆ ಮಾಡುವುದರ ಬದಲು ಅವುಗಳಲ್ಲಿ ಸೂಚಿಸಿರುವುದರಲ್ಲಿ ಸಾಧ್ಯವಾಗಬಹುದಾದ ಸಲಹೆಗಳನ್ನಾದರೂ ಕಾರ್ಯಗತ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆ. ಇಡೀ ದೇಶದ ಜನತೆಯ ಮತ್ತು ಗ್ರಾಮಾಂತರಗಳ ಅಭಿವೃದ್ಧಿಯ ಕಡೆ ಹೆಚ್ಚಾಗಿ ಗಮನ ಕೊಟ್ಟು ಕೆಲಸ ನಡೆಯುವಂತೆ ಮಾಡಲು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಹೆಚ್ಚು ಅಧಿಕಾರವನ್ನು ಕೊಡಬೇಕೆಂದು ತಿಳಿಸಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಮಂಡಿಸಿರುವ 21 ಮತ್ತು 25ನೆಯ ಬೇಡಿಕೆಗಳ ಬಗ್ಗೆ ನಾನು ಕೆಲವು ಖೋತಾ ಸೂಚನೆಗಳನ್ನು ಕಳುಹಿಸಿದ್ದೇನೆ. ಈಗ ನಾವು ಮೂರು ಪಂಚವಾರ್ಷಿಕ ಯೋಜನೆಗಳನ್ನು ಮಾಡಿ ಈ ಮಾರ್ಚಿಗೆ ಮುಗಿಸುತ್ತಿದ್ದೇವೆ, ಪಂಚವಾರ್ಷಿಕ ಯೋಜನೆಗಳಲ್ಲಿ ಹೆಚ್ಚು ಮಹತ್ವವನ್ನು ಗ್ರಾಮೀಣಾಭಿವೃದ್ಧಿಗೆ ಮತ್ತು ಸಾಮುದಾಯಿಕ ಅಭಿವೃದ್ಧಿಗೆ ಕೊಡಬೇಕೆಂದು ಹೇಳುತ್ತೇನೆ. ಪಂಚವಾರ್ಷಿಕ ಯೋಜನೆಗಳ ಮೂಲೋದ್ದೇಶಗಳನ್ನು ಯಾವರೀತಿ ಜಾರಿಗೆ ತರಬೇಕೆಂಬುದನ್ನೂ ಸಹ ಒಂದು ಕಡೆಯಲ್ಲಿ ಬರೆದಿದ್ದುದನ್ನು ನಾನು ನೋಡಿದ್ದೇನೆ. ಆದರೆ ಇವತ್ತು ದೇಶದಲ್ಲಿ ಎರಡು ಪ್ರಬಲವಾದ ಅಭಿಪ್ರಾಯಗಳಿವೆ. ಒಂದು ಶ್ರೀ ಮಾನ್ ಬೈರೇಗೌಡರು ಹೇಳಿದಹಾಗೆ ಇಂತಹ ಯೋಜನೆಗಳಿಂದ ನಿಜವಾಗಿ ದೇಶಕ್ಕೆ ಅನುಕೂಲವಾಗಿದೆಯೇ, ಆಗುತ್ತಾ ಇದೆಯೇ ಎನ್ನುವುದು. ಎರಡನೆಯದು ಶ್ರೀಮಾನ್ ಲಕ್ಕಪ್ಪನವರು ಹೇಳಿದ ಹಾಗೆ, ಇನ್ನೂ ಕಟುವಾಗಿ ಹೇಳಿದವರೂ ಇದ್ದಾರೆ, ಹಳ್ಳಿಗಳ ಜನಗಳಿಗೆ ಜೀಪುಗಳ ಹಾರಾಟದಿಂದ ಕಣ್ಣುಗಳಿಗೆ ಧೂಳು ಬೀಳುವ ಹಾಗೆ ಗ್ರಾಮೀಣ ಅಭಿವೃದ್ಧಿ ಯಾಗುತ್ತಿದೆ ಎಂಬುದು. ಎರಡೂ ಒಂದು ಕಡೆ ಸತ್ಯವಿದೆಯೆಂದು ನಾನು ಹೇಳಬಹುದು. ನಮ್ಮ ರಾಜ್ಯದಲ್ಲಿ ಹಿಂದೆ ಮೊಟ್ಟ ಮೊದಲನೆಯದಾಗಿ ಸೊರಬ ಮತ್ತು ಷಿಕಾರಿಪುರ ತಾಲ್ಲೂಕುಗಳಿಗೆ ಈ ಸಾಮುದಾಯಿಕ ಅಭಿವೃದ್ಧಿ ಕೇಂದ್ರಗಳನ್ನು ಕೊಟ್ಟಿದ್ದರು. ಆಗ ಶ್ರೀಮಾನ್ ಹನುಮಂತಯ್ಯನವರು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಅವರು ಹಿಂದೆಯೇ ಸುಮಾರು ಶೇಕಡ 75ರಷ್ಟು ಹಣ ಸಿಬ್ಬಂದಿಗೆ ಖರ್ಚಾಗುತ್ತಿತ್ತು ಉಳಿದ ಶೇಕಡ 25 ರಷ್ಟು ಹಣ ಮಾತ್ರ ದೇಶಾಭಿವೃದ್ಧಿ ಕೆಲಸ ಕಾರ್ಯಗಳಿಗೆ ಖರ್ಚಾಗುತ್ತಿತ್ತು, ಇದರಿಂದ ಎಂತಹ ಯೋಜನೆಯನ್ನು ಕೈಗೊಂಡರೂ ಏನು ಪ್ರತಿ ಫಲ ಕೊಡಬಹುದು ಎಂಬುದು ನನಗೆ ಅರ್ಥವಾಗಿಲ್ಲವೆಂದು ಹೇಳುತ್ತಿದ್ದರು. ಈ ಯೋಜನೆಯನ್ನು ಕಾರ್ಯಗತ ಮಾಡತಕ್ಕ ಜವಾಬ್ದಾರಿ ಅವರ ಮೇಲಿತ್ತು. ಅದೇ ಮೊದಲನೆಯ ಬ್ಲಾಕ್ ನಮ್ಮ ಹಳೆಯ ಮೈಸೂರಿನಲ್ಲಿ ಬಂದುದು. ಈಗ ಬಹಳವಾಗಿ ಕಾಲ ಬದಲಾವಣೆಯಾಗಿದೆ, ಬಹಳ ದೂರ ಹೋಗಿದೆ. ಕೋಟ್ಯಾಂತರ ರೂಪಾಯಿಗಳನ್ನು ಯೋಜನೆಗಳಿಗಾಗಿ ಖರ್ಚು ಮಾಡುವುದಕ್ಕೆ ಇವರು ಹೊರಟಿದ್ದಾರೆ. ದೇಶಾಭಿವೃದ್ಧಿಯೇನೋ ಆಗಬೇಕು, ನಿಜ. ಮೊದಲನೆಯದಾಗಿ ಗ್ರಾಮಾಂತರ ಜನರ ಅಭಿವೃದ್ಧಿಯಾಗಬೇಕು. ನಮ್ಮ ದೇಶ ಗ್ರಾಮಗಳ ದೇಶ. ಏಕೆಂದರೆ, ಹಳ್ಳಿಗಳಲ್ಲಿಯೇ ಹೆಚ್ಚು ಜನ ವಾಸ ಮಾಡುತ್ತಾರೆ. ಆದ್ದರಿಂದ ಅವರ ಅಭಿವೃದ್ಧಿಯಾದಹೊರತು, ಗ್ರಾಮಾಂತರ ಪ್ರದೇಶಗಳು ಊರ್ಜಿತವಾದ ಹೊರತು ಪಟ್ಟಣಗಳು ಅಭಿವೃದ್ಧಿಯಾಗುವುದಿಲ್ಲ. ಒಟ್ಟಿನಲ್ಲಿ ಗ್ರಾಮಗಳ ಅಭಿವೃದ್ಧಿ ಕಾರ್ಯ ಬಹಳ ಮಟ್ಟಿಗೆ ವಿಫಲವಾಗಿದೆ ಎನ್ನುವ ಅಭಿಪ್ರಾಯ ನನಗಿದೆ. ಅದಕ್ಕೆ ನಾನು ಸ್ವಲ್ಪ ಕಾರಣಗಳನ್ನು ಕೊಡುತ್ತೇನೆ. ಇವತ್ತು ಗ್ರಾಮಗಳ ಪರಿಸ್ಥಿತಿ ಹೇಗಿದೆ ಎಂದರೆ ಮೊದಲನೆಯಾದಾಗಿ ಅಲ್ಲಿ ಮೂಲತಃ ಬಡತನ, ಎರಡನೆಯದಾಗಿ ಅನಕ್ಷರತೆ, ಅನೇಕರಿಗೆ ಓದು ಬರಹ ಬರುವುದಿಲ್ಲ, ಚಿತ್ರದ ಮೂಲಕ ಹೇಳಬೇಕು, ಅವರಿಗೆ ಬರತಕ್ಕ ಮಾತಿನಲ್ಲಿಯೇ ಹೇಳಬೇಕು. ಮೂರನೆಯದಾಗಿ ಜಾತೀಯತೆ, ಜಾತಿ ಮತ್ತು ಮತ. ಪ್ರತಿಯೊಂದು ಹಳ್ಳಿಯಲ್ಲೂ ಸುಮಾರು ನಾಲ್ಕೈದು ವರ್ಷಗಳಿಂದಲೂ ಬಂದಿರತಕ್ಕ ಈ ಪ್ರಬಲವಾದ ಜಾತೀಯತೆಯಿಂದ ಸಹಕಾರ ಸಿಕ್ಕದೇ ಹೋಗಿ ಎಷ್ಟು

ಪ್ರಯತ್ನ ಮಾಡಿದರೂ ಹಳ್ಳಿಗಳಲ್ಲಿರತಕ್ಕ ಒಂದು ನೂರು ಜನರನ್ನು ಒಂದು ಕಡೆ ಸೇರಿಸುವುದೇ ಬಹಳ ಕಠಿಣವಾಗಿದೆ. ಉತ್ತಮ ಜಾತಿಯವರು ಬಂದರೆ ಕೀಳು ಜಾತಿಯವರು ಬರುವುದಿಲ್ಲ. ಕೀಳು ಜಾತಿಯವರು ಬಂದರೆ ಉತ್ತಮ ಜಾತಿಯವರು ಬರುವುದಿಲ್ಲ. ಮಧ್ಯಮ ಜಾತಿಯವರು ಬರುತ್ತಾರೆ. ಹೀಗೆ ಹಳ್ಳಿಗಳಲ್ಲಿ ಬಡತನ, ಅನಕ್ಷರತೆ, ಜಾತೀಯತೆ—ಇವು ಮೂರು ಬೆಳೆದಿವೆ. ಇದಾದ ಮೇಲೆ ಸಾಮಾನು ಸರಂಜಾಮುಗಳ ವಿಷಮ ಆರ್ಥಿಕ ವ್ಯವಸ್ಥೆ ಇದು ನಾಲ್ಕನೆಯದು. ಇದರಲ್ಲಿ ಫ್ಯೂಡಲಿಜಂ ಎಂಬುದು ಹೇಗಿದೆ ಎಂಬುದನ್ನು ನೋಡಬೇಕಾದರೆ ಒಂದು ಉದಾಹರಣೆ ಯನ್ನು ಕೊಡುತ್ತೇನೆ. ಯಾರೋ ಒಬ್ಬರ ಜಮೀನು ಇಟ್ಟುಕೊಂಡು ಯಾರೋ ಲೇವಾದೇವಿ ಮಾಡುತ್ತಿರುತ್ತಾನೆ. ಅವನು ಕೋ-ಅಪರೇಟಿವ್ ಅಥವಾ ಸರ್ವಿಸ್ ಸೊಸೈಟಿಯಿಂದ ಶೇಕಡ ಐದು ಅಥವಾ ಆರು ಕೊಟ್ಟು ಹಣ ತೆಗೆದುಕೊಂಡು ಬೇರೆಯವರಿಗೆ ಕೊಡುವಾಗ ಶೇಕಡ 18 ಅಥವಾ 20ರಷ್ಟು ಬಡ್ಡಿ ಹಾಕುತ್ತಾನೆ. ಹೀಗಾಗಿ ಅಲ್ಲಿ ಜಾತೀಯತೆ ದೂರವಾಗಿ ಕನಿಷ್ಟ ಬಡ ತನವುಂಟಾಗಿದೆ. ಹಳ್ಳಿಯ ಜನಗಳಿಗೆ ಬಾವಿಗಾಗಿ ಕಾಂಟ್ರಿಬ್ಯೂಷನ್ ಕೊಡುವುದಕ್ಕಾಗುವುದಿಲ್ಲ ಅದಕ್ಕೆ ಸಾಕಷ್ಟು ದುಡ್ಡು ಅವರಲ್ಲಿ ಇರುವುದಿಲ್ಲ. ಕಾಂಟ್ರಿಬ್ಯೂಷನ್ ಕೊಡದೇ ಇರತಕ್ಕ ಹಳ್ಳಿ ಗಳಿಗೆ ಬಾವಿಗಳ ಸೌಕರ್ಯ ಉಂಟಾಗುವುದಿಲ್ಲ. ಕೆಲವರು ಮುಖಂಡರು ಹಳ್ಳಿಗಳಲ್ಲಿ ಎಲ್ಲ ಜನರನ್ನೂ ತಮ್ಮ ಕೈಯಲ್ಲಿಟ್ಟುಕೊಳ್ಳುವ ಉದ್ದೇಶದಿಂದ ಅವರೇ ಮುಂದೆ ಬಂದು 500 ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಟ್ಟರೆ ಸರ್ಕಾರದಿಂದ ಎರಡು ಸಾವಿರ ರೂಪಾಯಿಗಳು ಬರುತ್ತದೆಂದು ತಿಳಿದು ಅವರ ಮನೆಯ ಹತ್ತಿರವೇ ಒಂದು ಬಾವಿ ಇದ್ದರೂ ಏನೋ ಒಂದು ರೀತಿಯಲ್ಲಿ ದೊಡ್ಡದಾಗಿ ಕಾಂಟ್ರಾಕ್ಟ್ ತೆಗೆದುಕೊಂಡು ಅವರೇ ಬಾವಿಗಳನ್ನು ತೋಡಿಸಿರತಕ್ಕದ್ದನ್ನು ಸಹ ನಾನು ನೋಡಿದ್ದೇನೆ. ಅವರ ಮನೆಯ ಹತ್ತಿರವೇ ಒಂದು ಬಾವಿ ಇದ್ದರೆ ಇನ್ನೊಂದು ಬಾವಿಯನ್ನು ಅದರ ಪಕ್ಕದಲ್ಲಿ ತೋಡಿಸುವುದು, ಇದರಿಂದ ಗ್ರಾಮಕ್ಕೇನೂ ಉಪಯೋಗವಾಗವುದಿಲ್ಲ. ಅವರಿಗೆ ಬಾವಿ ಮನೆ ಹತ್ತಿರವೇ ಇರಬೇಕು, ಕೇವಲ ಎರಡು ಫರ್ಲಾಂಗ್ ದೂರದಲ್ಲಿಯೇ ಅವರ ಮನೆಯ ಮುಂದೆಯೇ ಕೋ-ಅಪರೇಟಿವ್ ಸೊಸೈಟಿ, ಪೋಸ್ಟ್ ಆಫೀಸು, ಸ್ಕೂಲಿನ ಕಟ್ಟಡ, ಶಾಲೆ, ಅಲ್ಲಿಯೇ ಪಂಚಾಯತಿ ಆಫೀಸು-ಹೀಗೆ ಎಲ್ಲಾ ಅವರ ಮನೆಯ ಪಕ್ಕದಲ್ಲಿರಬೇಕು. ಏಕೆಂದರೆ ಬಾವಿ ತೋಡಿ ಸಿರುವ ಕಡೆಗೇ ಎಲ್ಲಾ ಅಧಿಕಾರಿಗಳೂ ಬಂದು ಹೋಗುವುದು, ಅವರೇ ಎಲ್ಲದಕ್ಕೂ ಮುಖ್ಯವಾಗಿ ಗ್ರಾಮದ ಪ್ರತೀಕರಾಗಿದ್ದರೆ ಯಾರೂ ಏನು ಮಾಡುವುದಕ್ಕಾಗುವುದಿಲ್ಲ, ಹೊರಗಡೆಯವರು ನೇರ ವಾಗಿ ಬಂದು ಅವರನ್ನು ಮುಖಂಡರೆಂದು ಮಾತನಾಡಿಸುತ್ತಾರೆ ಅವರನ್ನು ಮನೆಗೂ ಕರೆದು ಕೊಂಡು ಬರುತ್ತಾರೆ, ಹೀಗೆ ಮುಖಂಡರ ಮನೆಗೆ ಕರೆದುಕೊಂಡು ಬಂದು ಗೌರವಿಸುತ್ತಾರೆ. ಇದರಿಂದಾಗಿ ಒಂದು ಫ್ಯೂಡಲ್ ಸಿಸ್ಟಂ ಗ್ರಾಮಾಂತರ ಪ್ರದೇಶದಲ್ಲಿ ಬಂದು ನೆಲಸಿದೆ.

[MR. SPEAKER in the Chair.]

ಇದನ್ನು ನಾನು ಇಡೀ ಇಂಡಿಯಾ ದೇಶದಲ್ಲಿ ನೋಡಿದ ಹಾಗೆ ನಮ್ಮ ಪ್ರಾಂತಗಳಲ್ಲಿಯೂ ಕೆಲವು ಕಡೆಗಳಲ್ಲಿ ಕಾಣಬಹುದು. ಈ ಒಂದು ಸ್ಟ್ರಕ್ಚರ್ ವ್ಯವಸಾಯ ಕ್ಷೇತ್ರದಲ್ಲಿ ಬೆಳೆದುಬಂದಿದೆ. ಅಂಥಾ ದ್ದನ್ನು ತುಂಡು ಮಾಡುವುದಕ್ಕೆ ನಮಗೆ ಇದುವರೆಗೂ ಸಾಧ್ಯವಾಗಿಲ್ಲ. ಇದರಲ್ಲಿ ಮೂಲತಃ ದೋಷವಿದೆ. ಇದು ಫ್ಯೂಡಲ್ ಸಿಸ್ಟಂನಲ್ಲಿ ಬರುತ್ತದೆ. ಹಿಂದೆ ಸೊರಬ ಮತ್ತು ಶಿಕಾರಿಪುರದಲ್ಲಿ ಸಾಮುದಾಯಿಕ ಅಭಿವೃದ್ಧಿ ಯೋಜನೆ ಬಂದಾಗ ಆ ಭಾಗದಲ್ಲಿ ಭೂಸುಧಾರಣೆ ಬಂದು ಪ್ರತಿ ಯೊಬ್ಬನಿಗೆ ಸುಮಾರು 2-3-4-5 ಎಕರೆಗಳಷ್ಟು ಸ್ವಂತ ಜಮೀನು ಇದ್ದಿದ್ದರೆ ಬೀಜ, ಗೊಬ್ಬರ, ಹಣ—ಹೀಗೆ ಎಲ್ಲವನ್ನೂ ಉಪಯೋಗಿಸಿಕೊಂಡು ತನ್ನ ಅಭಿವೃದ್ಧಿಯನ್ನು ಸಾಧಿಸುತ್ತಿದ್ದ. ಅದು ಆಗಲಿಲ್ಲ. ಆಗ ಬರೀ ತಾಖೇದಾರರು ಎಲ್ಲಾ ಸಾಲಗಳನ್ನು ತೆಗೆದುಕೊಂಡರು. ಅವರಿಂದ ಎಲ್ಲಾ ಉಪಯೋಗವನ್ನೂ ಪಡೆದರು. ಪೌಲ್‌ಟ್ರಿ ಸಹ ಮಾಡಿಕೊಂಡರು. ಹರಿಜನರಿಗೆ ಎತ್ತು ಗಳನ್ನು ಕೋಳಿಗಳನ್ನು ಕೊಡಿಸುತ್ತೇವೆಂದು ಹೇಳಿದ್ದರು. ಒಂದು ಎತ್ತಿನ ಬೆಲೆ 120 ರೂಪಾಯಿ ಗಳಷ್ಟು ಇರುವಾಗ ವರ್ಷಕ್ಕೆ ಎಷ್ಟು ಜನಗಳಿಗೆ ಇವರು ಎಷ್ಟು ಎತ್ತುಗಳನ್ನು ಹಂಚಿಕೆ ಮಾಡು ತ್ತಿದ್ದರೋ ಗೊತ್ತಾಗಲಿಲ್ಲ. ಇದನ್ನು ಹಂಚುವುದರಲ್ಲಿ ಅವರೊಳಗೆ ಒಬ್ಬ ಸದಸ್ಯನಿರುತ್ತಾನೆ ನ್ನೋಣ. ಅವನನ್ನು ಯಾರೋ ಹಿಡಿದುಕೊಂಡು ಬರುತ್ತಾರೆ. ಎತ್ತಿನ ಬಾಬತ್ತು ಇಂತಹವರಿಗೆ 120 ರೂಪಾಯಿಗಳಿಗೆ ಕೊಡಲಾಯಿತು ಎಂದು ಹೇಳಿಬಿಡುತ್ತಾರೆ. ಹೀಗೆ ಎಷ್ಟೋ ಯೋಜನೆ ಗಳು ಸುಮಾರು 700–800 ಇವೆ. ಯಾವುದಾದರೂ ಒಂದು ಯೋಜನೆಗೆ 1 ಲಕ್ಷ ರೂಪಾಯಿ ಗಳೆಂದು ಒದಗಿಸಿದರೆ, ಆ ಆಯೋಜನಾ ಅಭಿವೃದ್ಧಿಗಾಗಿ ಅದನ್ನು ಹಂಚಿದರೆ ಸಾಮಾನ್ಯವಾಗಿ ಒಂದೊಂದು ಗ್ರಾಮಕ್ಕೂ ಬಹಳ ಕಡಮೆ ಹಣ ಬರುತ್ತದೆ, ಅದರಿಂದೇನೂ ಸಾಧನೆ ಮಾಡುವುದ ಕ್ಕಾಗುವುದಿಲ್ಲ. ಈ ಭೂಸುಧಾರಣೆಯನ್ನು ನಿಧಾನವಾಗಿ ಜಾರಿಗೆ ತರುವುದರಿಂದ ಕಾಂಗ್ರೆಸ್ಸಿ ನವರಿಗೆ ಸಂಬಂಧಪಟ್ಟ ಹಾಗೆ ಯಾವ ಕ್ರಮವನ್ನೂ ರೈತರು ಆ ಬಗ್ಗೆ ತೆಗೆದುಕೊಳ್ಳುವುದಕ್ಕಾಗ

(ಶ್ರೀ ಎಸ್. ಗೋಪಾಲ ಗೌಡ)

ಲಲ್ಲ. ಇದು ಐದನೆಯ ದೊಡ್ಡ ದೋಷ. ಮತ್ತೊಂದು ಮಹಾ ತಪ್ಪನ್ನು ಕಾಂಗ್ರೆಸ್ ಸರ್ಕಾರದವರು ಮಾಡಿದ್ದಾರೆ. ಅದೇನೆಂದರೆ, ಶ್ರೀಮಾನ್ ಬೈರೇಗೌಡರು ಮಹಾತ್ಮಾ ಗಾಂಧಿಯವರ ಹೆಸರನ್ನು ಹೇಳಿದರು. ಅವರು ರಾಮರಾಜ್ಯ, ಗ್ರಾಮರಾಜ್ಯ ವಿಷಯವಾಗಿ ಮಾತನಾಡಿದರು. ಹಿಂದೆ ಬ್ರಿಟಿಷರು ಇಂಗ್ಲೆಂಡಿನಿಂದ ಬಂದು ಈ ದೇಶವನ್ನು ಆಳುತ್ತಿದ್ದರು. ಅವರ ಪರವಾಗಿ ಯಾರೋ ಒಬ್ಬರು ವೈಸರಾಯರು ಇರುತ್ತಿದ್ದರು. ಗ್ರಾಮಗಳಲ್ಲಿ ಗ್ರಾಮಾಧಿಕಾರಿ ಶ್ಯಾನುಬೋಗರು, ಪಟೇಲರು ಮುಂತಾದವರು ಕೆಲವರು ಬ್ರಿಟಿಷರಿಗಿಂತ ಮುಂಚೆ ಇದ್ದವರು. ತಾಲ್ಲೂಕು ಮುಖಂಡರು ಏಕಮುಖಂಡರಾಗಿ ಅಧಿಕಾರ ಮಾಡುತ್ತಿದ್ದರು. ಆಗಲೂ ಇಂಗ್ಲೆಂಡಿನಿಂದ ಬಂದ ಅಧಿಕಾರಿಗಳ ಮೂಲಕ ಏನಾದರೂ ಆಜ್ಞೆ ಬಂದರೆ ಕೂಡಲೇ ಅದನ್ನು ಜಾರಿಗೆ ಕೊಡುತ್ತಿದ್ದರು. ಪ್ರಜಾಪ್ರಭುತ್ವದಲ್ಲಿ ರಾಜ್ಯಾಂಗಬದ್ಧವಾಗಿ ನಾವು ಅದನ್ನು ಒಪ್ಪಿಕೊಂಡು ಅದರಲ್ಲಿ ವಿಕೇಂದ್ರೀಕರಣ ಮಾಡುತ್ತಾ ಬಂದೆವು. ಆದರೆ ಈ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಅಧಿಕಾರ ನಾಲ್ಕು ವಿಭಾಗಗಳಾದುವು. ಅವು, ದೆಹಲಿ, ರಾಜ್ಯ, ಜಿಲ್ಲೆ ಮತ್ತು ಗ್ರಾಮ—ಈ ಮಾತನ್ನು ಅವರೂ ಒಪ್ಪಿಕೊಂಡರು. ಆದರೆ ಪಂಚಾಯತಿಗಳನ್ನು ರಚನೆ ಮಾಡಲಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಇದ್ದಂತಹ ಜಿಲ್ಲಾ ಬೋರ್ಡ್‌ಗಳು ರದ್ದಾದುವು. ಶ್ರೀಮಾನ್ ಹುಚ್ಚೇಗೌಡರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದರು. ಈಗ ಸಂಪೂರ್ಣವಾಗಿ ಅವುಗಳನ್ನು ತೊಡೆದು ಹಾಕಿದರು. ಹೊಸ ವ್ಯವಸ್ಥೆಯನ್ನು ಜಾರಿಗೆ ತರುತ್ತೇವೆಂದು ಇದನ್ನು ಮಾಡಿದರು. ಅನಂತರ ಕೆಲವು ಮನೆಗಂದಾಯ ಅತಿ ಕಡಿಮೆ ಹಣವೆಂದು ಇದೆಲ್ಲಾ ಬಿಟ್ಟರು. ನಂತರ ಭೂಕಂದಾಯದಲ್ಲಿ ಶೇಕಡ 5ರಷ್ಟು ಕೊಡುವುದು ಎಂಬುದಾಗಿ ಮಾಡಿ ಸುಮಾರು ಸಾವಿರ ಜನಸಂಖ್ಯೆ ಇರುವ ಕಡೆಯಲ್ಲಿ 2 ಸಾವಿರ ರೂಪಾಯಿಗಳ ವರಮಾನ ಬರಬೇಕೆಂದು ಒಂದು ಪಂಚಾಯತಿಯನ್ನು ಮಾಡಿದರು,

ಆದ್ದರಿಂದ ಈಗ ಪಂಚಾಯಿತಿಯವರು ಪ್ರತಿಯೊಂದಕ್ಕೂ ತಹಶೀಲ್ದಾರರ ಹತ್ತಿರ ಹೋಗಬೇಕು. ಏತನ್ಮಧ್ಯೆ ವಂಶಪಾರಂಪರ್ಯವಾಗಿ ಬಂದಿರತಕ್ಕ ಯಾವುದೇ ಕಸಬಿನ ಯಾವುದೇ ಅಧಿಕಾರ ವರ್ಗ ಇರಕೂಡದು ಅದನ್ನು ತೊಡೆದು ಹಾಕಬೇಕು ಎಂದು ಆಯಿತು. ಆದರೆ ಹಳೆಯ ಮೈಸೂರಿನ ದುರಾದೃಷ್ಟದಿಂದ ಅದರ ಬಗ್ಗೆ ಸುಪ್ರೀಮ್ ಕೋರ್ಟಿನವರೆಗೂ ರಿಟ್‌ಪಿಟಿಷನ್‌ಗಳು ಹೋಗಿ ಅದು 1966ನೇ ಇಸವಿಯವರೆಗೂ ನಡೆದುಕೊಂಡು ಬಂತು. ಈಗ ಅವರನ್ನು ತೊಡೆದುಹಾಕಬಹುದು. ಆದರೂ ಸಹ ಕೆಲವರು ಹೊಸದಾಗಿ ಪಂಚಾಯಿತಿ ಕಾರ್ಯದರ್ಶಿಯ ಟ್ರೇನಿಂಗ್ ಪಡೆದುಕೊಂಡು ಬಂದು ಊರಿನಲ್ಲಿ ಕುಳಿತುಕೊಂಡು ಅವರ ಕೈವಾಡವನ್ನು ನಡೆಸುತ್ತಿದ್ದಾರೆ. ಪಂಚಾಯಿತಿಗಳನ್ನು ನೀವು ಬ್ಲಾಕುಗಳ ಜೊತೆಯಲ್ಲಿ ಸಂಘಟಿಸಿದ್ದರೆ, ಅವುಗಳಿಗೆ ಹೆಚ್ಚು ಹಣವನ್ನು ಮತ್ತು ಅಧಿಕಾರವನ್ನು ಕೊಟ್ಟು ಯೋಜನೆಗಳನ್ನು ಜನತೆಯ ಮುಂದೆ ಇಟ್ಟಿದ್ದರೆ ಆಗ ಅದರ ಹೆಚ್ಚು ಅನುಭವ ಮತ್ತು ಮಾಹಿತಿ ಜನತೆಗೆ ಉಂಟಾಗುತ್ತಿತ್ತು. ಆದರೆ ಈಗ ಪಂಚಾಯಿತಿಗಳು ಅಸ್ತಿತ್ವದಲ್ಲಿ ಇಲ್ಲದೆ ಇರುವುದರಿಂದ ಬ್ಲಾಕುಗಳ ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಕ್ಕೆ ಸಾಧ್ಯವಾಗಿಲ್ಲ. ಸರ್ಕಾರಿ ನೌಕರರು ಏನಾದರೂ ಹಳ್ಳಿಗಾಡುಗಳಲ್ಲಿ ರೈತರ ಮನೆಗಳ ಹತ್ತಿರ ಹೋದರೆ ಇವರು ಏನು ಕಂದಾಯ ಹಾಕುವುದಕ್ಕೆ ಬಂದಿದ್ದಾರೆಯೇ, ಮನೆಗಳನ್ನು ಜಪ್ತಿಮಾಡುವುದಕ್ಕೆ ಬಂದಿದ್ದಾರೆಯೇ, ಅಥವಾ ಯಾವುದಾದರೂ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು ಹೋಗುತ್ತಾರೆಯೇ, ಲೆವಿ ಹಾಕುತ್ತಾರೆಯೇ, ಏನು ಮಾಡುತ್ತಾರೋ ಎನ್ನುವ ಶಂಕೆ ಮೂಲಭೂತವಾಗಿ ಜನತೆಗೆ ಬಂದಿದೆ. ಇವರು ಮಾಡುವುದೆಲ್ಲವನ್ನೂ ರೈತರು ನೋಡುತ್ತಾ ಬಂದಿದ್ದಾರೆ. ತಪ್ಪುಗಳನ್ನು ಸರಿ ಮಾಡುವುದಕ್ಕೆ, ಶಂಕೆಗಳನ್ನು ಪರಿಹಾರ ಮಾಡುವುದಕ್ಕೆ ಇವರಿಗೆ ಆಗಿಲ್ಲ. ಜನತೆಗೆ ಸರ್ಕಾರದಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸುವುದಕ್ಕೆ ಸಾಧ್ಯವಾಗಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರ ಏನು ಮಾಡಬೇಕೆಂದು ಹೊರಟಿತ್ತೋ ಅದರಲ್ಲಿ ವಿಫಲವಾಗಿದೆ. ಇವೊತ್ತು ಕೃಷಿಯ ಉತ್ಪತ್ತಿ ಯೋಜನೆಗಳ ಫಲವಾಗಿ ಎಷ್ಟು ಹೆಚ್ಚಿಗೆ ಆಗಬೇಕಾಗಿತ್ತೋ ಅಷ್ಟು ಆಗುವುದಕ್ಕೆ ಸಾಧ್ಯವಾಗಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಕೋಳಿ ಸಾಕುವುದು ಜಾಸ್ತಿಯಾಗಿಲ್ಲ. ಪೌಲ್ಟ್ರಿ ಸ್ಕೀಮು ಏನಿದೆ ಅದನ್ನು ಡೆವಲಪ್ ಮಾಡುವುದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಮೊಟ್ಟೆ ಮತ್ತು ಮರಿಯನ್ನು ತೆಗೆದುಕೊಂಡು ಬಂದು ತಿಂದಿದ್ದಾರೆ. ತಾಯಿಯನ್ನು ತಿಂದು ಹಾಕಿದ್ದಾರೆ. ಇದರ ದೆಸೆಯಿಂದ ಪೌಲ್ಟ್ರಿ ಯೋಜನೆಗಳು ಏನೇನು ಇತ್ತು ಅವುಗಳೆಲ್ಲವೂ 100ಕ್ಕೆ 90 ರಷ್ಟು ನಷ್ಟವಾಗಿವೆ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ. ಈ ಯೋಜನೆಗಳನ್ನು ಬದಲಾಯಿಸುವುದಕ್ಕೆ ಪುನರ್‌ವಿಮರ್ಶೆ ಮಾಡಬೇಕು. ಇನ್ನು ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ.

ಇನ್ನು ಮೂರನೆಯ ಪಂಚವಾರ್ಷಿಕ ಯೋಜನೆಯು ಮುಗಿಯುತ್ತಾ ಬಂದಿದೆ. 1964-65ನೇ ಸಾಲಿನಲ್ಲಿ ರೂರಲ್ ಡೆವೆಲಪ್‌ಮೆಂಟಿಗೆ ಸಂಬಂಧಪಟ್ಟಹಾಗೆ ಅಕ್ಯುಯರ್ ಕೊಟ್ಟಿಲ್ಲ. ಅಭಿವೃದ್ಧಿ ಯೋಜ

ನೆಗಳಿಗೆ 31 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರ ವಿವರಗಳನ್ನು ಕೊಟ್ಟಿಲ್ಲ. ಇದರಲ್ಲಿ ಸಂಬಳ ಗಳಿಗೇ ಹೆಚ್ಚು ಹಣ ಹೋಗುತ್ತದೆ. ಇದು ಎಲ್ಲರಿಗೂ ತಿಳಿದಿರುವ ವಿಷಯ. ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ಬಗ್ಗೆ ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಅವುಗಳನ್ನು ಯಶಸ್ವಿಯಾಗಿ ಕಾರ್ಯಗತಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಆಗಿಲ್ಲ. ಅದಕ್ಕೆ ನಾನಾ ಕಾರಣಗಳನ್ನು ಕೊಡುತ್ತಾರೆ. ಅದು ಏನೇ ಇರಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಗೆ 1966-67ನೇ ಸಾಲಿನಲ್ಲಿ 1,53,58,000 ರೂಪಾಯಿಗಳನ್ನು ಒದಗಿಸಿದ್ದಾರೆ. ಮತ್ತೆ ಪುನಃ ಇದೇ ಹೆಡ್‌ನಲ್ಲಿ ಅಭಿವೃದ್ಧಿ ಯೋಜನೆಗಳಿಗೆ 2,21,69,700 ರೂಪಾಯಿಗಳನ್ನು ಇಟ್ಟಿದ್ದಾರೆ ಇದನ್ನು ನೋಡಿದರೆ 1965-66ನೇ ಸಾಲಿನಲ್ಲಿ ಪುನರ್ ವಿಮರ್ಶೆ ಮಾಡಿದ ಅಂದಾಜಿಗಿಂತ ಸುಮಾರು 10 ಲಕ್ಷ ರೂಪಾಯಿಗಳು ಕಡಿಮೆ ಇದೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯು ಇನ್ನೂ ಸಿದ್ಧವಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಮೊದಲನೆಯ ವರ್ಷಕ್ಕೆ, ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷಕ್ಕೆ ಒದಗಿಸಿದ್ದ ಹಣಕ್ಕಿಂತ ಕಡಿಮೆ ಒದಗಿಸಿದ್ದಾರೆ. ಸ್ಪಿಲ್ ಓವರ್ ಕೆಲಸವನ್ನು ಮಾಡುವಷ್ಟು ಆರ್ಥಿಕ ವ್ಯವಸ್ಥೆಯನ್ನು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. 1961ನೇ ಇಸವಿಯಲ್ಲಿ ಡೆವಲಪ್‌ಮೆಂಟ್ ಕಮಿಷನರ ಆಫೀಸು ಬಂತು. ಅದರ ಪ್ಯಾಟ್ರನ್ ಕೊಟ್ಟಿದ್ದಾರೆ. ಅದು ದೊಡ್ಡ ಯೋಜನೆ. ಈಗ ಸರ್ಕಾರದವರ 10 ಪರ್ಸೆಂಟ್ ಖೋತಾ ಮಾಡುತ್ತೇವೆಂದು ಏನು ಹೇಳುತ್ತಿದ್ದಾರೆ ಅದು ಅವರಿಗೂ ಅನ್ವಯಿಸುತ್ತದೆಯೋ ಏನೋ ಗೊತ್ತಿಲ್ಲ. ದಿನೇ ದಿನೇ ಆಫೀಸುಗಳು ಬೆಳೆಯುತ್ತಿವೆ. ಮೆಡಿಕಲ್ ಚಾರ್ಜಸ್, ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಎಲ್ಲಾ ಜಾಸ್ತಿ ಆಗುತ್ತಿದೆ. ಹೊಸ ಹೊಸ ಆಫೀಸುಗಳು ಆದುವು. ಯೋಜನೆಗಳ ಜೊತೆಗೆ ಎಸ್ಟಾಬ್ಲಿಷ್‌ಮೆಂಟ್ ಜಾಸ್ತಿ ಆಯಿತು. ಆದರೆ ಅವು ಇನ್ನೂ ಯಾವ ರೀತಿಯಲ್ಲಿಯೂ ನಮಗೆ ಫಲವನ್ನು ಕೊಟ್ಟಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹೊಸದಾಗಿ ಆರಂಭ ಮಾಡಿದಂತಹ ಇಲಾಖೆಗಳಿಂದ ನಮಗೆ ಕೆಲಸಕಾರ್ಯಗಳು ಸರಿಯಾಗಿ ಆಗಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ಸ್ಟ್ಯಾಟಿಸ್ಟಿಕಲ್ ಇಲಾಖೆ ಏನಿದೆ ಈ ಇಲಾಖೆಯವರು ವರ್ಷಕ್ಕೆ ಒಂದು ಸಾರಿ ಪಂಚಾಂಗವನ್ನು ಪ್ರಿಂಟ್ ಮಾಡಿ ಇಡುತ್ತಾರೆ. ಅವರಿಗೆ ಎಷ್ಟು ಸಂಬಳವನ್ನು ಕೊಡುತ್ತಾರೆ ಎಂಬುದನ್ನು ಲೆಕ್ಕ ಹಾಕಿದರೆ ಗೊತ್ತಾಗುತ್ತದೆ. ಹಾಗೆಯೇ ಡೆವಲಪ್‌ಮೆಂಟ್ ಕಮೀಷನರು, ಜಾಯಿಂಟ್ ಡೆವಲಪ್‌ಮೆಂಟ್ ಕಮಿಷನರು, ಡೆಪ್ಯುಟೀ ಕಮೀಷನರು 19 ಜನ, ಪ್ರಾಜೆಕ್ಟ್ ಎಗ್ಜಿಕ್ಯುಟೀವ್ ಆಫೀಸರ್ಸ್ 40 ಜನ, ಅಸಿಸ್ಟೆಂಟ್ ಕಮೀಷನರ್ಸ್ ಮತ್ತು ಬಿ. ಡಿ. ಓ. ಗಳು 125 ಜನ; ಎಕ್ಸ್‌ಟೆನ್‌ಷನ್ ಆಫೀಸರ್, ಅಗ್ರಿಕಲ್‌ಚರ್ ಮತ್ತು ಅನಿಮಲ್ ಹಸ್ಬೆಂಡರಿ, ಕೋ-ಆಪರೇಷನ್, ಸೋಷಿಯಲ್ ಎಜುಕೇಷನ್, ರೂರಲ್ ಇಂಡಸ್ಟ್ರೀಸ್‌ನಲ್ಲಿ ಸಬ್ ಇಂಜಿನಿಯರ್, ಇಂಜಿನಿಯರ್, ಕ್ಲಾರ್ಕ್ಸ್ ಟೈಪಿಸ್ಟ್ಸ ಹೀಗೆ ಎಲ್ಲಾ ಕಡೆಗಳಲ್ಲಿಯೂ ಇರತಕ್ಕ ಸಿಬ್ಬಂದಿ ಕನಿಷ್ಟ ಒಂದಕ್ಕೆ ಎರಡರಷ್ಟಾಗಿದೆ. ಈಗ ಅವರಿಗೆ ಮೂವತ್ತು ಕೋಟಿ ರೂಪಾಯಿಗಳನ್ನು ಸಂಬಳಕ್ಕಾಗಿ ಕೊಡಬೇಕು. ಈಗ ಮತ್ತೆ 5 ರೂಪಾಯಿ ತುಟ್ಟಿಭತ್ಯವನ್ನು ಬೇರೆ ಹೆಚ್ಚಿಸಿದ್ದಾರೆ. ಈ ರೀತಿ ಎಲ್ಲವನ್ನೂ ಸರ್ಕಾರದವರು ಬೆಳೆಸಿಕೊಂಡು ಹೋಗುತ್ತಿದ್ದಾರೆ. ಇದಕ್ಕೆ ಎಷ್ಟು ತುಂಬಿದರೂ ಸಾಲುವುದಿಲ್ಲ. ಕೊರತೆ ಮೇಲೆ ಎದ್ದು ಕಾಣುತ್ತದೆ. ಈ ವಿಚಾರಗಳನ್ನೆಲ್ಲಾ ಈಗ ಬಡ್ಜೆಟ್ಟಿನಲ್ಲಿ ಮಂಡಿಸಿದ್ದಾರೆ. ಹೀಗಾದರೆ ಮುಂದೆ ನೀವು ಹೋಗಿ ಹೇಗೆ ಪೌಲ್ಟ್ರಿ ಸ್ಕೀಂ ಪ್ರಾರಂಭ ಮಾಡುತ್ತೀರಿ ! ತಳಿಯನ್ನು ಹೇಗೆ ಅಭಿವೃದ್ಧಿ ಮಾಡುತ್ತೀರಿ ? ಸೀಡ್ ಫಾರಂಗಳನ್ನು ಬೀಜಕ್ಕಾಗಿ ಎಂದು ಮಾಡಿ 740 ಟನ್ನುಗಳಷ್ಟು ಸರ್‌ಪ್ಲಸ್ ಉತ್ಪಾದನೆ ಮಾಡುತ್ತೇವೆ ಎಂದು ಹೇಳಿದರು. ಇದರ ಲೆಕ್ಕಗಳನ್ನು ತೆಗೆದುಕೊಂಡು ನೋಡಿದರೆ ನಿಮಗೆ ಗೊತ್ತಾಗುತ್ತದೆ. ಸೀಡ್ ಫಾರಂಗಳೆಂದು ಮಾಡಿ ಅದರಿಂದ ಉತ್ತಮವಾದ ಬೀಜಗಳನ್ನು ಮಾಡಿ ರೈತನಿಗೆ ಸರಬರಾಜು ಮಾಡಲು ಯಾವ ಅನುಕೂಲಗಳನ್ನೂ ಮಾಡಿಲ್ಲ. ಅಲ್ಲದೆ ನಮ್ಮ ಸಣ್ಣ ರಾಜ್ಯಕ್ಕೆ 550 ಕೋಟಿಯಷ್ಟು ಖರ್ಚು ಆಗುತ್ತದೆ ಎಂದು ಹೇಳಿದರು. ಅದು ಆಗಿಹೋಯಿತು, ಇನ್ನೂ ಹೆಚ್ಚು ಹಣ ಬೇಕೆಂದು ಕೇಳುತ್ತಿದ್ದಾರೆ, ಅದರಿಂದ ಅಭಿವೃದ್ಧಿ ಕಾರ್ಯಗಳನ್ನು ಹೇಗೆ ನಡೆಸಬೇಕು ಎನ್ನುವ ಒಂದು ದೊಡ್ಡ ಪ್ರಶ್ನೆಯೂ ನಮ್ಮ ಮುಂದೆ ಇದೆ. ಮತ್ತು ದೇಶದ ಮುಂದೆಯೂ ನಿಂತಿದೆ. ಹೀಗೆ ಯಾವುದರಲ್ಲೂ ಕೂಡ ನೀವು ಹಿಂದೆ ಹೋಗುತ್ತಿದ್ದೀರೇ ಹೊರತು ಮುಂದೆ ಹೋಗುವ ಸ್ಥಿತಿಯಲ್ಲೇ ಇಲ್ಲ. ಅಂತೂ ಸರಕಾರ ದಲ್ಲಿಡುವ ಬಡ್ಜೆಟ್ಟಿನಲ್ಲಿ ಹಣ ಬೇಕೆನ್ನುವುದು ಸುಮ್ಮನೆ ಬೆಳೆಯುತ್ತಿದೆ, ಸಾಲ ಒಂದೇ ಸಮನೆ ಏರುತ್ತಾ ಬರುತ್ತಿದೆ. ಅದಕ್ಕೆ ಬಡ್ಡಿಯನ್ನೂ ಕೊಡಬೇಕಾಗಿ ಬಂದಿದೆ. ಮುಂದೆ ಹೀಗೆ ಹೋಗುತ್ತಿದ್ದರೆ ಇದಕ್ಕೆ ಸರಿಯಾದ ಮಾರ್ಗದರ್ಶನ ನೀಡುವವರು ಈ ದೇಶದೊಳಗೆ ಯಾರೂ ಇಲ್ಲ ಎಂದು ಕಾಣುತ್ತದೆ. ಇನ್ನೂ ಸರಕಾರದವರು ಇಲ್ಲಿ ತರಬೇಕೆಂದಿರುವ ಕಾನೂನನ್ನು ತರಲು ಆಗಲಿಲ್ಲ. ತುರ್ತು ಪರಿಸ್ಥಿತಿಯಲ್ಲಿ ಪಂಚಾಯತಿಗಳ ಹಾಗೂ ತಾಲ್ಲೂಕು ಬೋರ್ಡುಗಳ ಚುನಾವಣೆಗಳನ್ನು ಮುಂದೆ ಹಾಕಿರುವುದು ಸರಿಯಲ್ಲ ಮತ್ತು ಇದು ಹೀಗೇ ಮುಂದುವರಿದರೆ ಇದರಿಂದ ಮುಂದೆ ದೇಶಕ್ಕೆ ಬಹಳ ಹಾನಿಯುಂಟಾಗುತ್ತದೆ ಮತ್ತು ಪ್ರಜಾಪ್ರಭುತ್ವಕ್ಕೆ ವಿಶೇಷ ಅಪಚಾರ

(ಶ್ರೀ ಎಸ್. ಗೋಪಾಲಗೌಡ)

ಮಾಡಿದಂತಾಗುತ್ತದೆ. ಈಗ ಪಂಚಾಯಿತಿಗಳಿಗೆ ಕಾರ್ಯದರ್ಶಿಗಳನ್ನು ನೇಮಕ ಮಾಡಿ ಅವರನ್ನು ತರಬೇತಿ ಮಾಡಬೇಕೆಂದು ಒಂದು ಯೋಜನೆ ಮಾಡಿದರು. ಇದಕ್ಕಾಗಿ ಇಲ್ಲಿ ಸಹಸ್ರಾರು ಜನರನ್ನು ಕಾರ್ಯದರ್ಶಿಗಳಾಗಿ ನೇಮಕ ಮಾಡಿದರು. ಎಷ್ಟು ಜನಕ್ಕೆ ತರಬೇತು ಮಾಡಿದಿರಿ ಎಂದು ಕೇಳುತ್ತೇನೆ. ಹಾಗೆ ತರಬೇತಿ ಪಡೆದವರಿಗೆ ಅವರ ಕೆಲಸ ಕಾರ್ಯಗಳೇನು ಎನ್ನುವುದು ಇನ್ನೂ ನಿಗದಿಯಾಗಿಲ್ಲ ಮತ್ತು ಅವರ ಸಂಬಳ ಸಾರಿಗೆಗಳು ಯಾವ ರೀತಿ ಇರಬೇಕು ಕೆಲಸ ಖಾಯಂ ಆಗಿದೆಯೇ ಇಲ್ಲ ಎಂತಹುದು ಎನ್ನುವುದು ಇನ್ನೂ ಗೊತ್ತಾಗಿಲ್ಲ ಅಲ್ಲದೆ ಈಗ ತೆಗೆದುಕೊಂಡಿರುವ ಅಧಿಕಾರಿಗಳಲ್ಲಿ ಶೇಕಡಾ 75ರಷ್ಟು ಭಾಗವನ್ನು ಖಾಯಂ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಇದು ಎಷ್ಟು ವರ್ಷಗಳಲ್ಲಿ ಆಗುತ್ತದೊ ನಮಗೆ ಗೊತ್ತಿಲ್ಲ. ಕಾರ್ಯದರ್ಶಿಗಳ ಕೆಲಸಗಳು, ಶ್ಯಾನುಭೋಗರ ಕೆಲಸಗಳೂ ಸಾಕಷ್ಟು ಇವೆ. ಇವನ್ನು ಹೇಗೆ ತಿದ್ದುಪಡಿ ಮಾಡಬೇಕು ಹೇಗೆ ಕೆಲಸ ಮಾಡಬೇಕು ಅವರ ಕೆಲಸ ಕಾರ್ಯಗಳು ಏನು ಎನ್ನುವುದನ್ನು ಅವರು ಇಲ್ಲಿ ಖಚಿತ ಪಡಿಸಿಲ್ಲ. ಕೆಲವು ಕ್ಷೇತ್ರಗಳನ್ನು ಬಿಟ್ಟರೆ ಅವರ ಕೆಲಸಗಳು ಯಾವುವು ಎನ್ನುವುದು ಗೊತ್ತಾಗುವುದಿಲ್ಲ. ಪಂಚಾಯಿತಿಗಳಿಗೆ ಈ ವರ್ಷ ತುರ್ತು ಪರಿಸ್ಥಿತಿ ಇದೆ ಎಂದು ಹೇಳಲು ಅಂತಹ ಹದಗೆಟ್ಟ ಪರಿಸ್ಥಿತಿಯಾದರೂ ಏನಿತ್ತು ? ಕಾನೂನು ಅಸ್ತಿತ್ವಕ್ಕೆ ಬಾರದಂತಹ ಸ್ಥಿತಿ ಏನೂ ನಮ್ಮಲ್ಲಿರಲಿಲ್ಲ. ಸರಕಾರಕ್ಕೆ ಗಂಡಾಂತರ ಪರಿಸ್ಥಿತಿ ಇರುವಾಗ ಚುನಾವಣೆಗಳನ್ನು ಮಾಡಿ ಎಂದು ನಾನು ಹೇಳುವುದಿಲ್ಲ. ಒಂದು ವೇಳೆ ಮುಂದೆ ನಮಗೆ ಮಳೆ ಬಂದು ಹೊರಗಡೆಯಿಂದ ಬರುವ ಆಹಾರಧಾನ್ಯಗಳೂ ಬಂದರೆ ಇನ್ನೂ ಸಾಮಾನ್ಯವಾಗಿ ಎಲ್ಲ ಪಂಚಾಯತಿಗಳಲ್ಲಿಯೂ ಚುನಾವಣೆಗಳನ್ನು ಮಾಡಿ ಅವುಗಳು ಚೆನ್ನಾಗಿ ನಡೆಯುವಂತೆ ಮಾಡುವುದು ನಮ್ಮ ಕರ್ತವ್ಯ. ನಮ್ಮ ದೇಶದಲ್ಲಿ ಕ್ರಮೇಣ ಎಲ್ಲ ಪಂಚಾಯತಿಗಳೂ ಚೆನ್ನಾಗಿ ಕೆಲಸ ಮಾಡಬೇಕು ಮತ್ತು ಹೆಚ್ಚು ಜನಗಳಿಗೆ ನೆರವು ಕೊಡಬೇಕು ಪಂಚಾಯತಿಗಳಿಗೆ ಹೆಚ್ಚು ಅಧಿಕಾರಗಳನ್ನು ಕೊಟ್ಟರೆ ಅದರ ಮೂಲಕ ಅಭಿವೃದ್ಧಿ ಕೆಲಸಗಳನ್ನು ಮಾಡಲು ಕುಂದಕ ಬರಬಹುದು ಎನ್ನುವ ಶಂಕೆ ಇರಬಹುದು. ಈಚೆಗೆ ಬೆಂಗಾಲ್ ದೇಶದಲ್ಲಿ ಚುನಾವಣೆಗಳನ್ನು ಮಾಡಿದಾಗ ಕಾಂಗ್ರೆಸ್ಸಿನಲ್ಲಿದ್ದವರನ್ನೆಲ್ಲಾ ಸೋಲಿಸಿ ನೂರಕ್ಕೆ 95 ರಷ್ಟು ಜನ ಕಮ್ಯೂನಿಷ್ಟರು ಹಾಗೂ ಬೇರೆ ಪಾರ್ಟಿಗಳವರು ಅಲ್ಲಿ ಚುನಾಯಿತರಾಗಿ ಬಂದರು ಎಂದು ಅಲ್ಲಿನ ಮುಖ್ಯ ಮಂತ್ರಿಗಳು ಬೇರೆ ಕಡೆಗಳಲ್ಲಿ ಚುನಾವಣೆಗಳು ಆಗುವುದನ್ನು ಮುಂದೂಡಿದ್ದಾರೆ. ಅದರಂತೆ ಇಲ್ಲೂ ಕೂಡ ಹೆಚ್ಚು ಕಡಿಮೆ ನಮ್ಮ ಕಾಂಗ್ರೆಸ್ಸಿನವರು ಚುನಾವಣೆ ನಡೆಸಿದರೆ ಗ್ರಾಮ ಪಂಚಾಯತಿಗಳು ಅವರ ಕೈ ಬಿಟ್ಟು ಹೋಗಬಹುದು, ಬಹುಶಃ ಅದಕ್ಕಾಗಿ ತಮ್ಮ ಕಾಂಗ್ರೆಸ್ಸು ಬುಡ ಕಿತ್ತು ಹೋಗುತ್ತೋ ಎನ್ನುವ ಭಯವು ಒಂದು ಕಾರಣವಾಗಿದೆ. ಈ ಭಯ ಎನ್ನುವುದು ಒಂದು ನೆಪವಿರಬಹುದು. ಈ ಚುನಾವಣೆಗಳನ್ನು ಹೋದ ವರ್ಷವೇ ಮಾಡಬೇಕಾಗಿತ್ತು. 1961 ನೇ ಇಸವಿಯಲ್ಲಿ ಮಾಡುತ್ತೇವೆಂದು ಮುಂದೂಡಿದರು. ನಾಲ್ಕು ವರ್ಷಗಳಾದರೂ ಈ ಚುನಾವಣೆಗಳು ಆಗದೆ ಇನ್ನೂ ಮುಂದೂಡುತ್ತಿದ್ದಾರೆ. ಇದರಿಂದ ಸರಕಾರಕ್ಕೆ ಆಸಕ್ತಿ ಕಡಿಮೆಯಾಗಿದೆ ಎಂದು ಹೇಳಬಹುದು. ಪಂಚಾಯತಿಗಳ ಹಾಗೂ ತಾಲ್ಲೂಕು ಬೋರ್ಡುಗಳ ಚುನಾವಣೆ ಹಾಗೂ ಪರಿಷತ್ತುಗಳ ಚುನಾವಣೆಗಳನ್ನು ಮಾಡಿದರೆ ಅವರ ಅಧಿಕಾರ ಎಲ್ಲಿ ಕೈ ಬಿಡುತ್ತೋ ಎನ್ನುವ ಒಂದು ಅನುಮಾನವು ಒಂದು ಕಾರಣ. ಪಂಚಾಯತಿಗಳ ಚುನಾವಣೆಗಳನ್ನು ಮುಂದೂಡಲು ದೇಶದಲ್ಲಿ ಅಂತಹ ಗಂಡಾಂತರ ಪರಿಸ್ಥಿತಿಗಳೇನೂ ಆಗಿಲ್ಲ. ಇದನ್ನು ತಡೆ ಹಿಡಿಯಲು ಚೀನಾ ಆಕ್ರಮಣ ಎಂದು ಹೇಳಬಹುದು, ಚೀನಾದ ಆಕ್ರಮಣ 62 ನೇ ಇಸವಿಯಲ್ಲೇ ಆಯಿತು. ಇದು ತೆರವು ಆಗಿ, ಪಾಕೀಸ್ತಾನದ ಜೊತೆಗೆ ನಮಗೂ ಅವರಿಗೂ ಯಾವ ಜಗಳವೂ ಈಗ ಇಲ್ಲ. ಆದುದರಿಂದ ತಕ್ಷಣ ದೇಶದಲ್ಲಿ ಪಂಚಾಯತಿಗಳಿಗೆ ಚುನಾವಣೆಗಳನ್ನು ನಡೆಯುವಂತೆ ಮಾಡಬೇಕು. ಸುಮ್ಮನೆ ಈ ಮಸೂದೆಯನ್ನು ಅಡಿಯಲ್ಲಿ ಹಾಕಿಕೊಂಡು ದೇಶದಲ್ಲಿ ಪಂಚಾಯತಿ ರಾಜ್ಯವನ್ನು ಮಾಡುತ್ತೇವೆ ಎಂದು ಹೇಳುತ್ತ ದೇಶದಲ್ಲಿ ಒಂದು ದೊಡ್ಡ ಗುಲ್ಲು ಎಬ್ಬಿಸಿದ್ದಾರೆ. ಪಂಚಾಯತಿ ರಾಜ್ಯದ ರೂಪು ರೇಖೆಗಳೇನು ? ಜನರು ಇದನ್ನು ಒಪ್ಪುತ್ತಾರೆಯೇ ಇಲ್ಲವೆ ? ಮತ್ತು ಈ ಮಸೂದೆ ಈಗಾಗಲೇ ಸೆಲೆಕ್ಟ್ ಕಮಿಟಿಯಿಂದ ಬಂದ. ಈ ಸಭೆಯ ಮುಂದೆ ತರಬಹುದಾಗಿತ್ತು. ಪ್ರಾಯಶಃ ಇದೇ ಕಾರಣಕ್ಕೊ ಏನೋ ಇನ್ನೂ ಇಲ್ಲಿಗೆ ತಂದಿಲ್ಲ. ಈಗಿರುವ ಮಸೂದೆಯಲ್ಲಿ ಜನಕ್ಕೆ ತೊಂದರೆ ಏನಾದರೂ ಆಗುವ ಹಾಗಿದ್ದರೆ ಅದನ್ನು ಸೂಕ್ತವಾಗಿ ಇಲ್ಲಿ ತಿದ್ದುಪಡಿ ಮಾಡಿ ತಂದು ಆಗ ಹೆಚ್ಚು ಹಣವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡುವಂತೆ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಕೇಳಿಕೊಂಡು ಈ ಬೇಡಿಕೆಗಳನ್ನು ವಿರೋಧಮಾಡುತ್ತೇನೆ.

Mr. SPEAKER.—May I know what time would be required by the Hon'ble Minister to reply ?

Sri R. M. PATIL.—About 20 minutes.

Mr. SPEAKER.—So, till 5-30 p. m. the Debate will go on and at 5-30 p. m. I will call upon the Minister to reply. If necessary, we will have to sit after 6 p. m. today because we have to finish this.

† Sri D. PARAMESHWARAPPA (Honnali).—Mr. Speaker, Sir, I support this Demand. Though there has been progress under rural development which we could talk of, yet, I feel there is no progress which we can boast of. In my humble estimation. the concept of rural development requires that there should be all round development in the rural area, in the sense, that they should have all the amenities, communication facilities, education facilities, drinking water facilities and so on. It was pointed out by some of the Hon'ble members that rural area in our State is still lacking all these facilities. Therefore, I request the Hon'ble Minister to review the actual position with regard to these facilities and come forward to make all necessary provisions to provide these facilities. This is my first submission to the Minister.

Then, coming to Community Development, the N.E.S. Demand, let us examine the works of development of the previous year and let us come to the conclusion whether there is any justification to contiune these C. D. Blocks. I am not criticising the Government on that point. My only point for consideration is, whether continuance of these blocks is justified under the present circumstances.

4-00 P.M.

We have got various departments in our State. For example, there is the Education Department to look after education, there is the Agriculture Department to look after agriculture, there is the Public Works Department to look after public works. In view of the existence of various departments, we have to consider whether the existence of the Community Development Blocks is necessary. May I put one question to the Minister, what is the cumulative result of the various departments ?

[Mr. Chairman (SRI Y. MANJAYYA SHETTY) in the Chair]

Sri D. PARAMESHWARAPPA.—I think the cumulative result is community development and, therefore, on this account I would like to press that there is no longer any necessity for continuing the Community Development Blocks. The fact that this State is spending huge amount on Community Development Blocks cannot be refuted by any one of us, But 40 per cent of the grant that we are spending is spent on establishment alone and therefore I feel that it is a great drain on the State Exchequer. On these two grounds I would appeal to the Minister to consider deeply whether the existence of the Community Development Blocks is desirable or not.

Lastly, Sir, I would like to appeal to the Government to be more liberal in assigning grants to the village panchayats and taluk boards in

(SRI D. PARAMESWARAPPA)

the interest of the development of the rural areas thereby giving more powers to the village panchayats, of course with effective control over expenditure.

With these observations, I conclude my speech.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ತಮ್ಮ ಅಧ್ಯಕ್ಷತೆಯಲ್ಲಿ ಮಾತನಾಡುವ ಒಂದು ಸುಯೋಗ ದೊರಕಿದ್ದು ನನಗೆ ಬಹಳ ಆನಂದ. ಎನ್. ಇ. ಎಸ್. ರೂರಲ್ ಡೆವಲಪ್‌ಮೆಂಟ್, ಪಂಚಾಯ್ತಿರಾಜ್ಯ, ತಾಲ್ಲೂಕು ಬೋರ್ಡು, ಜಿಲ್ಲಾ ಪರಿಷತ್ತು ಇವುಗಳ ಮೇಲೆ ಮಾತನಾಡಿ, ಎಷ್ಟು ಮಟ್ಟಿಗೆ ಈ ರಾಜ್ಯದಲ್ಲಿ ಕಾರ್ಯ ಸಾಧನೆ ಮಾಡಿದ್ದಾರೆ ಎಂಬುದನ್ನು ನಮ್ಮ ಮಾನ್ಯ ಸ್ನೇಹಿತರೆಲ್ಲರೂ ಹೇಳಿದ್ದಾರೆ. ಈ ವಿಷಯವನ್ನು ನಾವು ಹತ್ತು ವರ್ಷಗಳಿಂದ ಒಂದೇ ಸಮನಾಗಿ ಹೇಳುತ್ತಾ ಬಂದಿದ್ದೇವೆ. ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕ್‌ಗಳಿಂದ ಜನಗಳಿಗೆ ಅನುಕೂಲವಾಗುತ್ತದೆ ಎಂದು ಹೇಳಿ ಆಗಿನ ಪ್ರಧಾನ ಮಂತ್ರಿಗಳು ಈ ಒಂದು ಯೋಜನೆಯನ್ನು ಜಾರಿಗೆ ತಂದರು. ಗ್ರಾಮ ರಾಜ್ಯ ಸ್ಥಾಪನೆ ಮಾಡಬೇಕಾದರೆ ಗ್ರಾಮ ಪಂಚಾಯ್ತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಅಧಿಕಾರ ಕೊಟ್ಟು ಈಗಿರತಕ್ಕ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂದು ಹೇಳಿ ಸಲಹೆ ಮಾಡಿ ಆ ಬಗ್ಗೆ ಒಂದು ರಿಪೋರ್ಟನ್ನು ಕೊಟ್ಟರು. ಆ ಮೇಲೆ ನಮ್ಮ ರಾಜ್ಯದಲ್ಲಿ ಕೊಂಡಜ್ಜಿ ಬಸಪ್ಪನವರು ಒಂದು ವರದಿಯನ್ನು ಇದರ ಮೇಲೆ ಕೊಟ್ಟಿದ್ದಾರೆ. ತಾಲ್ಲೂಕು ಬೋರ್ಡುಗಳಿಗೂ ಗ್ರಾಮ ಪಂಚಾಯ್ತಿಗೂ ಏನು ಸಂಬಂಧವಿರಬೇಕು, ಗ್ರಾಮ ಪಂಚಾಯ್ತಿಗೂ ಜಿಲ್ಲಾ ಪರಿಷತ್ತಿಗೂ ಏನು ಸಂಬಂಧವಿರಬೇಕು, ಎಷ್ಟು ಮಟ್ಟಿಗೆ ಅಧಿಕಾರವಿರಬೇಕು ಎಂದು ಹೇಳಿ ಅವರಿಗೆ ಇರತಕ್ಕ ಅನುಭವದ ನೆರಳಿನಲ್ಲಿ ಅವರು ರಾಜ್ಯ ಸರ್ಕಾರಕ್ಕೆ ತಮ್ಮ ಒಂದು ರಿಪೋರ್ಟನ್ನು ಕೊಟ್ಟ ಮೇಲೆ ಸರ್ಕಾರದವರು ಒಂದು ಕಾನೂನನ್ನು ತಯಾರು ಮಾಡಿ ಅದನ್ನು ಈಗ ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿದ್ದಾರೆ. ಅದು ಏನಾದರೂ ಆಗಲಿ, ಕೇಂದ್ರದಲ್ಲಿ ಈ ಖಾತೆಯ ಬದಲಾವಣೆಯಾಗಿದ್ದು ಒಂದು ರಾಜಕೀಯವೆಂದೇ ನಾನು ತಿಳಿದುಕೊಂಡಿದ್ದೇನೆ. ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕ್‌ನ್ನು ಅಗ್ರಿಕಲ್ಚರಲ್ ಮಿನಿಸ್ಟ್ರೀ ಇಂದ ಏಕೆ ತೆಗೆದರು ಎಂದರೆ ಇದಕ್ಕೆ ಹೊಸ ಚೈತನ್ಯ ಕೊಡಬೇಕು, ಇದರಲ್ಲಿ ಬರೀ ಜೀಪುಗಳ ಓಡಾಟ, ಅಧಿಕಾರಿಗಳ ತಿರುಗಾಟವೇ ತುಂಬಿ ತುಳುಕುತ್ತಾ ಇದೆ, ಇದನ್ನು ಸರಿಪಡಿಸಬೇಕು ಎಂಬ ಉದ್ದೇಶದಿಂದ ಮಾಡಿದರು. ಶ್ರೀಮಾನ್ ಲಕ್ಕಪ್ಪನವರು ಮೂರು ವರ್ಷದ ಕೆಳಗೆ ಇದು ಒಂದು ನೋಟ್ ಈಟಿಂಗ್ ಸ್ಕೀಂ ಅಂತ ಹೇಳಿದರು. ಅದು ಖಂಡಿತವಾಗಿಯೂ ಅಕ್ಷರಶಃ ನಿಜ ಎಂದು ನಾನು ಹೇಳುತ್ತಾ ಇದ್ದೇನೆ. ತಮಗೆ ಪೋರ್ಟ್ ಫೋಲಿಯೋ ಬಂದ ತರುಣದಲ್ಲಿ ಪಂಚಾಯ್ತಿ ರಾಜ್ಯ ಮಿನಿಸ್ಟರು ಅಧಿಕಾರಿಗಳಿಂದ ತುಂಬಿದಂಥ ಸಂಸ್ಥೆ ಇದು, ಎಲ್ಲಿ ಜಾಸ್ತಿ ಇವೆಯೋ ಅದನ್ನು ತೆಗೆದು ಹಾಕಬೇಕು ಇಲ್ಲದೇ ಹೋದರೆ ಇದರಿಂದ ಜನ ಸಾಮಾನ್ಯರಿಗೆ ಅನುಕೂಲವಾಗುವುದಿಲ್ಲ ಎಂದು ಹೇಳಿದರು. ಕೆಲವರು ಈ ಸಂಸ್ಥೆ ಇರಬೇಕೆಂದು ಹೇಳುತ್ತಾರೆ, ಇನ್ನು ಕೆಲವರು ಹೋಗಬೇಕೆಂದು ಹೇಳುತ್ತಾರೆ. ಮಧ್ಯಪ್ರದೇಶದಲ್ಲಿ ಅಧಿಕಾರಿಗಳನ್ನು ತೆಗೆದು ಹಾಕಿದ್ದಾರೆ, ಡೆವಲಪ್‌ಮೆಂಟ್ ವರ್ಕ್ ನಡೆಯುತ್ತಾ ಇದೆ. ಅದಕ್ಕೇ ಮೈಸೂರು ಸರ್ಕಾರದವರಿಗೆ ಒತ್ತಾಯ ಪೂರ್ವಕವಾಗಿ ಪ್ರಾರ್ಥನೆ ಮಾಡುತ್ತಾ ಇದ್ದೇನೆ, ಹಣಕ್ಕೆ ಅಭಾವ ಇರುವಾಗ ಇದರಲ್ಲಿ ಉಳಿತಾಯವನ್ನು ಏಕೆ ಮಾಡಬಾರದು ? ಮಾನ್ಯ ಸಚಿವರು ನೆನ್ನೆ ದಿವಸ ಉತ್ತರ ಹೇಳುತ್ತಾ, ನೂರಕ್ಕೆ ಹತ್ತು ಜನರನ್ನು ಎಲ್ಲಾ ಇಲಾಖೆಗಳಲ್ಲೂ ಕತ್ತರಿಸುತ್ತೇವೆ ಎಂದು ಹೇಳಿದರು. ಸರ್ಕಾರದವರು ಬುದ್ಧಿವಂತರಾದರೆ, ನಿಜವಾಗಿಯೂ ಜನಗಳಿಗೆ ಸಹಾಯ ಮಾಡಬೇಕೆಂದು ಇಚ್ಛೆ ಇದ್ದರೆ ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕ್‌ನಲ್ಲಿರತಕ್ಕ ನ್ಯಾಯವಾಗಿ ಬೇಕಾಗಿರತಕ್ಕಷ್ಟು ಅಧಿಕಾರಿಗಳನ್ನು ಇಟ್ಟುಕೊಂಡು ಬಾಕಿಯವರನ್ನು ತೆಗೆದು ಹಾಕಬೇಕು, ಇಲ್ಲದೇ ಹೋದರೆ, ಪ್ರತಿ ನಿತ್ಯ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿಕೊಂಡು ಹೋದರೆ ನಾಳೆ ಯಾರನ್ನು ರಿಟ್ರೆಂಚಮೆಂಟ್ ಮಾಡುವುದು ಯಾರನ್ನು ಬಿಡುವುದು ಎಂದು ಹೇಳಿ ಪೇಚಿಗೆ ಸಿಕ್ಕುಹಾಕಿಕೊಳ್ಳಬೇಕಾತ್ತದೆ. ಶ್ರೀಮಾನ್ ಗೋಪಾಲಗೌಡರು ಹೇಳಿದರು, ಕೋ ಅಪರೇಟೀವ್ ಎಕ್ಸ್‌ಟೆನ್‌ಷನ್, ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್, ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಅಂತ ಹೇಳಿ ಸರ್ವಾಧಿಕಾರವನ್ನೂ ಕೊಟ್ಟಿದ್ದೀರಿ. ಈ ರೀತಿ ಅಧಿಕಾರಿಗಳನ್ನು ಇಟ್ಟು ಕೆಲಸ ಮಾಡುತ್ತಾ ಇದ್ದರೂ ಕೂಡ, ಇವತ್ತಿನ ದಿವಸ ಹಿಂದೂಸ್ಥಾನ್ ಸರ್ಕಾರ ಜೋಳಿಗೆ ಹಾಕಿಕೊಂಡು ಪರದೇಶಕ್ಕೆ ಆಹಾರ ಕೊಡಿ ಎಂದು ಕೇಳಿಕೊಂಡು ಹೋಗಬೇಕಾದ ದುರದೃಷ್ಟ ಪರಿಸ್ಥಿತಿ ಉಂಟಾಗಿದೆ ; ಕೋಟಿ ರೂಪಾಯಿಗಳ ವೆಚ್ಚ ಮಾಡಿ ಲಕ್ಷಾಂತರ ಜನ ಅಧಿಕಾರಿಗಳನ್ನು ನೇಮಕ ಮಾಡಿದ್ದರೂ ಸಹ ಇವತ್ತಿನ ದಿವಸ ಮೈಸೂರಿನ ಪರ್

ಕ್ಯಾಪಿಟಾ ಇನ್‌ಕಂ ಎಷ್ಟಿದೆ ಎಂದು ತಾವು ಕೊಟ್ಟಿರತಕ್ಕ ಅಂಕಿಅಂಶಗಳನ್ನು ನೋಡಿದರೆ ಇದು ಒಂದು ದೊಡ್ಡ ಸೊನ್ನೆ, ಮದರಾಸಿನವರು ಏನು ಅನ್ನುತ್ತಾರೆ, ಆಂಧ್ರದವರು ಏನು ಅನ್ನುತ್ತಾರೆ, ಬೊಂಬಾಯಿನವರು ಏನು ಅನ್ನುತ್ತಾರೆ ಅನ್ನುವುದು ಬೇಡ, ಸಿ. ಡಿ. ಮತ್ತು ಎನ್. ಇ. ಎಸ್. ಬ್ಲಾಕ್‌ನ ವಿಷಯದಲ್ಲಿ ಮೈಸೂರು ಸರ್ಕಾರದ ನೀತಿ ಏನು ಎಂಬುದನ್ನು ಸ್ಪಷ್ಟವಾಗಿ ಈ ಸಭೆಗೆ ತಿಳಿಸಬೇಕೆಂದು ನಾನು ಮಾನ್ಯ ಸಚಿವರನ್ನು ಬಹಳ ನಮ್ರತೆಯಿಂದ ಪ್ರಾರ್ಥನೆ ಮಾಡುತ್ತೇನೆ. ಈ ವಿಧಾನ ಸೌಧದಲ್ಲಿರತಕ್ಕ ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕ್‌ಗೆ ಸಂಬಂಧಪಟ್ಟ ಡೆವಲಪ್‌ಮೆಂಟ್ ಕಮಿಷನರ ಆಫೀಸು ಏನಿದೆ ಅದನ್ನು ನೋಡಿದರೆ ಅದರಲ್ಲಿ ಏನು ಬೆಳೆದಿದೆ ಎಂದರೆ ಅಧಿಕಾರಿಗಳು ಬೆಳೆದಿದ್ದಾರೆ, ಫೈಲುಗಳು ಬೆಳೆದಿವೆ. ರಾಜ್ಯದಲ್ಲಿ ಮನುಷ್ಯನ ತಲೆಯ ಆದಾಯ ಬೆಳೆದಿದೆಯೇನು ಎಂದರೆ ಏನೋನೂ ಇಲ್ಲ, ಸೊನ್ನೆ. ಅದಕ್ಕೇ ಹೇಳುತ್ತೇನೆ, ಸಾವಿರಾರು ರೂಪಾಯಿಗಳನ್ನು ವೆಚ್ಚ ಮಾಡಿ ಎರಡು ಮೂರು ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳತಕ್ಕ ಅಧಿಕಾರಿಗಳನ್ನು ಇಟ್ಟು, ಇದು ಅಧಿಕಾರಿಗಳಿಂದ ತುಂಬಿದ ರಾಜ್ಯವಾಗಿದೆಯೇ ಹೊರತು ಆಹಾರದಿಂದ ತುಂಬಿದ ಕಣಜ ಮೈಸೂರು ರಾಜ್ಯದಲ್ಲಿ ಇಲ್ಲ. ಆದ್ದರಿಂದ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡಿದ ಹೊರತು ಮೈಸೂರು ರಾಜ್ಯಕ್ಕೇ ಆಗಲಿ ಭಾರತ ರಾಷ್ಟ್ರಕ್ಕೇ ಆಗಲಿ ಕಲ್ಯಾಣವಲ್ಲ, ಮಂಗಳಕರವಲ್ಲ ಎಂದು ಹೇಳುತ್ತೇನೆ. ಎಲ್ಲಿ ಹೋಗಲಿ ಆಫೀಸಿನಲ್ಲಿ ಫೈಲುಗಳು ರಾಶಿಗಟ್ಟಲೆ ಬಿದ್ದಿರುತ್ತವೆ. ಬರೀ ಜೀಪುಗಳ ಓಡಾಟವಾಗುತ್ತಿದೆ. ಅದನ್ನು ಆಕ್ಷೇಪಣೆ ಮಾಡುತ್ತಿಲ್ಲ, ಆದರೆ ಸಾಧನೆ ಮಾಡಿರುವುದೇನು ಎಂದು ನಾನು ಕೇಳುತ್ತಿದ್ದೇನೆ. ಅದು ಏನೂ ಇಲ್ಲ. ಇದನ್ನು ಸರಕಾರ ಅತಿ ತೀವ್ರವಾಗಿ ಮತ್ತು ಕೂಲಂಕಷವಾಗಿ ಯೋಚನೆ ಮಾಡಬೇಕು. ಎನ್. ಇ. ಎಸ್. ನ್ನು ಈ ದಿವಸ ತೆಗೆಯಲು ಪ್ರಯತ್ನ ಮಾಡಿಲ್ಲ. ತಾಲ್ಲೂಕು ಬೋರ್ಡು ಅಸ್ತಿತ್ವದಲ್ಲಿರುತ್ತದೆ. ಎನ್.ಇ.ಎಸ್. ಉಳಿಯುವುದಿಲ್ಲ. ಅದುದರಿಂದ ಇದನ್ನು ವಿಮರ್ಶೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಆಹಾರ ಹೆಚ್ಚಾಗಿ ಬೆಳೆಯಲು ಏನು ಮಾಡಬೇಕೆಂಬುದನ್ನು ಶ್ರೀ ಘೋರ್ಪಡೆಯವರು ಹೇಳಿದರು. ಆದರೆ ಶ್ರೀಮಂತರು ವ್ಯವಸಾಯ ಮಾಡುವ ರೀತಿಯೇ ಬೇರೆ, ಬಡವರು ಮಾಡುವ ರೀತಿಯೇ ಬೇರೆ, ಬಡವರಿಗೆ ಸಾಮಾನ್ಯವಾಗಿ ಆಧುನಿಕ ಸೌಲಭ್ಯಗಳಿರುವುದಿಲ್ಲ. ಅವರಿಗೆ ಹಣ ಕಾಸಿನ ಸೌಕರ್ಯವಿರುವುದಿಲ್ಲ. ಹಾಗಿರುವಾಗ ಬಡವರು ಅವರು ಹೇಳಿದಂತೆ ವ್ಯವಸಾಯ ಮಾಡಲು ಹೇಗೆ ಸಾಧ್ಯ? ಸರಕಾರ ಕೊಡುವ ಸೌಲಭ್ಯಗಳಿಂದ ಆಹಾರ ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವಿಲ್ಲ. ನನಗೆ ಸಂಬಂಧಪಟ್ಟಂತೆ ಒಂದು ಉದಾಹರಣೆ ಹೇಳುವುದಾದರೆ ನನ್ನ ಗದ್ದೆಗೆ ರೋಗ ಬಂದಾಗ ವ್ಯವಸಾಯ ಇಲಾಖೆಯ ಆಸಿಸ್ಟೆಂಟ್ ಡೈರೆಕ್ಟರನ್ನು ಮತ್ತು ಎಕ್ಸ್‌ಟೆನ್‌ಷನ್ ಆಫೀಸರನ್ನು ಕರೆದುಕೊಂಡು ಹೋಗಿ ತೋರಿಸಿದೆ. ಮೂರು ತಿಂಗಳಾದರೂ ಅವರೇನು ಮಾಡಲಿಲ್ಲ. ನಂತರ ತಾತಾ ಕಂಪೆನಿಯವರನ್ನು ಕರೆದುಕೊಂಡು ಹೋಗಿ ತೋರಿಸಿದೆ. ಅಗ್ರಿಕಲ್ಚರಲ್ ಇಲಾಖೆ ಎಕ್ಸ್‌ಟೆನ್‌ಷನ್ ಆಫೀಸರು ನಾಲ್ಕು ಮೂಟೆ ಯೂರಿಯ ಹಾಕಿ ಎಂದು ಹೇಳಿದರು, ಆದರೆ ಅದನ್ನು ಹಾಕಿದ ಮೇಲೆ ಕಬ್ಬಿನ ಸೊಂಡೆ ಬೆಳೆದ ಹಾಗಾಗಿ ಹಾಳಾಯ್ತು, 5 ಎಕರೆಗೆ 7 ಮೂಟೆ ಬತ್ತ ವಾಯ್ತು. ಇದು ಮೈಸೂರು ಸರಕಾರ ಕೊಟ್ಟಿರವ ಸಹಾಯ. ವ್ಯವಸಾಯದ ಕ್ಷೇತ್ರದಲ್ಲಿ ಅನುಭವವಿಲ್ಲದಿರುವ ಅಧಿಕಾರಿಗಳು ಮಾಡುವ ಕೆಲಸ ಇದು. ನಾಲ್ಕೂವರೆ ಎಕರೆಯಲ್ಲಿ 128 ಮೂಟೆ ಬತ್ತ ಬೆಳೆದ ನಾನು ಅದೇ ಭೂಮಿಯಲ್ಲಿ 7 ಮೂಟೆ ಬೆಳೆಯಬೇಕಾಯ್ತು. ಇಲಾಖೆಗಳಲ್ಲಿ ಒಳ್ಳೇ ನಿಪುಣರಿದ್ದಾರೆ, ಎಂ. ಎಸ್. ಸಿ., ಪಿ. ಎಚ್.ಡಿ. ಮುಂತಾದ ಡಿಗ್ರಿ ಪಡೆದ ಅಧಿಕಾರಿಗಳೇ ನಿದ್ದಾರೆ ಅವರಿಗಿಂತ ಅನುಭವವಿರುವ ರೈತನೇ ಮೇಲು. ಎಕ್ಸ್‌ಟೆನ್‌ಷನ್ ಆಫೀಸರು, ಬಿ.ಡಿ.ಓ. ಮುಂತಾದವರಿಂದ ಸಲಹೆ ಪಡೆದು ಯಾವ ಕಾರ್ಯವನ್ನೂ ಯಶಸ್ವಿಯಾಗಿ ಮಾಡುವುದಕ್ಕಾಗುವುದಿಲ್ಲ. ಇಂಥ ಉಪಯೋಗವಿಲ್ಲದ ಬ್ಲಾಕುಗಳು, ಎ್.ಇ.ಎಸ್. ಯೋಜನೆಗಳೇತಕ್ಕಿರಬೇಕು? ಒಂದು ಸಲ ಫೀಲ್ಡ್ ಡೇ ಎಂದು ಮಾಡಿದರು, ಆಗ ಅವರಿವರ ಹೊಲದಲ್ಲಿ ಬೆಳೆದ ದೊಡ್ಡ ದೊಡ್ಡ ಟೊಮ್ಯಾಟೊ ಮುಂತಾದವುಗಳನ್ನು ತಂದು ಪ್ರದರ್ಶನಮಾಡಿದರು. ಆದರೆ ಅದರಿಂದ ಯಾರಿಗೂ ಅನುಕೂಲವಾಗುವುದಿಲ್ಲ. ಇದರಿಂದ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹಾಕಿಕೊಳ್ಳಬೇಕಾಗುತ್ತದೆ. ಆದುದರಿಂದ ದಯೆಯಿಟ್ಟು ಎ್.ಇ.ಎಸ್. ಇಲಾಖೆಯನ್ನು ತೆಗೆಯಬೇಕೆಂದು ಸಲಹೆ ಮಾಡುತ್ತೇನೆ.

ಪಂಚಾಯಿತಿ ರಾಜ್ಯದ ವಿಚಾರವನ್ನು ಗೋಪಾಲಗೌಡರು ಚೆನ್ನಾಗಿ ಹೇಳಿದರು. ಮೊನ್ನೆ ಒಂದು ಪ್ರಶ್ನೆ ಬಂದಾಗ ಪಂಚಾಯಿತಿ ಕಾರ್ಯದರ್ಶಿಯನ್ನು ಯಾವಾಗ ನೇಮಕ ಮಾಡುತ್ತೀರಿ. ಪಟೇಲ ಶ್ಯಾನುಭೋಗರನ್ನು ಏನು ಮಾಡುತ್ತೀರಿ ಎಂದು ಕೇಳಿದರೆ ಆ ವಿಚಾರ ಯೋಚನೆ ಮಾಡುತ್ತಿದ್ದೇವೆಂದು ಹೇಳಿದರು. ಸರಕಾರಕ್ಕೆ ಒಂದು ಖಚಿತವಾದ ಅಭಿಪ್ರಾಯವಿರಬೇಕು. ಪಟೇಲ ಶಾನುಭೋಗರನ್ನು ತೆಗೆದು ದೇಶಾದ್ಯಂತ ಕಾರ್ಯದರ್ಶಿಗಳನ್ನು ನೇಮಕ ಮಾಡದಿದ್ದರೆ, ಕಾನೂನನ್ನು ಎಲ್ಲ ಕಡೆಯೂ ಜಾರಿಗೆ ತರದಿದ್ದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಗ್ರಾಮ ಪಂಚಾಯಿತಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸೆಕ್ರೆಟರಿಗಳನ್ನು ಯಾವಾಗ ನೇಮಕ ಮಾಡಲಾಗುವುದು. ಹಾಗೆ ಮಾಡಿ ಎಲ್ಲಾ ಕೆಲಸಗಳನ್ನೂ ಸುಸೂತ್ರವಾಗಿ ಮಾಡುವುದು ಯಾವಾಗ ಎಂದು ಖಡಾ ಖಂಡಿತವಾಗಿ ಹೇಳಬೇಕು. ಇವತ್ತು 1,200 ರೂಪಾಯಿಗಳ ವರಮಾನವಿರುವ ಪಂಚಾಯಿತಿಗಳಿಗೆ ಒಬ್ಬ ಸೆಕ್ರೆಟರಿ ಇದ್ದಾರೆ, ಅದು ಸರಿಯಲ್ಲ, ಆದಾಯ ಕಡಮೆ ಇದ್ದಾಗ 3-4 ಪಂಚಾಯಿತಿಗಳನ್ನು ಸೇರಿಸಿ ಒಬ್ಬ ಕಾರ್ಯದರ್ಶಿಯನ್ನು ನೇಮಿಸುವುದು ಸರಿ; ಆದಾಯವಿಲ್ಲದಿದ್ದರೂ ಅನೇಕ ಕಾರ್ಯದರ್ಶಿಗಳನ್ನು ನೇಮಕ ಮಾಡಿದರೆ ರೈತರ ತಲೆಯಮೇಲೆ ಹೊರೆ ಬೀಳುತ್ತದೆ. ಆದುದರಿಂದ ಇದನ್ನು ಕೂಲಂಕಷವಾಗಿ ಯೋಚನೆ ಮಾಡಬೇಕು.

ತಾಲ್ಲೂಕು ಬೋರ್ಡಿಗೇನು ಅಧಿಕಾರ ಕೊಡಲಾಗಿದೆ? ಜಿಲ್ಲಾ ಮಂಡಲಿಗೇನು ಅಧಿಕಾರ ಏದೆ? ಏನೂ ಇಲ್ಲ, ಸರಕಾರದಿಂದ ಬಂದ ಕಾಗದ ಕಳುಹಿಸುವುದು, ಬಂದ ಹಣ ಹಂಚುವುದು, ಇಷ್ಟೇ ಕೆಲಸವಾದರೆ ಜಿಲ್ಲಾ ಮಂಡಲಿ ಅಥವಾ ತಾಲ್ಲೂಕು ಬೋರ್ಡಿನಲ್ಲಿ ಬರೀ ರಾಜಕೀಯ ಬೆಳೆಯುವುದೇ ಹೊರತು ಇನ್ನೇನೂ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈಗಿರುವ ಕಾನೂನಲ್ಲಿರುವ ಲೋಪ-ದೋಷಗಳನು ತೆಗೆದು ಒಂದು ಹೊಸ ಸ್ವರೂಪ ಕೊಡದಿದ್ದರೆ ಘೋರ್ಪಡೆಯವರು ಹೇಳಿದಂತೆ ಆಯೂಬರ ಪ್ರಜಾಪ್ರಭುತ್ವ ಇಲ್ಲೂ ಜಾರಿಗೆ ಬರಲು ಅವಕಾಶವಾಗುತ್ತದೆ. ಹೀಗೆ ಮಾಡುವುದಾದರೆ ನಮ್ಮದೇನೂ ಅಡ್ಡಿ ಇಲ್ಲ, ಜನ ತಮಗೆ ಬೇಕಾದಂತೆ ಮಾಡುತ್ತಾರೆ. ಆದುದರಿಂದ ಪಂಚಾಯಿತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತು ಮುಂತಾದ ಸಂಸ್ಥೆಗಳಿಗೆ ಹೆಚ್ಚು ಅಧಿಕಾರ ಕೊಟ್ಟು ಅಧಿಕಾರ ವಿಕೇಂದ್ರೀಕರಣ ಮಾಡಬೇಕು, ಮೊದಲು ಹೀಗೆ ಮಾಡದಿದ್ದರೆ ತೊಂದರೆಗೆ ಗುರಿಯಾಗಬೇಕಾಗುತ್ತದೆ. 1966-67 ನೆಯ ಸಾಲು ಮುಗಿಯುವುದರೊಳಗಾಗಿ ಪಂಚಾಯಿತಿ ಬಿಲ್ಲನ್ನು ಕಾನೂನು ಕಡತಕ್ಕೇರಿಸಿ ತಕ್ಕ ಕಾರ್ಯಕ್ರಮ ಕೈಕೊಳ್ಳದಿದ್ದರೆ ನಿಜವಾಗಿಯೂ ಪ್ರಜಾಪ್ರಭುತ್ವ ಉಳಿಯುತ್ತದೆಂಬ ನಂಬಿಕೆ ಇರುವುದಿಲ್ಲ. ಉಳಿಯುವುದಿಲ್ಲ ಎಂದು ಬಿನ್ನಪ ಮಾಡುತ್ತೇನೆ.

ನಂತರ ಕೋಳಿ ಕುರಿಗಳ ವಿಚಾರ ಹೇಳಿದ್ದಾರೆ. 30 ಕುರಿ ತಂದು ಹಂಚಿ ಜನರ ಆರ್ಥಿಕಾಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಾರೆ, ಇದಕ್ಕಿಂತ ಮೋಸ ಬೇರೆ ಯಾವುದೂ ಇಲ್ಲ; ಇದು ಬರೀ ಕಣ್ಣು ಕಟ್ಟುವ ಆಟ. 45 ಲಕ್ಷ ಮೀನಿನ ಮರಿಗಳನ್ನು ಕೊಟ್ಟಿದ್ದೇವೆಂದು ಶ್ರೀ ರಾಚಯ್ಯನವರು ಹೇಳಿದರು. ಅದರಲ್ಲಿ ಎಷ್ಟು ಉಳಿದುವು, ಎಷ್ಟು ಸತ್ತುವು ಎಂಬುದು ಗೊತ್ತೇ? ನಮ್ಮ ತಾಲ್ಲೂಕಿಗೆ ಕುರಿಗಳನ್ನು ಕೊಟ್ಟರು, ಒಬ್ಬ ತಾಲ್ಲೂಕು ಬೋರ್ಡಿನ ಸದಸ್ಯರು ಮೂರು ಜನರ ಹತ್ತಿರ ತಮಗೆ ಇಷ್ಟು ಕುರಿ ಬಂದಿವೆ ಎಂದು ಬರೆಸಿಕೊಂಡು ಬಂದು ತನ್ನ ಮಂದೆಯಲ್ಲಿ ಆ ಕುರಿಗಳನ್ನು ಬಿಟ್ಟುಕೊಂಡರು. ಇದು ನ್ಯಾಯವೇ? ಸಮಾಜದಲ್ಲಿ ಇಂಥವರಿರುವಾಗ ಉದ್ಧಾರವಾಗುವುದಕ್ಕೆ ಸಾಧ್ಯವೇ? ಹೊಟ್ಟೆನಂತೆ ರೊಟ್ಟಿ ಎಂಬ ಗಾದೆ ಇದೆ, ಅದರಂತಾದರೆ ಪ್ರಯೋಜನವೇನು? ವ್ಯವಸಾಯ ಮಾಡುವವನು ಯಾರು, ಕುರಿ ಪಡೆಯಲು ಅರ್ಹನಾದವನು ಯಾರು ಎಂಬುದನ್ನು ನೋಡದೆ ಸುಮ್ಮನೆ ಯಾರಿಗೋ ಕುರಿ ಕೊಟ್ಟುಬಿಟ್ಟರೆ ನಿಜವಾಗಿಯೂ ಏನು ತಾನೆ ಪ್ರಯೋಜನವಾದೀತು? ಇದು ಸರಿಯಲ್ಲ. ನಮಗೆ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಮೈಸೂರು ರಾಜ್ಯದಲ್ಲಿ ಒದಗಿಸಿರುವ ಕುರಿ ಕೋಳಿಗಳ ಸಂಖ್ಯೆ ನೋಡಿದರೆ ಮೈಸೂರು ರಾಜ್ಯದಲ್ಲಿ ಬಡತನವಿಲ್ಲವೆಂದು ಕಾಣಬಹುದು. ನಮ್ಮಲ್ಲಿ 96 ಲಕ್ಷ ಚಿಲ್ಲರೆ ದನಗಳಿವೆ, 88,41,027 ಕೋಳಿ ಇವೆ ಎಂದು ಹೇಳಿರುವುದು ಯಾವ ಆಧಾರದ ಮೇಲೋ ಗೊತ್ತಿಲ್ಲ. ಇದರಲ್ಲಿ ರೋಗ ಬಂದು ಸತ್ತಿರುವುದರ ಲೆಕ್ಕ ಕೊಟ್ಟಿಲ್ಲ. ಎನ್.ಇ.ಎಸ್ ಅಧಿಕಾರಿ ಕೊಟ್ಟ ಅಂಕಿ ಅಂಶಗಳ ಆಧಾರದ ಮೇಲೆ ಇಷ್ಟು ಒದಗಿಸಿ ಉದ್ಧಾರ ಮಾಡಿದ್ದೇವೆಂದು ಹೇಳಿದರೆ ಅದು ಪರಿಸ್ಥಿತಿಯನ್ನು ಉತ್ತಮ ಪಡಿಸುವುದಿಲ್ಲ. ಆ ರೀತಿ ಮಾಡಬಾರದು.

ಸ್ವಾಮಿ, ಇವತ್ತಿನ ದಿವಸ ಮೂರನೇ ಪಂಚವಾರ್ಷಿಕ ಯೋಜನೆ ಮುಗಿದು ನಾಲ್ಕನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವುದರಲ್ಲಿದೆ. ಈ ಸಮಯದಲ್ಲಿ ನಮ್ಮ ರಾಜ್ಯ ಸರಕಾರ ಕೋಟ್ಯಂತರ ರೂಪಾಯಿ ಇಂಥ ಯೋಜನೆಗಾಗಿ ಖರ್ಚು ಮಾಡುತ್ತಿದ್ದೀರಿ. ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವಿಸ್ ಮತ್ತು ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ಸ್ ಇವುಗಳಿಗಾಗಿ ಒದಗಿಸಿರುವ ಹಣದಲ್ಲಿ ಕೋಳಿ ಸಾಕುವುದಕ್ಕೆ ಕುರಿ ಸಾಕುವುದಕ್ಕೆ ಎಷ್ಟು ಹಣ ಇಟ್ಟಿದ್ದೀರಿ? ಸರಕಾರ ಹಣ ಖರ್ಚು ಮಾಡುವುದನ್ನು ನೋಡಿದರೆ ಇದೊಂದು ಕಣ್ಣು ಕಟ್ಟಿ ಆಟವಾಡಿದಂತೆ ಇದೆ. ಈ ಕಣ್ಣು ಕಟ್ಟಿ ಆಟ ಆಡುವುದನ್ನು ಎಷ್ಟು ದಿವಸ ಮಾಡುತ್ತೀರಿ? ಇನ್ನು ಮುಂದೆ ಇದು ಸಾಧ್ಯವಿಲ್ಲ. ಇಂಥಾ ಯೋಜನೆ ಇನ್ನು ಮುಂದೆ ಮುಂದುವರಿಸುವುದು ಸಾಧ್ಯವಿಲ್ಲ. ದಯವಿಟ್ಟು ಇದನ್ನು ತೆಗೆದು ಹಾಕಬೇಕು ಎಂದು ಬಹಳ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ಈ ಯೋಜನೆಯಲ್ಲಿ ವಿಪರೀತ

ಹಣ ಪೋಲು ಆಗುತ್ತಿದೆ. ಎನ್. ಈ. ಎಸ್. ನಿಂದ ಜನತೆಗೆ ಯಾವ ಕಲ್ಯಾಣವಾಗಿಲ್ಲ. ಕೋಳಿ ಕುರಿ ಸಾಕುವುದು ಯಾರೂ ಮಾಡಿಲ್ಲ. ಈ ಯೋಜನೆಯಲ್ಲಿ ಬರೀ ಅಧಿಕಾರಿಗಳ ನೇಮಕ ಮಾಡಿ ಅವರದೊಂದು ಗುಂಪು ಮಾತ್ರ ಇಟ್ಟಿದ್ದೀರಿ. ಅವರಿಗೆ ಕೊಡುವ ಸಂಬಳದ ಹಣ ಮಾತ್ರ ಖರ್ಚಾಗುತ್ತಿದೆ. ಇದರಿಂದ ಯಾವ ಪ್ರಯೋಜನವಾಗಿಲ್ಲ. ಆದುದರಿಂದ ಇಂಥಾ ಯೋಜನೆ ಮೊದಲು ತೆಗೆದುಹಾಕಬೇಕು. ಒಂದು ಸಲ ಶ್ರೀಮಾನ್ ಎಸ್. ಕೆ. ಡೇ ಅವರು ಮೈಸೂರು ರಾಜ್ಯಕ್ಕೆ ಬಂದಾಗ್ಗೆ ನಂದೀ ಬೆಟ್ಟದಲ್ಲಿ ಒಂದು ಮೀಟಿಂಗ್ ಮಾಡಿದರು. ನಾನು ಅಲ್ಲಿಗೆ ಹೋದಾಗ್ಗೆ ಶ್ರೀಮಾನ್ ಎಸ್. ಕೆ. ಡೇ ಅವರನ್ನು ಒಂದು ಮಾತು ಕೇಳಿದೆನು. ಹಳ್ಳಿಗಳ ಪರಿಸ್ಥಿತಿ ಏನು ಇದೆ, ಹಳ್ಳಿಗಳಲ್ಲಿ ಈ ಯೋಜನೆ ಯಾವ ರೀತಿ ಕಾರ್ಯಗತವಾಗುತ್ತಿದೆ ಎಂಬುದಕ್ಕೆ ಹಳ್ಳಿಗಳಿಗೆ ಹೋಗಿ ಅಲ್ಲಿಯ ನಿಜವಾದ ಪರಿಸ್ಥಿತಿ ತಿಳಿದುಕೊಂಡಿದ್ದಾರೆಯೋ ಎಂಬುದನ್ನು ನಾನು ಅವರನ್ನು ಕೇಳಿದೆನೆ. ಹಳ್ಳಿಗಳಿಗೆ ಹೋಗಿ ಎನ್.ಈ.ಎಸ್. ಮತ್ತು ಸೀ.ಡಿ. ಬ್ಲಾಕ್ ಯಾವ ರೀತಿ ಇವೆ ಎಂಬುದನ್ನು ಅಲ್ಲಿಗೆ ಹೋಗಿ ನೋಡಿದ್ದೀರಾ ಎಂದು ಕೇಳಿದೆನು. ಅದಕ್ಕೆ ಅವರು ಉತ್ತರ ಏನು ಕೊಟ್ಟರು ಅಂದರೆ—"it is after all a small matter" ಎಂದು ಅಂದರು. ಈ ರೀತಿ ಯೋಜನೆಗಳು ನಡೆಯುತ್ತಿರುವುದರಿಂದ ಹಳ್ಳಿಗಳಲ್ಲಿಯ ನಿಜವಾದ ಪರಿಸ್ಥಿತಿ ಅಧಿಕಾರಸ್ಥಾನದಲ್ಲಿರುವವರಿಗೆ ಏನೂ ಗೊತ್ತಿಲ್ಲ. ಆದುದರಿಂದ ಇಂಥ ಯೋಜನೆ ಮುಂದುವರಿಸುವುದರಿಂದ ಯಾವ ಪ್ರಯೋಜನವಿಲ್ಲ. ಇಂಥ ಯೋಜನೆಗಳನ್ನು ತೆಗೆದುಹಾಕಬೇಕು ಎಂದು ಹೇಳುತ್ತೇನೆ, ಇನ್ನು ಶ್ರೀಮಾನ್ ಘೋರ್ಪಡೆಯವರು ಮಾತನಾಡುತ್ತಾ, ಹೈಬ್ರಿಡ್ ಕಲ್ಟಿವೇಷನ್ ಬಗ್ಗೆ ಹೇಳುತ್ತಾ, ಇಂಥ ವ್ಯವಸಾಯ ಮಾಡುವವರು ಬೀಜ ಎರಡು ಇಂಚು ಭೂಮಿಯಲ್ಲಿ ಇಡಬೇಕು, ಗೊಬ್ಬರ ಎಂಟು ಇಂಚು ದೂರ ಹಾಕಬೇಕು ಎಂದು ಹೇಳಿದರು. ನಮ್ಮ ಹಳ್ಳಿಗಳಲ್ಲಿಯ ರೈತರಿಗೆ ಇದು ಅರ್ಥವಾಗುತ್ತದೆಯೇ ! ಈ ರೀತಿಯಾಗಿ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ನಮ್ಮ ಹಳ್ಳಿಗಳಲ್ಲಿಯ ರೈತರು ಕ್ರೂಡ್ ಮೆಥಡ್‌ನಿಂದ ವ್ಯವಸಾಯ ಮಾಡುತ್ತಾರೆ. ಆದುದರಿಂದ ಅವರಿಗೆ ಇದು ಸಾಧ್ಯವಾಗಲಾರದು. ನಮ್ಮ ರೈತರು ಅಮೇರಿಕಾ ದೇಶದ ವ್ಯವಸಾಯ ಮಟ್ಟಕ್ಕೆ ಬರಬೇಕೆಂದು ಫಿಲ್ಮ್ ತೋರಿಸಿ ವ್ಯವಸಾಯ ಮಾಡಿರಿ ಎಂದು ಹೇಳಿದರೆ ಅವರು ಹಾಗೆ ಬೆಳೆಯುತ್ತಾರೆಯೇ ? ಅದೇ ರೀತಿ ಮುಸುಕಿನ ಜೋಳ ಹೀಗೆ ಬಿತ್ತನೆ ಮಾಡಬೇಕು, ರಾಗಿ ಹಾಗೆ ಬೆಳೆಯಬೇಕು ಎಂದು ಹೇಳಿದರೆ ಅದು ಸಾಧ್ಯವೇ ? ಭಾರತದಂಥ ದೊಡ್ಡ ರಾಷ್ಟ್ರಕ್ಕೆ ಈ ರೀತಿ ವ್ಯವಸಾಯ ಮಾಡುವುದು ಸಾಧ್ಯವಾದೀತೇ ! ಎಂದಿಗೂ ಸಾಧ್ಯವಿಲ್ಲ. ಇದನ್ನೆಲ್ಲಾ ಮಾಡುತ್ತಾ ಹೋದರೆ ನಾವೆಲ್ಲರೂ ಮರಳಿ ಮಣ್ಣಿಗೆ ಹೋಗಬೇಕಾಗುತ್ತದೆ. ಆಗ್ಗೆ ನಾವೂ ಇರುವುದಿಲ್ಲ ನೀವೂ ಇರುವುದಿಲ್ಲ. ಅಮೇರಿಕಾ ದೇಶದಲ್ಲಿ ಮಾಡುವ ಹಾಗೆ ಹೈಬ್ರಿಡ್ ಕಲ್ಟಿವೇಶನ್ ಶ್ರೀಮಾನ್ ದೇಸಾಯಿ ಅಂಥವರು, ಶ್ರೀಮಾನ್ ಘೋರ್ಪಡೆಯಂಥವರು ಮಾತ್ರ ಮಾಡಬಹುದು. ನಮಗೆ ಏನು ಕಷ್ಟ ಇದೆ ಅವರಿಗೆ ಗೊತ್ತಿಲ್ಲ. ನಾನು ಒಂದು ಕೆ. ಜಿ. ಬೀಜ ದೊರಕಿಸುವುದಕ್ಕೆ ಶಿರಾದಿಂದ ಕೊಯಿಮುತ್ತೂರವರೆಗೆ ಹೋದೆನು. ನಮ್ಮ ಹಳ್ಳಿಯಲ್ಲಿ ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ನನಗೆ ಒಂದು ಕೆ. ಜಿ. ಬೀಜ ದೊರೆಯಲಿಲ್ಲ. ಇಂಥ ಕೆಲಸವನ್ನು ವಿಲೇಜ್ ಲೆವೆಲ್ ವರ್ಕರ್ ಹೇಗೆ ಮಾಡುತ್ತಾನೆ ? ಅವನಿಗೆ ಈ ಬೀಜಗಳ ಬಗ್ಗೆ ಏನು ಜ್ಞಾನ ಇರುತ್ತದೆ ! ಭತ್ತದ ಬೀಜ ಕೊಟ್ಟರೆ ಇದು ಬಂಗಾರ ಸಣ್ಣ, ಇದು ಡಬ್ಬಲಸಾಲ, ಇದು ದಪ್ಪ ಅಕ್ಕಿ ಎಂದು ಕಂಡುಹಿಡಿಯುವುದು ಅವನಿಗೆ ಸಾಧ್ಯವಿಲ್ಲ. ಆದುದರಿಂದ ಹಳ್ಳಿಗಳಲ್ಲಿ ಹೈಬ್ರಿಡ್ ವ್ಯವಸಾಯ ಮಾಡುವುದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ, ಹಳ್ಳಿಗಳಲ್ಲಿ ವ್ಯವಸಾಯಕ್ಕೆ ಏನು ಅನುಕೂಲತೆ ಇದೆ ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ಸಚಿವರುಗಳು ಹಳ್ಳಿಗೆ ಹೋದಂತೆ ಕಾಣುವುದಿಲ್ಲ. ಅವರಿಗೆ ಹಳ್ಳಿಯ ನಿಜವಾದ ಪರಿಸ್ಥಿತಿ ಗೊತ್ತಿಲ್ಲ. ನಾನು ಹಳ್ಳಿಯವನಾದ್ದರಿಂದ ನನಗೆ ಎಲ್ಲ ವಿಷಯದ ಪರಿಚಯ ಇದೆ ನಾನು ವ್ಯವಸಾಯ ಮಾಡಿದ್ದೇನೆ. ಇಂದಿಗೂ ಚಡ್ಡೀ ಹಾಕಿ ಗದ್ದೆಯಲ್ಲಿ ನಿಲ್ಲುವುದಕ್ಕೆ ನಾನು ಸಿದ್ಧನಿದ್ದೇನೆ. ನನಗೆ ವ್ಯವಸಾಯ ಮಾಡುವುದಕ್ಕೆ ಬರುತ್ತದೆ. ಆದುದರಿಂದ ನಾನು ಇದನ್ನು ಹೇಳುತ್ತಿದ್ದೇನೆ. ಎಕ್ಸ್‌ಟೆನ್‌ಷನ್ ಆಫೀಸರ್ ಸರಿಯಾದ ರೀತಿಯಲ್ಲಿ ಸಲಹೆ ಸೂಚನೆಗಳನ್ನು ವ್ಯವಸಾಯಗಾರರಿಗೆ ಕೊಡುತ್ತಾರೆ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಒಂದು ವೇಳೆ ನೀವು ಹೇಳುವ ಹಾಗೆ ಅವರು ಮಾಡಿದ್ದರೆ ಎಕ್ಸ್‌ಟೆನ್‌ಷನ್ ಆಫೀಸರ್ ಬಗ್ಗೆ ಮಾಡಿದ ಖರ್ಚನ್ನು ನೋಡಿದರೆ ಇಂದು ದೇಶದಲ್ಲಿ 20 ಲಕ್ಷ ಟನ್ ಆಹಾರ ಕಡಿಮೆಯಾಗುವುದಕ್ಕೆ ಅವಕಾಶವಿರಲಿಲ್ಲ.

ಶ್ರೀ ಆರ್. ಎಂ. ಪಾಟೀಲ್.—ಮಳೆ ಬರಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಳೆ ಒಂದು ವರ್ಷ ಮಾತ್ರ ಬರಲಿಲ್ಲ. ಆದರೆ ಈ ಅಧಿಕಾರಿಗಳ ಬಗ್ಗೆ ಹಣ ಎಷ್ಟು ಖರ್ಚು ಮಾಡಲಾಗಿದೆ ! ಇದನ್ನು ಏತಕ್ಕೋಸ್ಕರ ನಾನು ಹೇಳುತ್ತಿದ್ದೇನೆಂದರೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ತಾಲ್ಲೂಕು ಮಂಡಲಿಗೆ ಇನ್ನೂ ಹೆಚ್ಚಿನ ಅಧಿಕಾರ ಕೊಟ್ಟು ಎನ್. ಈ. ಎಸ್ಸುಗಳನ್ನು ತೆಗೆದುಹಾಕಬೇಕು ಎಂದು ಹೇಳುತ್ತೇನೆ. ಒಂದೊಂದು ತಾಲ್ಲೂಕಿಗೆ ಎರಡೆರಡು ಬ್ಲಾಕ್ಸ್ ಇಟ್ಟುಕೊಂಡಿದ್ದೀರಿ. ಈ ಬ್ಲಾಕುಗಳ ಬಗ್ಗೆ ಬರೀ ಹಣ ಮಾತ್ರ ಖರ್ಚಾಗುತ್ತಿವೆ. ನಾನು ಒಂದು ಸಲ ಬೀ. ಡಿ. ಓ. ಆಫೀಸಿಗೆ ಹೋದಾಗ್ಗೆ ಅಲ್ಲಿ ಅಕೌಂಟೆಂಟ್ ಮತ್ತು ಒಬ್ಬನು ಸ್ಟ್ಯಾಟಿಸ್ಟಿಕಲ್ ಪ್ರೋಗ್ರೆಸಿವ್ ಅಸಿಸ್ಟೆಂಟ್ ಎಂದು ಇದ್ದುದನ್ನು ನಾನು ನೋಡಿದ್ದೇನೆ. ಅವನು ಆ ತಾಲ್ಲೂಕಿನಲ್ಲಿ ಏನೇನು ಸ್ಟ್ಯಾಟಿಸ್ಟಿಕ್ಸ್ ಕಲೆಕ್ಟ್ ಮಾಡಿದ್ದಾನೆ, ಏನೇನು ರೆಡಿ ರೆಫರನ್ಸ್ ಇಟ್ಟಿದ್ದಾನೆ ಎಂಬುದನ್ನು ಸರಕಾರ ಹೇಳಿದ್ದಾದರೆ ನಾನು ನನ್ನ ಮಾತು ವಾಪಸ್ ತೆಗೆದುಕೊಳ್ಳುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ, ಎನ್.ಈ.ಎಸ್. ಮೇಲೆ ಖರ್ಚು ಮಾಡತಕ್ಕ ಹಣ ದುರುಪಯೋಗವಾಗುತ್ತಾ ಇದೆ. Kindly do away with the N.E.S. and C.D. Blocks and tag on the subject to Taluk Boards and give more powers to the Taluk Boards. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಗಾಂಜಿ ವೀರಪ್ಪ (ಹರಿಹರ).—ಮಾನ್ಯ ಸಭಾಪತಿಗಳೇ, ಈ ಬೇಡಿಕೆಯ ಮೇಲೆ ನನ್ನ ಮಾನ್ಯ ಸ್ನೇಹಿತರು ಕೆಲವರು ಭಾಷಣ ಮಾಡುತ್ತಾ ಹೇಳಿದ ವಿಚಾರದಲ್ಲಿ ನಾಲ್ಕೈದು ಮುಖ್ಯವಾದ ಪ್ರಶ್ನೆಗಳು ಉದ್ಭವಿಸಿರುವುದರಿಂದ ಅವುಗಳ ಮೇಲೆ ಮಾತನಾಡಬೇಕೆಂದು ಮಾಡಿದ್ದೇನೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಈಗ ತಾನೆ ಮಾತನಾಡಿ ರಾಷ್ಟ್ರೀಯ ವಿಸ್ತರಣ ಯೋಜನೆ ಬೇಕಿಲ್ಲ. ಅದರಿಂದ ಪ್ರಯೋಜನವಿಲ್ಲ, ಅದನ್ನು ಪರಿಸಮಾಪ್ತಿ ಮಾಡಿ ಎಂದು ಒಂದು ಉನ್ನತವಾದ ಮಟ್ಟದಲ್ಲಿ ಹೇಳುತ್ತಾ ಇದ್ದರು. ರಾಷ್ಟ್ರೀಯ ವಿಸ್ತರಣ ಯೋಜನೆಯು ಬಹಳ ಒಳ್ಳೆಯದು ಎಂದು ಕೇಂದ್ರ ಸರಕಾರ ಯೋಚನೆ ಮಾಡಿ ಪಾರ್ಲಿಮೆಂಟಿನಲ್ಲಿ ವಿಧಾಯಕ ಮಾಡಿದೆ. ಈ ದೇಶದಲ್ಲಿ 100ಕ್ಕೆ 80ರಷ್ಟು ಜನ ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥವರ ಉನ್ನತಿ ಸಾಧನೆ ಮಾಡುವುದಕ್ಕೆ ಈ ಯೋಜನೆ ಸಿದ್ಧಪಡಿಸಿದ್ದಾರೆ ಅದನ್ನು ಕಾರ್ಯಗತ ಮಾಡಿದಾಗ್ಗೆ ಅದರಲ್ಲಿ ಇರತಕ್ಕ ಲೋಪ ದೋಷಗಳನ್ನು ನಿವಾರಣೆ ಮಾಡಬೇಕಾಗುತ್ತದೆ. ಹತ್ತಾರು ವರ್ಷ ಕೆಲಸ ಮಾಡಿದ ಮೇಲೆ ಇದರಲ್ಲಿಯ ಕುಂದು ಕೊರತೆ ಹೇಗೆ ನಿವಾರಣೆ ಮಾಡಬೇಕು ಎನ್ನುವ ರೀತಿಯಲ್ಲಿ ನಾವು ಯೋಚನೆ ಮಾಡಬೇಕು. ಆ ರೀತಿಮಾಡದೆ ಈ ಯೋಜನೆ ಪ್ರಯೋಜನವಿಲ್ಲ, ತೆಗೆದುಹಾಕಿ ಎಂದು ಎಕ್ಸ್‌ಟ್ರೀಂ ವ್ಯೂಸ್ ಇಟ್ಟುಕೊಂಡು ಹೇಳತಕ್ಕದ್ದು ಸರಿಯಲ್ಲ ಎಂದು ನಾನು ಹೇಳುತ್ತೇನೆ. ಈ ಯೋಜನೆಯಲ್ಲಿ ನಿರೀಕ್ಷಣೆ ಮಾಡಿದಷ್ಟು ಕೆಲಸವಾಗಿಲ್ಲ. ಅದನ್ನು ಸರಿಪಡಿಸುವುದು ಹೇಗೆ ಎಂಬುದನ್ನು ಯೋಚನೆ ಮಾಡೋಣ. ನಾನೂಯೋಚನೆ ಮಾಡುತ್ತಿದ್ದೇನೆ. ಇಂದು ದೇಶದಲ್ಲಿ ಹಣ ಖರ್ಚಾಗುತ್ತಿದೆ. ಅಧಿಕಾರಿಗಳ ಸಂಖ್ಯೆ ಬಹಳ ಹೆಚ್ಚಾಗಿದೆ.

4-30 P.M.

ಓವರ್‌ಸ್ಟಾಫಿಂಗ್ ಆಗಿದೆ. ಸರ್ಕಾರದವರು ಹಳ್ಳಿಗಳ ಅಭಿವೃದ್ಧಿಗೋಸ್ಕರ ಸದುದ್ದೇಶದಿಂದ ಯೋಚನೆ ಮಾಡಿ ತಾಲ್ಲೂಕಿನಲ್ಲಿ ಯಾವ ರೀತಿ ಕೆಲಸಗಳಾಗಬೇಕು, ಯಾವ ರೀತಿ ಕೆಲಸಗಳ ಹಂಚಿಕೆಯಾಗಬೇಕು ಎಂದು ನಿರ್ಧರಿಸಿ ಅಧಿಕಾರಿಗಳನ್ನು ನೇಮಕ ಮಾಡಿದರು. ಆದರೆ ನಮ್ಮ ಅನುಭವದಿಂದ ಏನಾಗಿದೆಯೆಂದರೆ, ಅನೇಕ ಹುದ್ದೆಗಳು ಪ್ರಯೋಜನಕ್ಕೆ ಬರುತ್ತಿಲ್ಲ. ಒಂದು ಉದಾಹರಣೆ ಹೇಳಬೇಕೆಂದರೆ, ಅಸಿಸ್ಟೆಂಟ್ ಇಂಡಸ್ಟ್ರಿಯಲ್ ಎಕ್ಸ್‌ಟೆಷನ್ ಆಫಿಸರ್ಸ್‌ಗಳನ್ನು ಗ್ರಾಮಗಳಲ್ಲಿ ಕೈಗಾರಿಕೆಗಳು ಬೆಳೆಯಬೇಕು, ಇಂಡಸ್ಟ್ರಿಯಲ್ ಮೈಂಡ್‌ಡೆಡ್‌ನೆಸ್ಸನ್ನು ಹಳ್ಳಿಗಳಲ್ಲಿ ಉಂಟು ಮಾಡಬೇಕು ಎನ್ನುವ ಸದುದ್ದೇಶದಿಂದ ನೇಮಿಸಿದರು. ಆದರೆ ಅವರಲ್ಲಿ ಆ ಅಭಿಮಾನ ಇಲ್ಲ. ಹತ್ತಾರು ವರ್ಷಗಳ ಅನುಭವದಿಂದ ಹೇಳಬೇಕೆಂದರೆ, ಇಲ್ಲಿ ಅಧಿಕಾರಿಗಳು ನಿಷ್ಪ್ರಯೋಜನ ಎಂದು ಹೇಳುವುದಕ್ಕೆ ಬದಲು ಅವರಿಗೆ ಕೆಲಸಗಳ ಸಾಕಷ್ಟು ಇಲ್ಲ. ನಾನು ಮೊನ್ನೆ ಬಡ್ಜೆಟ್ ಭಾಷಣದಲ್ಲಿ ಹೇಳುತ್ತಾ, ಈ ಅಸಿಸ್ಟೆಂಟ್ ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ಸ್ ತಾಲ್ಲೂಕು ಬೋರ್ಡ್‌ಗಳ ಕೈಕೆಳಗೆ ಕೆಲಸ ಮಾಡಲು ಅಲ್ಲಿ ತಕ್ಕಷ್ಟು ಹಣವಿರುವುದಿಲ್ಲ, ಮಾಡುವ ವಿಧಾನಗಳು ಗೊತ್ತಿರುವುದಿಲ್ಲ, ಅದಕ್ಕಾಗಿ, ಈ ಗ್ರಾಮಸೇವಕ, ಗ್ರಾಮಸೇವಕಿಯರನ್ನು ವ್ಯವಸಾಯ ಇಲಾಖೆಗೆ ವಹಿಸಿದರೆ ಅವರ ಕೈಕೆಳಗೆ ಸಮರ್ಪಕವಾಗಿ ಕೆಲಸಮಾಡುತ್ತಾರೋ, ಏನೋ ಎಂದು ಹೇಳಿದೆ. ಆದ್ದರಿಂದ ಸರ್ಕಾರದವರು ಈಗಲಾದರೂ ಈ ಸಲಹೆಯನ್ನು ಯೋಚನೆ ಮಾಡಲಿ. ಈ ವ್ಯವಸಾಯ ಇಲಾಖೆಯಲ್ಲಿ ವಿಲೇಜ್ ವರ್ಕರ್‌ಗಳು ಮತ್ತು ಎಕ್ಸ್‌ಟೆನ್‌ಷನ್ ಆಫೀಸರ್‌ಗಳು ಮತ್ತು ಬಿ.ಡಿ.ಓ. ಗಳಿಗೆ ಹೆಚ್ಚು ಕೆಲಸ ಸಮರ್ಪಕವಾಗಿ ಸಿಗಬೇಕು ಎಂದು ನನ್ನ ಸಲಹೆ. ಈ ರಾಷ್ಟ್ರೀಯ ವಿಸ್ತರಣಾ

ಯೋಜನೆಯಲ್ಲಿ ನಾವು ಉಳಿತಾಯವನ್ನು ಮಾಡಬೇಕಾದರೆ ಸ್ವಲ್ಪ ಯೋಚನೆ ಮಾಡುವುದು ಸೂಕ್ತವಾಗಿದೆ. ಅದರಲ್ಲಿರುವ ಕೆಲವು ಹುದ್ದೆಗಳನ್ನು ತೆಗೆಯುವುದರ ಜೊತೆಗೆ, ಈಗಿರುವಂತೆ ತಾಲ್ಲೋಕ್ ಅಭಿವೃದ್ಧಿ ಮಂಡಳಿಗಳಿಗೂ, ಗ್ರಾಮಪಂಚಾಯಿತಿಗಳಿಗೂ ಕೆಲಸ ಮಾಡಲು ಸಾಕಷ್ಟು ಹಣವಿರುವುದಿಲ್ಲ. ಸಾಕಷ್ಟು ಹಣವಿಲ್ಲದೆ ಈ ಗ್ರಾಮಪಂಚಾಯಿತಿಗಳು ಏನೂ ಮಾಡುವುದಕ್ಕಾಗುವುದಿಲ್ಲ. ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಸಹ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನನ್ನ ಸೂಚನೆಯೆಂದರೆ ಹೆಚ್ಚಿನ ಹಣವನ್ನು ತಾಲ್ಲೋಕ್ ಅಭಿವೃದ್ಧಿ ಮಂಡಳಿಗಳಿಗೂ ಮತ್ತು ಗ್ರಾಮಪಂಚಾಯಿತಿಗಳಿಗೂ ಕೊಡಬೇಕಾದ್ದು ಅಗತ್ಯವೆಂದು ಕಾಣುತ್ತದೆ. ಬರಿ ಹಣ ಒದಗಿಸುವುದು ಅಷ್ಟೇ ಅಲ್ಲ, ಸಾಕಷ್ಟು ಅಧಿಕಾರವನ್ನು ಕೂಡ ಕೊಡಬೇಕು. ಈ ಒಂದು ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯ ಇರಬಾರದು. ಈ ತಾಲ್ಲೋಕ್ ಅಭಿವೃದ್ಧಿ ಮಂಡಳಿಗಳು ಬಹಳ ಸಮರ್ಪಕವಾಗಿ ಕೆಲಸಮಾಡುತ್ತಿವೆ, ಬಹಳ ಪ್ರಯೋಜನಕಾರಿಯಾಗಿವೆ ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ತಾಲ್ಲೋಕ್ ಅಭಿವೃದ್ಧಿ ಮಂಡಳಿಗಳಿಗೆ ಹೆಚ್ಚು ಹಣ ಕೊಡದಿದ್ದರೆ ಮಾನ್ಯ ಸಭೆಯವರು ಏನು ಗುರಿ ಇಟ್ಟುಕೊಂಡಿದ್ದರೋ ಅದರಂತೆ ಹಳ್ಳಿಗಾಡಿನವರಿಗೆ ಪ್ರಯೋಜನವಾಗುವುದಿಲ್ಲ. ಮತ್ತು ಗುರಿ ಸಾಧನೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರಕ್ಕೆ ಸಲಹೆ ಮಾಡುವುದೆಂದರೆ, ಅಧಿಕಾರ ವಿಕೇಂದ್ರೀಕರಣವಾಗಬೇಕು ಎಂದು ಹೇಳುತ್ತೇನೆ. ಅದೇ ಪ್ರಕಾರ ಗ್ರಾಮಪಂಚಾಯಿತಿಗಳಿಗೂ ತಾಲ್ಲೋಕ್ ಅಭಿವೃದ್ಧಿ ಮಂಡಳಿಗಳಿಗೂ ಹೆಚ್ಚು ಅಧಿಕಾರ ಕೊಡಬೇಕು. ಪ್ರತಿಯೊಂದು ಕೆಲಸಕ್ಕೂ ರೈತರು ಬೆಂಗಳೂರಿನ ವಿಧಾನಸೌಧಕ್ಕೆ ಬರಬೇಕಾದ್ದು ಇರಬಾರದು. ತಾಲ್ಲೋಕ್ ಮಟ್ಟದಲ್ಲಿಯೇ ಜನಕ್ಕೆ ಬೇಕಾದ ಕೆಲಸಗಳು ಆಯಾ ಜಾಗದಲ್ಲೇ ಆಗಬೇಕು. ತಾಲ್ಲೋಕ್ ಅಭಿವೃದ್ಧಿ ಮಂಡಳಿಗಳಿಗೆ ಚುನಾಯಿತರಾದ ಅಧ್ಯಕ್ಷರಿರುತ್ತಾರೆ. ತರಬೇತಾದ ಪ್ರತಿಯೊಂದು ತರಹ ಅಧಿಕಾರಿಗಳಿರುತ್ತಾರೆ. ಆದ್ದರಿಂದ ರೈತರಿಗೆ ಏನೇನು ಕೆಲಸಗಳು ಆಗಬೇಕೋ ಆ ಕೆಲಸಗಳೆಲ್ಲಾ ತಾಲ್ಲೋಕ್ ಮಟ್ಟದಲ್ಲೇ ಆಗಬೇಕಾದರೆ ಗ್ರಾಮಪಂಚಾಯಿತಿಗಳಿಗೂ, ಮತ್ತು ತಾಲ್ಲೋಕ್ ಅಭಿವೃದ್ಧಿ ಮಂಡಳಿಗಳಿಗೂ ಹೆಚ್ಚು ಅಧಿಕಾರ ಕೊಡಬೇಕು. ಈ ತತ್ವವನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆದಷ್ಟು ಜಾಗ್ರತೆ ಒಂದು ಕಾನೂನು ಮಾಡಿ ಈಗ ಇರತಕ್ಕಂಥ ಲೋಕಲ್ ಬೋರ್ಡ್‌ಗಳ ಆಕ್ಟುಗಳು ಏನಿವೆ, ಅವುಗಳನ್ನು ತಿದ್ದುಪಡಿ ಮಾಡಿ ಹೆಚ್ಚು ಅಧಿಕಾರ ಮತ್ತು ಹೆಚ್ಚು ಹಣ ಕೊಡಬೇಕು. ಸಾಧ್ಯವಾದರೆ ಈ ಬಡ್ಜೆಟ್ ಅಧಿವೇಶನದಲ್ಲೇ ಈ ತಿದ್ದುಪಡಿಯನ್ನು ತಂದರೆ ಎಲ್ಲರೂ ಸಂತೋಷಪಡುತ್ತಾರೆ.

ಇನ್ನೊಂದು ವಿಚಾರ. ಈ ಸಭೆಯ ಮುಂದೆ ವಿಲೇಜ್ ಪಂಚಾಯತ್ ಮತ್ತು ಜಿಲ್ಲಾಪರಿಷತ್ ಮಾಡುವ ವಿಚಾರದಲ್ಲಿ ಒಂದು ಬಿಲ್ ಇದೆ. ಈ ಬಿಲ್ಲಿನ ಬಗ್ಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯು ವರದಿ ಬಂದು, ಈ ಸಭೆಯ ಅನುಮತಿಗೆ ಬಂದಿದೆ. ಬಹುಶಃ ಈ ಬಿಲ್ಲಿನ ಬಗ್ಗೆ ಅನೇಕರಿಗೆ ಭಿನ್ನಾಭಿಪ್ರಾಯ ಇರಬಹುದು. ಈ ಬಿಲ್ ಸಭೆಯ ಮುಂದೆ ಚರ್ಚೆಗೆ ಬಂದಾಗ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ನೋಡೋಣ. ಈಗಲೇ ಈ ವಿಚಾರದಲ್ಲಿ ಹೇಳುವುದು ಬೇಡ. ಅದು ಬರುವುದು ಬಹಳ ದಿವಸ ಹಿಡಿಯುವುದಾದರೆ ಈಗಿರತಕ್ಕಂಥ ತಾಲ್ಲೋಕ್ ಬೋರ್ಡ್ ಮತ್ತು ಪಂಚಾಯಿತಿಗಳ ಆಕ್ಟಿಗೆ ತಿದ್ದುಪಡಿ ತಂದು ತನ್ಮೂಲಕ ಹೆಚ್ಚು ಅಧಿಕಾರವನ್ನು ತಾಲ್ಲೋಕ್ ಮಂಡಳಿಗಳಿಗೆ ಮತ್ತು ವಿಲೇಜ್ ಪಂಚಾಯಿತಿಗಳಿಗೆ ಹೆಚ್ಚು ಹಣ ಮತ್ತು ಹೆಚ್ಚು ಕೆಲಸ ಕೊಡಬೇಕು ಎಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಚುನಾವಣೆಯನ್ನು ಸರ್ಕಾರದವರು ಮುಂದಕ್ಕೆ ಹಾಕಿದರು ಎಂದು ಶ್ರೀಮಾನ್ ಗೋಪಾಲಗೌಡರು ಹೇಳುತ್ತಿದ್ದಾರೆ. ಬಹುಶಃ ಅವರ ಮನಸ್ಸಿನಲ್ಲಿ ಕಾಂಗ್ರೆಸ್ ಪಕ್ಷದವರಿಗೆ ಚುನಾವಣೆ ಎದುರಿಸುವುದಕ್ಕೆ ಧೈರ್ಯವಿಲ್ಲ, ಅದಕ್ಕೇ ಮುಂದಕ್ಕೆ ತಳ್ಳುತ್ತಿದ್ದಾರೆ ಎಂದು ಇರಬಹುದು. ನಾನು ಹೇಳುತ್ತೇನೆ, ಆ ರೀತಿಯ ಸಂಶಯ ಪಡಬೇಕಾದ್ದು ಇಲ್ಲ. ಈಗ ಚುನಾವಣೆ ಮುಂದಕ್ಕೆ ಹೋಗಿರುವುದು ಮೈಸೂರು ರಾಜ್ಯದಲ್ಲಿ ಮಾತ್ರವಲ್ಲ. ಇಂಡಿಯಾ ದೇಶದ ಎಲ್ಲಾ ರಾಜ್ಯಗಳಲ್ಲೂ ಈ ರೀತಿಯಾಗಿದೆ. ತುರ್ತು ಪರಿಸ್ಥಿತಿ ಬಂದಿದ್ದರಿಂದ ತಾಲ್ಲೋಕ್ ಬೋರ್ಡ್, ಅಸೆಂಬ್ಲಿ, ಕೌನ್ಸಿಲ್ ಚುನಾವಣೆಗಳೆಲ್ಲವನ್ನೂ ಮುಂದಕ್ಕೆ ಹಾಕಬೇಕು ಎಂಬುದಾಗಿ ಕೇಂದ್ರ ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅದೇ ರೀತಿ ಮೈಸೂರು ರಾಜ್ಯದವರು ತೀರ್ಮಾನ ಮಾಡಿದ್ದಾರೆ. ಮೈಸೂರು ಸರ್ಕಾರದವರು ಚುನಾವಣೆಗೆ ಹೆದರಿಕೊಂಡು ಹೀಗೆ ತೀರ್ಮಾನ ಮಾಡಿದ್ದಲ್ಲ.

SRI R. M. PATIL.—The Bill is passed in this House itself. Before that, there was Ordinance, and afterwards the Bill was passed. Accordingly the Local Authorities elections have been postponed on account of the Emergency arising out of the Pakistani aggression.

(SRI R. M. PATIL)

After this Emergency is lifted, there is absolutely no difficulty in holding the elections ; whether it be Panchayathi or whether it be Taluk Boards or Municipalities. We are meant for functioning and not for staying.

Sri N. O. SAMAJI (Belgaum-II) [Marathi].—

Sri R. M. PATIL.—All elections shall be held immediately after the emergency is declared over.

ಶ್ರೀ ಗಾಂಜಿ ವೀರಪ್ಪ.—ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸರ್ಕಾರದ ಧೋರಣೆ ಏನು ಎಂದು ಹೇಳಿದ್ದರಿಂದ ಇನ್ನು ಹೆಚ್ಚು ಹೇಳಬೇಕಾಗಿಲ್ಲ. ಏಕೆಂದರೆ, ಚುನಾವಣೆ ಮುಂದಕ್ಕೆ ಹೋಗಿರುವ ಉದ್ದೇಶ, ದೇಶದಲ್ಲಿ ಯುದ್ಧದ ಒಂದು ಪರಿಸ್ಥಿತಿ ಹೋಗಿ ಶಾಂತಿ ವಾತಾವರಣ ಮೂಡುವವರೆಗೆ ಚುನಾವಣೆ ಮಾಡುವುದು ಬೇಡ ಎಂದು ಈ ಸಭೆಯ ತೀರ್ಮಾನವನ್ನು ಅನುಸರಿಸಿ ಸರ್ಕಾರ ನಡೆದುಕೊಂಡಿದೆ. ಆದರೆ ಜನರಲ್ ಎಲಕ್ಷನ್ ಮಾಡಬೇಕು ಎಂದು ತೀರ್ಮಾನ ಮಾಡಿದ್ದಾರೆ. ಬಹುಶಃ ಆಗ ತುರ್ತುಪರಿಸ್ಥಿತಿ ಇರಲಾರದು. ತುರ್ತುಪರಿಸ್ಥಿತಿ ಹೋದ ನಂತರ ಈ ಚುನಾವಣೆಗಳು ನಡೆಯಬಹುದು ಎಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಅವುಗಳನ್ನು ಏರ್ಪಾಡು ಮಾಡುವುದಕ್ಕೆ ಸರ್ಕಾರ ಸದಾ ಸಿದ್ಧವಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಲೇ ಇದ್ದಾರೆ. ಚುನಾವಣೆ ಮುಂದಕ್ಕೆ ಹೋಗಿರುವುದಕ್ಕೆ ರಾಜಕೀಯ ಉದ್ದೇಶವನ್ನು ಕಲ್ಪನೆ ಮಾಡುವುದು ಶುದ್ಧ ಊಹಾಪೋಹ.

ಶ್ರೀ ಎಸ್. ಗೋಪಾಲ ಗೌಡ.—ಒಂದು ಸಂಶಯ. ಎಮರ್ಜನ್ಸಿ ಮೊದಲು ಹೋಗುತ್ತದೊ, ಕಾಂಗ್ರೆಸ್ ಸರ್ಕಾರ ಮೊದಲು ಹೋಗುತ್ತದೊ ?

ಶ್ರೀ ಗಾಂಜಿ ವೀರಪ್ಪ.—ಗೋಪಾಲಗೌಡರಿಗೆ ಹೆದರಿ ಕಾಂಗ್ರೆಸ್ ಸರಕಾರ ಹೋಗುವುದಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಅವರ ಕಡೆಯ ಜನ ಬಂದು ಸೇರುತ್ತಿದ್ದಾರೆ.

Sri N. O. SAMAJI.—(Marathi).

ಶ್ರೀ ಗಾಂಜಿ ವೀರಪ್ಪ.—ನೀವು ಕನ್ನಡದಲ್ಲಿ ಮಾತನಾಡಿ, ಈರ್ಷ್ಯೆ ಆಗೋಣ. ಇಲ್ಲದಿದ್ದರೆ ಈರ್ಷ್ಯೆ ಆದರೂ ಏನೂ ಪ್ರಯೋಜನವಿಲ್ಲ.

Sri N. O. SAMAJI.—(Marathi).

ಶ್ರೀ ಗಾಂಜಿ ವೀರಪ್ಪ.—ನನಗೆ ಏನೂ ಗೊತ್ತಾಗಲಿಲ್ಲ. ಆದು ಏನೇ ಇರಲಿ, ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಚುನಾವಣೆಯಲ್ಲಿ ಏನೇ ಆಗಲಿ, ಒಟ್ಟಿನಲ್ಲಿ ವಿರೋಧಪಕ್ಷದವರ ಶಕ್ತಿ ಕಡಿಮೆಯಾಗುತ್ತಾ ಬಂದಿದೆ. ನಾವು ಅವರಿಗೆ ಹೆದರಿಕೊಂಡು ಚುನಾವಣೆ ಮುಂದಕ್ಕೆ ಹಾಕಬೇಕಾಗಿಲ್ಲ.

[MR. SPEAKER in the Chair]

Mr. SPEAKER.—Which provision of the Demand are we discussing ?

Sri GANJI VEERAPPA.—I will leave at that.

Mr. SPEAKER.—That is good. The Hon'ble Member may come to the provision. There are others who want to participate.

ಶ್ರೀ ಗಾಂಜಿ ವೀರಪ್ಪ.—ಚುನಾವಣೆ ವಿಷಯ ಅಷ್ಟೇ ಸಾಕು. ಚುನಾವಣೆಗೆ ಯಾರು ಹೆದರಿಕೊಳ್ಳುತ್ತಾರೆ ? ದೇಶದ ಜನರು ಪರೀಕ್ಷೆ ಮಾಡುವ ಕಾಲ ಸನ್ನಿಹಿತವಾಗಿರುವುದರಿಂದ ಇನ್ನು 7-8 ತಿಂಗಳಲ್ಲಿ ನಾವೂ ನೀವೂ ಸಾರ್ವಜನಿಕರ ಎದುರು ನಿಂತುಕೊಳ್ಳಬೇಕು. ನೋಡೋಣ. ಜನರು ಬುದ್ಧಿವಂತರಾಗಿದ್ದಾರೆ.

ಒಂದು ವಿಚಾರ ಪಂಚಾಯಿತಿ ಸೆಕ್ರೆಟರಿಗಳನ್ನು ಏನು ನೇಮಿಸಿದ್ದಾರೆ, ಅವರ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಸೆಕ್ರೆಟರಿಗಳ ಸಂಬಳವನ್ನು ಪಂಚಾಯಿತಿ ಕೊಡಬೇಕಾದರೆ, ಆ ಪಂಚಾಯಿತಿಗೆ ಸಾಕಷ್ಟು ಹಣ ಇರುವುದಿಲ್ಲ. ಪಂಚಾಯಿತಿಗೆ ಬರತಕ್ಕ ವರಮಾನವನ್ನೆಲ್ಲಾ ಸೆಕ್ರೆಟರಿ ಸಂಬಳಕ್ಕಾಗಿ ಕೊಟ್ಟರೆ ಬೇರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ತರಪೇತಿ ಆದವನನ್ನು ಸೆಕ್ರೆಟರಿಯಾಗಿ ನೇಮಿಸ

ಬೇಕೇ ವಿನಾ ಸಾಕಷ್ಟು ತರಪೇತಿ ಇಲ್ಲದೆ ಇದ್ದವನನ್ನು ನೇಮಿಸಿದರೆ, ಪ್ರಯೋಜನವಿಲ್ಲ, ಅಲ್ಲದೆ ಅನೇಕರು, ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರುವುದಿಲ್ಲ. ಅವರವರ ಊರಿಗೆ ಕೆಲಸ ಮಾಡುವುದಕ್ಕೆ ಹೋಗುತ್ತಾರೆ, ಪಂಚಾಯಿತಿ ಛೇರ್ಮನ್ನಿಗೂ ಇದೇ ಬೇಕಾಗುತ್ತದೆ, ತಮ್ಮ ಕೆಲಸ ತಾವು ಮಾಡಿಕೊಳ್ಳಬಹುದು ಸೆಕ್ರೆಟರಿ ಹೋದರೂ ಹೋಗಲಿ ಎಂದು ಇರುತ್ತಾರೆ. ಆದ್ದರಿಂದ ಸರಿಯಾದ ತರಪೇತು ಪಡೆದ ಸೆಕ್ರೆಟರಿ ಇದ್ದರೆ ಪಂಚಾಯಿತಿ ಹಣವನ್ನು ತಮ್ಮ ಸ್ವಂತ ಕೆಲಸಕ್ಕಾಗಿ ಉಪಯೋಗಿಸುವುದು ತಪ್ಪುತ್ತದೆ ಇಲ್ಲದಿದ್ದರೆ ಆಗುವುದಿಲ್ಲ. ವಿಲೇಜ್ ಲೆವೆಲ್ ವರ್ಕರ್ಸ್‌ಗೆ ಇನ್ನೂ ಹೆಚ್ಚು ತರಪೇತಿ ಬೇಕಾಗುತ್ತದೆ. ವಿಲೇಜ್ ಲೆವೆಲ್ ವರ್ಕರ್ಸ್ ಏನೂ ಕೆಲಸಮಾಡುವುದಿಲ್ಲ ಎಂದು ಕಲ್ಪನೆ ಮಾಡುವುದು ಸರಿಯಲ್ಲ. ಅನೇಕ ಗ್ರಾಮಸೇವಕರು ಕೆಲಸ ಮಾಡುವವರು ಇದ್ದಾರೆ. ಅವರಿಂದ ಉಪಯುಕ್ತ ಕೆಲಸವಾಗಿದೆ. ಅವರು ಇಲ್ಲದಿದ್ದರೆ ತಾಲ್ಲೂಕು ಬೋರ್ಡ್‌ನಲ್ಲಿ ಸರಿಯಾಗಿ ಕೆಲಸ ಮಾಡತಕ್ಕ ಜನ ಇರುವುದಿಲ್ಲ. ವಿಲೇಜ್ ಲೆವೆಲ್ ವರ್ಕರ್ಸ್ ತೆಗೆದುಹಾಕಿಬಿಡಿ ಎಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಗ್ರಾಮಸೇವಕರಿಗೆ ತರಪೇತಿ ಕೊಟ್ಟು ಸಂಬಳ ಸಾರಿಗೆಗಳು ಕಡಿಮೆ ಇದ್ದರೆ ಹೆಚ್ಚಿಗೆ ಕೊಡಿ. ಆಗ ಕೆಲಸ ಚೆನ್ನಾಗಿ ಅವರಿಂದ ಮಾಡಿಸಿಕೊಳ್ಳಬಹುದು. ಸೆಲೆಕ್ಟ್ ಮಾಡಬೇಕಾದರೆ, ಚೆನ್ನಾಗಿ ಇರುವವರನ್ನು ಸೆಲೆಕ್ಟ್ ಮಾಡಿ. ವಿದ್ಯಾ ಇಲಾಖೆಯಲ್ಲಿ ಹೇಗೆ ಟ್ರೈನ್ಡ್ ಟೀಚರ್ಸ್‌ಗೆ ಹೆಚ್ಚಿಗೆ ಗ್ರೇಡ್ ಕೊಡುತ್ತಾರೋ ಅದೇ ರೀತಿ ಒಂದು ಇನ್‌ಸೆನ್‌ಟೀವ್ ಇರುವ ಹಾಗೆ ಅವರ ಗ್ರೇಡನ್ನು ಉತ್ತಮಪಡಿಸಬೇಕು ಎಂದು ಹೇಳುತ್ತೇನೆ. ಜೀಪ್ ತೆಗೆದುಕೊಂಡು ಹೋಗುತ್ತಾರೆ ಎಂದು ಹೇಳಿದರು. ಜೀಪಿನ ದುರುಪಯೋಗವಾದಕಡೆ ಸರ್ಕಾರದವರು ಶಿಕ್ಷೆ ಮಾಡಿದ್ದಾರೆ. ಅದೇ ರೀತಿ ಮಾಡಬೇಕೇ ವಿನಾ ಈ ಸ್ಕೀಮನ್ನು ಔಟ್‌ರೈಟ್ ಕಂಡಮ್‌ನೇಷನ್ ಮಾಡುವುದು ಸರಿಯಲ್ಲ. ಇದನ್ನು ಸುಧಾರಣೆ ಮಾಡಿ ಇರತಕ್ಕಂಥ ಜನರನ್ನು ಸರಿಯಾಗಿ ಉಪಯೋಗ ಮಾಡಬೇಕು ಎಂದು ಹೇಳಿ ಈ ಬೇಡಿಕೆಯನ್ನು ಸಮರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಈಗ ಲೋಕಲ್ ಡೆವಲಪ್‌ಮೆಂಟ್ ಹಾಗೂ ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟ್, ಎನ್.ಇ.ಎಸ್. ಇವುಗಳಿಗೆ ಸಂಬಂಧಪಟ್ಟ ಡಿಮ್ಯಾಂಡ್‌ಗಳನ್ನು ನಾನು ವಿರೋಧ ಮಾಡುತ್ತೇನೆ. ವಿರೋಧ ಮಾಡತಕ್ಕ ಕಾಲದಲ್ಲಿ ಮಾನ್ಯ ಮಂತ್ರಿಗಳು ಈ ಇಲಾಖೆಯ ಒಂದು ನಿರ್ವಹಣೆಯ ಕಾರ್ಯವನ್ನು ಕೈಗೆ ತೆಗೆದುಕೊಂಡ ಕೆಲವೇ ದಿವಸದಲ್ಲಿ ಸತ್ಯದ ಸಂಗತಿಗಳನ್ನು ಹೊರಗೆಡವಿದ್ದಕ್ಕೆ ಅವರನ್ನು ಅಭಿನಂದನೆ ಮಾಡಬೇಕಾಗಿದೆ.

ಇವೊತ್ತು ಸಭೆಯ ಮುಂದೆ ಮಂಡಿಸಿರುವ ಡಿಮ್ಯಾಂಡ್ 25ರಲ್ಲಿ 4,02,07,000 ರೂಪಾಯಿಗಳನ್ನೂ, ಡಿಮ್ಯಾಂಡ್ ನಂಬರ್ 21 ರಲ್ಲಿ 32 ಲಕ್ಷ 30 ಸಾವಿರ ರೂಪಾಯಿಗಳನ್ನು ಕೇಳಿದ್ದೀರಿ. ಇದರಲ್ಲಿ 60 ಪರ್ಸೆಂಟು ಹಣವನ್ನು ಸರ್ಕಾರಿ ಅಧಿಕಾರಿಗಳಿಗೆ ಖರ್ಚು ಮಾಡುತ್ತೀರಿ. ನಾನು ಲೆಕ್ಕಾಚಾರ ಹಾಕಿ ನೋಡಿದೆ. ಇವೊತ್ತು 1,54,65,100 ರೂಪಾಯಿಗಳನ್ನು ಅಧಿಕಾರಿಗಳಿಗೋಸ್ಕರ ಈ ಇಲಾಖೆಯಲ್ಲಿ ಖರ್ಚು ಮಾಡತಕ್ಕ 4 ಕೋಟಿ ಚಿಲ್ಲರೆ ರೂಪಾಯಿ ಹಣದಲ್ಲಿ 60 ಪರ್ಸೆಂಟು ಕೇವಲ ಅಧಿಕಾರಿಗಳಿಗೆ ಖರ್ಚು ಮಾಡಿದ ಪಕ್ಷದಲ್ಲಿ ಈ ಇಲಾಖೆಯಿಂದ ಗ್ರಾಮಾಂತರ ಜನಗಳಿಗೆ ಏನೂ ಉಪಯೋಗವಾಗುವುದಿಲ್ಲ ಎಂದು ಹೇಳುತ್ತೇನೆ. ಎನ್.ಇ.ಎಸ್. ತೆಗೆದುಹಾಕಬೇಕಾದರೆ, ಆಲ್ಟರ್‌ನೇಟೀವ್ ಏಜನ್ಸಿ ಏನು ಎಂಬುದನ್ನು ಯೋಚನೆ ಮಾಡಬೇಕಾದ ಸಂದರ್ಭ ಬರುತ್ತದೆ. ಮಾನ್ಯ ಶ್ರೀ ಮುಕ್ಕಣ್ಣಪ್ಪನವರು ಬಿ.ಡಿ.ಒ. ರವರನ್ನು ಕಿತ್ತುಹಾಕಿ ಎಂದು ಹೇಳಿದರು. ಮಾನ್ಯ ಗಾಂಜಿ ವೀರಪ್ಪನವರು ಕೆಲವು ಅಭಿಪ್ರಾಯ ಕೊಟ್ಟರು. ಈ ಎರಡು ಅಭಿಪ್ರಾಯದಲ್ಲಿಯೂ ನನಗೆ ಪೂರ್ಣ ನಂಬಿಕೆ ಇಲ್ಲ ಅದಕ್ಕೆ ಕಾರಣ ಕೊಟ್ಟು ಹೇಳುತ್ತೇನೆ. ಬಿ.ಡಿ.ಒ. ಅವರನ್ನು ತೆಗೆದುಹಾಕಿದರೆ ಚೀಫ್ ಎಕ್ಸಿಕ್ಯೂಟೀವ್ ಆಫೀಸರ್ ಆಗಿ ಯಾರು ಕೆಲಸ ಮಾಡುತ್ತಾರೆ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ ಆಫೀಸರನ್ನು ಡಿಸ್ಟ್ರಿಕ್ಟ್ ಅಗ್ರಿಕಲ್‌ಚರ್ ಆಫೀಸರಿಗೆ ಸೇರಿಸಿದರೆ, ಹಿಂದೆ ಇದ್ದ ವ್ಯವಸ್ಥೆಗೆ ವಯ್ಯುಪುವಾದರೆ ತಾಲ್ಲೂಕು ಮಟ್ಟದಲ್ಲಿ ಅಭಿವೃದ್ಧಿ ಹೆಚ್ಚಿಗೆ ಪ್ರೋತ್ಸಾಹ ಕೊಡುವ ಕಾಲದಲ್ಲಿ ಡಿ.ಎ.ಒ. ಹಂತದಲ್ಲಿ ಇರತಕ್ಕ ಅಧಿಕಾರಿ ರೈತಾಪಿ ಜನಗಳಿಗೆ ಹೆಚ್ಚಿನ ರೀತಿಯಲ್ಲಿ ಸಹಕಾರ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್, ವಿಲೇಜ್ ಲೆವೆಲ್ ವರ್ಕರ್ ತಾಲ್ಲೂಕು ಮಟ್ಟದಲ್ಲಿ ಇರುವುದು ಒಳ್ಳೆಯದು. ಆದರೆ ಈ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆ ಮಾಡದೆ ಇರುವ ದೆಸೆಯಿಂದ ಟೀಕೆಗೆ ಕಾರಣವಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದರೆ, ತಾಲ್ಲೂಕಿನಲ್ಲಿ ಚುನಾಯಿತ ಸಂಸ್ಥೆಗಳು ಇವೆ. ತಾಲ್ಲೂಕು ಅಭಿವೃದ್ಧಿ ಸಮಿತಿಯವರು ಸಾಕಷ್ಟು ಮಟ್ಟಿಗೆ ಶ್ರಮವಹಿಸಿ ಕೆಲಸ ಮಾಡದೇ ಇದ್ದ ಪಕ್ಷದಲ್ಲಿ, ಅಲ್ಲಿ ಅಧಿಕಾರಿಗಳು ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಹೇಗೆ ಸಾಧ್ಯ? ಎಲ್ಲಿ ತಾಲ್ಲೂಕು ಅಭಿವೃದ್ಧಿ ಸಮಿತಿಯವರು ನಿರ್ಲಕ್ಷ್ಯ ಮಾಡಿದ್ದಾರೆ, ಅಲ್ಲಿ ನಿರೀಕ್ಷಿಸಿದಷ್ಟು ಪ್ರಗತಿ ಆಗಲಿಲ್ಲ, ಎಂದು ಹೇಳಿದರೆ ತಪ್ಪಾಗಲಾರದು. ಸ್ಟಾಫ್ ಪ್ಯಾಟರ್ನ್ ಏನು ಇದೆ, ಅದರಲ್ಲಿ ಕಡಮೆ ಮಾಡಬಹುದು. ಸೋಷಿಯಲ್ ಎಜುಕೇಷನ್ ಆರ್ಗನೈಸರ್ಸ್, ಲೇಡಿ ಸೋಷಿಯಲ್ ಎಜುಕೇಷನಲ್

(ಶ್ರೀ ಹೆಚ್. ಡಿ. ದೇವೇಗೌಡ)

ಆರ್ಗನೈಸರ್ಸ್ ಅವರನ್ನು ಕಿತ್ತುಹಾಕುವುದಕ್ಕೆ ಸಾಧ್ಯವಿದೆ. ಹಿಂದೆ ಈ ವಿಚಾರದಲ್ಲಿ ನಿರ್ಣಯ ತೆಗೆದುಕೊಂಡಿದ್ದೆವು. ಈ ಇಲಾಖೆಯಿಂದ ಎಜುಕೇಷನಲ್ ಡಿಪಾರ್ಟ್‌ಮೆಂಟಿಗೆ ಅವರನ್ನು ವರ್ಗಾಯಿಸುವುದಕ್ಕೆ ಸರ್ಕಾರ ಹುಕುಂ ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಈ ವಿಚಾರವಾಗಿ ಪ್ರಶ್ನೆಯೊಂದಕ್ಕೆ ಉತ್ತರ ಕೊಡುವ ಕಾಲದಲ್ಲಿ ಇಂಥವರು ಸುಮಾರು 530 ಜನ ಇದ್ದಾರೆ ಎಂದು ಸರ್ಕಾರದವರು ತಿಳಿಸಿದ್ದಾರೆ. ಅವರನ್ನು ಕಡಿಮೆ ಮಾಡಬಹುದು. ಇವರಲ್ಲಿ ಲೇಡಿ ಸೋಷಿಯಲ್ ಆರ್ಗನೈಸರ್ಸ್ 265 ಜನ ಇದ್ದಾರೆ. ಸೋಷಿಯಲ್ ಎಜುಕೇಷನಲ್ ಆರ್ಗನೈಸರ್ಸ್ 265 ಜನ ಇದ್ದಾರೆ. ಈಗ ಎಷ್ಟೋ ಹೈಸ್ಕೂಲುಗಳಿಗೆ ಉಪಾಧ್ಯಾಯರು ಇಲ್ಲ. ಆದ್ದರಿಂದ ಸ್ಟಾಫನ್ನು ವಿದ್ಯಾಭ್ಯಾಸ ಇಲಾಖೆಗೆ ವಾಪಸ್ಸು ಕೊಟ್ಟರೆ, ಅವರುಗಳಿಗೆ ಕೊಡತಕ್ಕ ಸಂಬಳಕ್ಕೆ ಸರಿಯಾದ ಕೆಲಸವನ್ನು ಅವರಿಂದ ತೆಗೆದುಕೊಳ್ಳಲು ಸಾಧ್ಯ ಇದೆ. ಆದಷ್ಟು ಜಾಗ್ರತೆ ಆರ್ಡರನ್ನು ಜಾರಿಗೆ ಕೊಡತಕ್ಕದರ ಬಗ್ಗೆ ವ್ಯವಸ್ಥೆ ಮಾಡಬೇಕು ಎಂದು ನಾನು ತಿಳಿಸುತ್ತೇನೆ. ಇಲ್ಲಿ ಮೆಸೆಂಜರ್ಸ್ ಎಂದು ಇಟ್ಟುಕೊಂಡಿದ್ದೀರಿ. ಅವರು ಏತಕ್ಕೆ ಬೇಕೋ ಒಂದೂ ಗೊತ್ತಾಗುವುದಿಲ್ಲ. ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಸುಮಾರು 277 ಜನ ಇದ್ದಾರೆ. ಆಮೇಲೆ ಜವಾನರು 174 ಇದ್ದಾರೆ. ಹೀಗೆ ಅನೇಕ ತಾಲ್ಲೂಕು ಬೋರ್ಡ್ ಎನ್.ಇ.ಎಸ್. ಸ್ಟಾಫ್ ಎರಡೂ ಓವರ್ ಬರ್ಡನ್ ಆಗಿದೆ. ಅದ್ದರಿಂದ ತಾಲ್ಲೂಕು ಮಟ್ಟದಲ್ಲಿ ಸ್ವಲ್ಪ ಸಂಖ್ಯೆ ಕಡಿಮೆ ಮಾಡುವುದು ಸಾಧ್ಯ, ನಾವು ಏನು ಎಸ್ಟಾಬ್ಲಿಷ್‌ಮೆಂಟ್‌ಗೋಸ್ಕರ ಖರ್ಚು ಮಾಡುತ್ತಿದ್ದೇವೆ, ಅದರಲ್ಲಿ 20-25 ಪರ್ಸೆಂಟು ಹಣವನ್ನು ಉಳಿಸುವುದಕ್ಕೆ ಸಾಧ್ಯ ಎಂದು ತಮಗೆ ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಅಡ್ಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ವ್ಯವಸಾಯಕ್ಕೆ ಎಂದರೆ, ಕ್ರಾಪ್ ಕಾಂಪಿಟೇಷನ್‌ಗೆ ರೈತರಿಗೆ ಬೇಕಾದ ಸಾಲ ಕೊಡಲು ಹೆಚ್ಚಿನ ರೀತಿಯಿಂದ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಒಂದೇ ಒಂದು ಅಂಶದ ಮೇಲೆ ನನ್ನ ವಾದವನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇವೊತ್ತಿನ ದಿವಸ ರೈತನ ಏಳಿಗೆ ಆಗಬೇಕಾದರೆ, ನಿಜವಾಗಿ ಗ್ರಾಮಸೇವಕರು, ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ ಆಫೀಸರು ಅವರ ಬಗ್ಗೆ ತಾವು ಹೆಚ್ಚಿನ ಕಂಟ್ರೋಲ್ ಇಡಬೇಕು. ಅವರಿಗೆ ಸಾಕಷ್ಟು ತರಪೇತಿ ಕೊಡಬೇಕು. ಏತಕ್ಕೆಂದರೆ, ಗ್ರಾಮಸೇವಕರ ಸಂಖ್ಯೆ ಎರಡುಸಾವಿರ ಚಿಲ್ಲರೆ ಇದೆ. ಅವರುಗಳಿಗೆ ಸಾಕಷ್ಟು ತರಪೇತಿ ಇಲ್ಲ. ಬೇರೆ ಇಲಾಖೆಯಲ್ಲಿ ಕೊಡತಕ್ಕ ಸಂಬಳವನ್ನು ಹೋಲಿಸುವುದಾದರೆ, ಇವರಿಗೆ ಸಾಕಷ್ಟು ಸಂಬಳ ಸೌಲಭ್ಯ ಇದೆ. ಎಸ್.ಎಸ್.ಎಲ್.ಸಿ. ಪಾಸು ಮಾಡಿ, ವಿ.ಟಿ.ಸಿ. ತರಪೇತಿ ಹೊಂದಿರತಕ್ಕ ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ಇರುವ ಅಧಿಕಾರಿಯ ಸಂಬಳಕ್ಕೂ ಇವನ ಸಂಬಳಕ್ಕೂ ಹೋಲಿಸಿದರೆ, ಇವರಿಗೆ ಸಾಕಷ್ಟು ಉತ್ತಮ ರೀತಿಯಲ್ಲಿ ಸಂಬಳ ಕೊಡುತ್ತಿದ್ದೇವೆ.

ಇನ್ನು ಬಿ.ಡಿ.ಓ.ಗಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಯಾಕೆಂದರೆ ಅವರಿಗೆ ಸರಿಯಾದ ತರಬೇತಿ ಯಾವುದೂ ಇಲ್ಲ. ಹಿಂದೆ ಗ್ರಾಮಸೇವಕರು ಮತ್ತು ಬಿ.ಡಿ.ಓ.ಗಳು ಸರಿಯಾಗಿ ಸಮರ್ಪಕವಾಗಿ ಕೆಲಸ ನಡೆಸದಿದ್ದರೆ ಅದನ್ನು ತೆಗೆದುಹಾಕಬೇಕೆಂದು ಒಂದು ಸಮಿತಿಯನ್ನು ನೇಮಕ ಮಾಡಿ, ಇದರ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಂಡಿದ್ದಾರೆ. ಅದರ ರೀತಿ ಯಾವ ಗ್ರಾಮಗಳಲ್ಲಿ ಸರಿಯಾಗಿ ಕೆಲಸ ನಡೆಸುವುದಿಲ್ಲವೋ, ಅಂಥದನ್ನು ತೆಗೆದುಹಾಕಬೇಕು ಮತ್ತು ಗ್ರಾಮಸೇವಕರಿಗೆ ನಾವು ಸರಿಯಾದ ತರಬೇತಿಯನ್ನು ಕೊಡಬೇಕು ಮತ್ತು ಸಂಬಳ ಸರಿಯಾಗಿರಬೇಕು. ಅವರಿಗೆ ಬೇಕಾದ ತರಬೇತಿಯನ್ನು ಕೊಡದೆ ಹೋದರೆ ನಮ್ಮ ವ್ಯವಸಾಯ ಏನಿದೆ ಅದು ಯಾವ ಕಾರಣದಿಂದಲೂ ಮುಂದುವರಿಯಲು ಸಾಧ್ಯವಾಗುವುದಿಲ್ಲ.

ಇವತ್ತು ನಾನಾ ಇಲಾಖೆಗಳಲ್ಲಿ ಒಂದು ಹೊಂದಾಣಿಕೆ ಇಲ್ಲ. ಇವತ್ತು ಅನಿಮಲ್ ಹಸ್ಬೆಂಡರಿ, ಅಗ್ರಿಕಲ್ಚರ್ ಮತ್ತು ಕೋ-ಅಪರೇಟೀವ್ ಇಲಾಖೆಗಳಲ್ಲಿ ಸಾಕಷ್ಟು ಹೊಂದಾಣಿಕೆ ಇಲ್ಲ. ಇದರಿಂದ ಆಗಬೇಕಾದಂತಹ ಅಭಿವೃದ್ಧಿ ಕೆಲಸಗಳು ಸಮರ್ಪಕವಾಗಿ ಆಗುವುದಿಲ್ಲ. ಒಬ್ಬೊಬ್ಬ ಅಧಿಕಾರಿಯು ತನ್ನ ತನ್ನ ಜವಾಬ್ದಾರಿಯನ್ನು ನೋಡಿಕೊಂಡು ಕೆಲಸ ಮಾಡುತ್ತಾನೆಯೇ ಹೊರತು. ದೇಶದ ಕೆಲಸ, ಜನರ ಕೆಲಸ ಎಂದು ಒಂದು ಆಸಕ್ತಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲ. ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಗಳಲ್ಲಿ ವ್ಯವಸಾಯ ಇಲಾಖೆಯ ಡೈರೆಕ್ಟರನ್ನು ಕೇಳಿದಾಗ, ಅವರು ಹೇಳುತ್ತಾರೆ, ಫೌಂಡೇಷನ್ ಸೀಡ್ಸನ್ನು ರಿಜಿಸ್ಟರ್ಡ್ ಸೀಡ್ಸ್ ಗ್ರೋಯರ್ಸಿಗೆ ಕೊಟ್ಟುಬಿಟ್ಟರೆ ನಮ್ಮ ಜವಾಬ್ದಾರಿ ಮುಗಿದುಹೋಯಿತು ಎಂದು ಹೇಳುತ್ತಾರೆ. ಇದನ್ನು ನೋಡಿದರೆ ಪ್ರತಿಯೊಬ್ಬ ಅಧಿಕಾರಿಯೂ ತನ್ನ ತನ್ನ ಜವಾಬ್ದಾರಿಯನ್ನು ಮಾತ್ರ ನೋಡಿಕೊಂಡು ಕೆಲಸ ಮಾಡುತ್ತಾರೆಯೇ ಹೊರತು ಒಂದು ವಿಶಾಲ ಮನೋಭಾವವನ್ನು ಇಟ್ಟುಕೊಂಡು, ಜನತೆಯ ಅನುಕೂಲಕ್ಕೋಸ್ಕರ ಮಾಡುವುದಿಲ್ಲ. ಇದರಿಂದಾಗಿ ತುಂಬಾ ಟೀಕೆಗೆ ಕಾರಣವಾಗುತ್ತದೆ ಎಂದು ಹೇಳುತ್ತೇನೆ. ಇದರಿಂದ ಸರಕಾರದವರು ಇಂತಹ ಇಲಾಖೆಗಳ ಮೇಲೆ ಸರಿಯಾದ ಹಿಡಿತವನ್ನು ಇಟ್ಟುಕೊಂಡು ಕೆಲಸ ಕಾರ್ಯಗಳನ್ನು ನಡೆಸಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸುಳ್ಯ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಇಟ್ಟಿರುವ ಡಿಮ್ಯಾಂಡ್ ನಂಬರ್ 21 ಮತ್ತು 25ನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. 21ನೇ ಡಿಮ್ಯಾಂಡಿನಲ್ಲಿ 31 ಲಕ್ಷ ರೂಪಾಯಿಯನ್ನು ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಣಿಸ ಲಾಗಿದೆ. ಅದರ ವಿವರ ಹಾಕಿಲ್ಲ. ನನ್ನ ಒಂದು ಸೂಚನೆಯೇನೆಂದರೆ ಈ ಸ್ಕೀಂ ಒಂದು ವಾಸ್ತ ವಿಕವಾದ ರೀತಿಯಲ್ಲಿ, ಕ್ರಿಯಾತ್ಮಕವಾದ ರೀತಿಯಲ್ಲಿ ತಯಾರಾಗಲಿ. ಸಲಹೆ ಕೊಡಲು ಬೇಕಾದಷ್ಟು ಅನುಭವವುಳ್ಳ ಅಧಿಕಾರಿಗಳು ಇರಲಿ, ಅವರು ಹಳ್ಳಿಗಳಿಗೆ ಹೋಗಿ ಅಲ್ಲಿ ಕೂತುಕೊಂಡು, ಅಲ್ಲಿಯ ಪರಿಸ್ಥಿತಿಯನ್ನನುಸರಿಸಿ ಅದನ್ನು ಸ್ಕ್ರೂಟಿನೈಸ್ ಮಾಡಲಿ ಎಂದು ಹೇಳುತ್ತೇನೆ.

ಇನ್ನು 37ನೇ ಡಿಮ್ಯಾಂಡಿನಲ್ಲಿ 4 ಕೋಟಿ 7 ಲಕ್ಷ ಇಟ್ಟಿದ್ದಾರೆ. ಈ ಇಲಾಖೆಯ ಕರ್ತವ್ಯ ಮತ್ತು ಜವಾಬ್ದಾರಿಯನ್ನು ನೋಡಿದರೆ, ಈ ಹಣ ಏನೂ ಸಾಲದು ಎಂದು ಹೇಳಬಹುದು. ನಮ್ಮ ಪಂಚಾಯಿತ್ತುಗಳು ಒಳ್ಳೇ ರೀತಿಯಿಂದ ಕೆಲಸ ಮಾಡಿದರೆ, ಮಾತ್ರ ನಮ್ಮ ಇಡೀ ರಾಜ್ಯಕ್ಕೆ ಒಳ್ಳೆಯದಾದೀತು. ಏಕೆಂದರೆ, ಪಂಚಾಯಿತಿಗಳು ಎಲ್ಲದಕ್ಕೂ ಮೂಲ. ಆದುದರಿಂದ ಪಂಚಾ ಯಿತಿ ಅಭಿವೃದ್ಧಿಗೊಂಡರೆ ಮಾತ್ರ ನಮ್ಮ ದೇಶವೇ ಅಭಿವೃದ್ಧಿಗೊಳ್ಳುವುದು. ಅಷ್ಟೇ ಅಲ್ಲದೆ ನಮ್ಮ ಹಳ್ಳಿಗಳಲ್ಲಿರುವ ಕೆಳಮಟ್ಟದ ಹರಿಜನರು, ಗಿರಿಜನರು ಹಾಗೂ ಹಿಂದುಳಿದ ಪಂಗಡಗಳನ್ನು ಮುಂದೆ ತರಬೇಕಾದರೆ ಪಂಚಾಯತ್ ರಾಜ್ಯಗಳು ಅಭಿವೃದ್ಧಿಗೊಳ್ಳಬೇಕು. ಇದಕ್ಕಾಗಿ ಪಂಚಾಯಿತಿಗಳು ಒಂದು ದಕ್ಷತೆ, ನಿಷ್ಠೆಯಿಂದ ಕೆಲಸ ಮಾಡಿದರೆ ಮಾತ್ರ ಪಂಚಾಯಿತಿ ರಾಜ್ಯಗಳ ಪ್ರಯೋಜನವಾಗ ಬಹುದು. ಅದಕ್ಕೆ ಸಂಪೂರ್ಣ ಜವಾಬ್ದಾರಿ ಕೊಡಬೇಕು ಮತ್ತು ಪಂಚಾಯತ್ ನಾನ್-ಅಫಿಷಿಯಲ್ ಗಳನ್ನು ಚೆನ್ನಾಗಿ ನಂಬಬೇಕು.

ನಮ್ಮ ಸುಳ್ಯ ಪಂಚಾಯಿತ್ತು ಸುಮಾರು 4-5 ವರ್ಷಗಳಿಂದ ಕೆಲಸ ಮಾಡದೆ ಇನ್ನೂ ಹಾಗೆ ಕೊಳೆ ಯುತ್ತಾ ಇದೆ ಎಂದು ಹೇಳುವುದಕ್ಕೆ ನನಗೆ ತುಂಬಾ ವಿಷಾದವಾಗುತ್ತದೆ. ಅಧಿಕಾರಿಗಳು ಇದರಲ್ಲಿ ರಾಜಕೀಯ ಹೆಚ್ಚಾಗಿ ಬೆಳೆಸಿದ ಕಾರಣ ಹೀಗಾಗಲು ಕಾರಣವಾಯಿತ್ತು. ಇದು ಹೈಕೋರ್ಟಿನವರೆಗೆ ಹೋಗಿ, ಹೈಕೋರ್ಟಿನವರು ಆದೇಶ ಕೊಟ್ಟರೂ, ಅದನ್ನು ಮನ್ನಿಸದೆ ಇನ್ನು ಅದನ್ನು ''ಪ್ರೊಲಾಂಗ್'' ಮಾಡುತ್ತಾ ಇದ್ದಾರೆ. ಇದು ಬಹಳ ಬೇಸರದ ಸಂಗತಿಯಾಗಿದೆ. ನಾನಾದರೂ ಹೇಳುತ್ತೇನೆ, ಪಂಚಾಯಿತ್ತು ಆಡಳಿತ ವ್ಯವಸ್ಥೆಯಲ್ಲಿ ಸ್ವಲ್ಪ ತಿದ್ದುಪಡಿ ಮಾಡಬೇಕು. ತಾಲ್ಲೂಕು ಮಟ್ಟದಲ್ಲಿ, ಎಕ್ಸ್‌ಟೆನ್‌ಷನ್ ಆಫೀಸರ್ ಇದ್ದಾರೆ, ಹಾಗೆ ಡಿಸ್ಟ್ರಿಕ್ಟ್ ಲೆವಲಿನಲ್ಲಿ ಈಗ ಡೆಪ್ಯುಟಿ ಕಮಿಷನರಿದ್ದಾರೆ, ಅವರ ಬದಲಿಗೆ ಪ್ರತ್ಯೇಕವಾಗಿ ಡೆಪ್ಯುಟಿ ಪಂಚಾಯಿತ್ತು ಆಫೀಸರ್ ಇರಬೇಕೆಂದು ಹೇಳುತ್ತೇನೆ. ಹಾಗೆ ರಾಜ್ಯ ಮಟ್ಟಕ್ಕೆ ಡೈರೆಕ್ಟರ್ ಆಫ್ ಪಂಚಾಯಿತಿ ಇರಬೇಕು ಸಂಪೂರ್ಣವಾಗಿ ಪಂಚಾಯಿತಿ ರಾಜ್ಯದ ಕೆಳಗಿನಿಂದ ತಲೆಯವರೆಗೆ ಇರುವ ಅಧಿಕಾರ ಇವರಿಗಿರುತ್ತದೆ. ಇದಕ್ಕೆ ಹೊಸ ಅಧಿಕಾರಿಗಳನ್ನೇ ಮಾಡಿ ಎಂದು ನಾನು ಹೇಳುವುದಿಲ್ಲ. ಈಗಿನ ಮಿತವ್ಯಯಕ್ಕನುಸಾರ ವಾಗಿ ನಡೆಯುವಂತೆ ಅಗ್ರಿಕಲ್ಚರಲ್ ಡೈರೆಕ್ಟರ್ ಅಥವಾ ಡೆವಲಪ್‌ಮೆಂಟ್ ಕಮಿಷನರಿಗೆ ಇದನ್ನು ಬಿಟ್ಟು ಬಿಟ್ಟು ಪಂಚಾಯತಿಗೆ ಅಧಿಕಾರಿಗಳನ್ನು ಹೆಚ್ಚಿಸಿಕೊಡಬೇಕು. ಏಕೆಂದರೆ ಪಂಚಾಯಿತಿ ರಾಜ್ಯದ ಕೆಲಸ ಮುಖ್ಯವಾದುದು. ಬೇಕಾದರೆ ಇನ್ನೊಂದು ಇಲಾಖೆಯನ್ನೂ ಇದರ ಜೊತೆಗೆ ಸೇರಿಸಿ ಏಕರೂಪವಾದ ಒಬ್ಬ ಪಂಚಾಯಿತಿ ಡೈರೆಕ್ಟರು ಇರುವುದು ಬಹಳ ಪರಿಣಾಮಕರವಾದುದು ಎಂದು ನನಗನ್ನಿಸುತ್ತದೆ.

ಇನ್ನು ಗ್ರಾಮಸೇವಕರ ವಿಚಾರ. ದಕ್ಷಿಣ ಕನ್ನಡದಲ್ಲಿ ತುಳು ಭಾಷೆ ಮಾತನಾಡುವ ಜನ ಬಹಳ ಇದ್ದಾರೆ. ಅಲ್ಲಿಗೆ ಯಾರಾದರೂ ಹೊರಗಿನವರು ಅಧಿಕಾರಿಗಳಾಗಿ ಬಂದರೆ ಹಳ್ಳಿಯ ಜನರಿಗೆ ಯಾವುದಾದರೂ ವಿಷಯವನ್ನು ಮನದಟ್ಟಾಗುವಂತೆ ತಿಳಿಸಲು ಬಲು ಕಷ್ಟವಾಗುತ್ತದೆ. ಉದಾಹರಣೆಗೆ ಅಲ್ಲಿ ಬಳಕೆಯಲ್ಲಿರುವುದು ಮುಡಿ, ಕೆಳಗೆ ಸೇರು, ಪಾವು ಮತ್ತು ಕುಡ್ತೆ. ಹೀಗೆ ಪ್ರತಿಯೊಂದರಲ್ಲೂ ಭಾಷೆಯಲ್ಲೂ ಹೆಚ್ಚು ಕಡಿಮೆ ಇದೆ. ಭಾಷೆಯ ಹೆಚ್ಚು ಕಡಿಮೆಯಿಂದ ಗ್ರಾಮ ಸೇವಕರಿಗೆ ಅವರು ಕೈಕೊಳ್ಳುವ ಕಾರ್ಯ ಅಷ್ಟೊಂದು ಫಲದಾಯಕವಾಗಿ ಮಾಡಲಾಗುವುದಿಲ್ಲ. ಹಳ್ಳಿಯ ಸಮಸ್ಯೆಯೇ ಒಂದು ಕಷ್ಟದ ಸಮಸ್ಯೆ. ಅದರಲ್ಲೂ ಭಾಷೆಯು ಹೀಗೆ ಭಿನ್ನವಾಗಿರು ವಾಗ ಉಭಯತರಿಗೂ ತುಂಬಾ ಅನಾನುಕೂಲವಾಗುತ್ತದೆ.

ಇನ್ನು ಗ್ರಾಮಸೇವಕರನ್ನು ನೇಮಿಸುವ ವಿಚಾರ. ಇಂತಹ ಕೆಲಸಗಳಿಗೆ ಉದ್ಯೋಗವನ್ನು ಹುಡುಕಿಕೊಂಡು ಬರುವವರನ್ನು ನೇಮಿಸಬಾರದು. ಏಕೆಂದರೆ, ಕೆಲಸಕ್ಕೆ ಬರುವವರು, ಕೆಲಸ ಕ್ಕಾಗಿ ಅಷ್ಟು ಆಸಕ್ತಿಯನ್ನು ವಹಿಸುವುದಿಲ್ಲ. ಅದರ ಬದಲು ಇಂತಹ ಕೆಲಸಗಳಿಗೆ ಕೃಷಿಯಲ್ಲಿ ನುರಿತ, ಕುಟುಂಬದ ಕೃಷಿಯಲ್ಲಿ ಆಸಕ್ತಿಯುಳ್ಳ ಯುವಕರನ್ನು ನೇಮಿಸಬೇಕು.

ಬರೇ ಉದ್ಯೋಗಕ್ಕೆ ಬಂದಂಥವರು, ತಮ್ಮ ಆಫೀಸಿನ ಕಾಲಾವಧಿಯಾದ 10-30ಯಿಂದ 5-30ಯ ವರೆಗೆ ಇರುವುದೇ ವಿನಹ ಬೇರೆ ಕಾಲಾವಧಿಯಲ್ಲೂ ತಮ್ಮ ಕೆಲಸದಲ್ಲಿ ಆಸಕ್ತಿಯಿಟ್ಟು ಕೆಲಸ ಮಾಡು ವುದಿಲ್ಲ. ಇಂಥವರಿಗೆ ಅಧಿಕಾರವನ್ನು ಕೊಟ್ಟರೆ ಹಳ್ಳಿಯಲ್ಲಿರುವ ಬೇರೆ ಬೇರೆ ಕುಟುಂಬಗಳಿಂದ

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಬರತಕ್ಕ ಸಮಸ್ಯೆಗಳನ್ನು ಪರಿಹರಿಸಲಾಗುವುದಿಲ್ಲ. ಕೈಮಿಾರಿ, ಆಸಕ್ತಿಯಿಂದ ಅಲ್ಲಿನ ಕೆಲಸ ಕಾರ್ಯಗಳನ್ನು ಮಾಡಿದರೆ ಮಾತ್ರ ಹಳ್ಳಿಯ ಜನರಿಗೆ ಪ್ರಯೋಜನವಾಗುತ್ತದೆ.

ಇನ್ನೊಂದು ಮಾತು ಹೇಳುತ್ತೇನೆ. ಶ್ರೀ ಮುಕ್ಕಣ್ಣಪ್ಪನವರು ಹೇಳಿದರು, ವ್ಯವಸಾಯ ಮಾಡುವುದರಲ್ಲಿ, ಬಡವರು ಮಾಡುವ ರೀತಿಯೇ ಬೇರೆ, ದೊಡ್ಡವರು ಮಾಡುವ ರೀತಿಯೇ ಬೇರೆ ಎಂದು. ಶ್ರೀಮಾನ್ ಘೋರ್ಪಡೆಯವರು ಹೇಳಿದ್ದು ಆ ರೀತಿಯಲ್ಲ; ಅವರು ಕೃಷಿ ಮಾಡುವ ವಿಧಾನವನ್ನು ಹೇಳಿದ್ದಾರಷ್ಟೇ ಹೊರತು ಆ ತರಹ ಹೇಳಿದ್ದಲ್ಲ. ಎಲ್ಲರೂ ಬೀಜವನ್ನು ಬಿತ್ತಿಯೇ ಸಸಿ ಮಾಡುತ್ತಾರೆ. ಎಲ್ಲರೂ ಸಸಿಯನ್ನು ಬೇರು ಕೆಳಗೆ ಹಾಕಿ, ಅದರ ತಲೆ ಮೇಲೆ ಹಾಕಿ ನೆಡುತ್ತಾರೆಯೇ ಹೊರತು ಬೇರು ಮೇಲೆ ಮಾಡಿ ತಲೆ ಕೆಳಗೆ ಹಾಕಿ ಯಾರೂ ನೆಡುವುದಿಲ್ಲ. ಆದ್ದರಿಂದ ಎಲ್ಲರೂ ಕೃಷಿ ಮಾಡುವುದು ಒಂದೇ ತರಹ. ಆದರೆ, ಇದಕ್ಕೆಲ್ಲಾ ಹಣ ಬೇಕಾದುದು, ಮಾಹಿತಿ, ಅನುಭವ ಬೇಕಾದುದು ಅಗತ್ಯ. ಇವುಗಳಿದ್ದರೆ ಕೃಷಿಯನ್ನು ಒಳ್ಳೆಯ ರೀತಿಯಲ್ಲಿ ಮಾಡಬಹುದು. ಸರ್ಕಾರದವರು ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಿ ಅನುಕೂಲ ಮಾಡಬೇಕು; ಅಥವಾ ತಾಂತ್ರಿಕ ಜ್ಞಾನವನ್ನು ಮತ್ತು ಇನ್ನಿತರ ಬೇಕಾದ ಫರ್ಟಿಲೈಸರ್ಸ್ ಎಲ್ಲಾ ಕೊಟ್ಟಲ್ಲಿ ಇನ್ನೂ ಉತ್ತಮವಾದ ರೀತಿಯಲ್ಲಿ ಬೆಳೆಯನ್ನು ತೆಗೆಯಬಹುದು. ಶ್ರೀ ಮುಕ್ಕಣ್ಣಪ್ಪನವರು ಸಿನಿಮಾದಲ್ಲಿ ಯಾರಾದರೂ ಈ ಪದ್ಧತಿಯನ್ನು ತೋರಿಸಿದರೆ ಬಹಳ ಚೆನ್ನಾಗಿ ಇದೆ ಎಂದು ಹೇಳುತ್ತಾರೆ, ಆದರೆ ಅದನ್ನು ಸಜೆಶನ್ ರೂಪವಾಗಿ ಹೇಳಿದರೆ ಅವರಿಗೆ ಅದು ಹಿಡಿಸುವುದಿಲ್ಲ, ಅದಕ್ಕೆ ನಾನಾ ತರಹ ಟೀಕೆಗಳನ್ನು ಮಾಡುತ್ತಾರೆ. ಇದು ಅಷ್ಟು ಸಮಂಜಸವೂ ಅಲ್ಲ, ಹಿತಕರವೂ ಅಲ್ಲ ಎಂದು ಹೇಳಿ ಅಧ್ಯಕ್ಷರಿಗೆ ವರದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

† ಶ್ರೀ ಬಿ. ಚನ್ನಬೈರೇ ಗೌಡ (ಹೊಸಕೋಟೆ).—'ಸ್ವಾಮಿ, ಡಿಮಾಂಡ್ 21 ಮತ್ತು 25 ಇವುಗಳನ್ನು ನಾನು ವಿರೋಧಿಸುತ್ತ ಸರ್ಕಾರದ ಗಮನಕ್ಕೆ ಕೆಲವು ವಿಷಯಗಳನ್ನು ತರಬೇಕೆಂದಿದ್ದೇನೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ತೆಗೆದುಹಾಕಿ ಎಂದು ವಿರೋಧ ಪಕ್ಷದ ಸದಸ್ಯರು ಹೇಳಿದರು. ಇದನ್ನು ಏತಕ್ಕೋಸ್ಕರ ತೆಗೆದುಹಾಕಬೇಕು, ಇದು ಏಕೆ ಇದೆ, ಇದು ಏನೇನು ಮಾಡಿದೆ ಎನ್ನುವುದನ್ನು ನೋಡೋಣ. ರಾಷ್ಟ್ರೀಯ ವಿಸ್ತರಣಾ ಯೋನೆಯನ್ನು ನಮ್ಮ ದೇಶದಲ್ಲಿ ಜಾರಿಗೆ ತಂದು 15 ವರ್ಷವಾಯಿತು. ಮಾನ್ಯ ಗಾಂಜಿ ವೀರಪ್ಪನವರ ಇದು ಇರಬೇಕು, ಬಹಳ ಚೆನ್ನಾಗಿ ಕೆಲಸ ಮಾಡಿದೆ ಎಂದು ಹೇಳಿದರು. ಮಾನ್ಯ ಸದಸ್ಯರ ಜೊತೆಗೆ ಈ ಸಭೆಯು ಇನ್ನು ಐದು ಜನರನ್ನೊಳಗೊಂಡ ಒಂದು ಕಮಿಟಿಯನ್ನು ಮಾಡಿ, ರಾಜ್ಯದಲ್ಲಿ ಯಾವುದಾದರೂ ಐದು ಗ್ರಾಮಗಳನ್ನು ಆರಿಸಿಕೊಂಡು ಆ ಗ್ರಾಮಗಳಿಗೆ ಹೋಗಿ ಎನ್. ಇ. ಎಸ್. ಜಾರಿಗೆ ಬಂದ ಮೇಲೆ ಆ ಗ್ರಾಮಗಳಲ್ಲಿ ಏನು ಅಭಿವೃದ್ಧಿಯಾಗಿದೆ, ಏನು ಆದಾಯ ಹಚ್ಚಿದೆ, ಏನಾದರೂ ವಿಶೇಷ ಪ್ರಗತಿಯಾಗಿದೆಯೇ. ಏನಾದರೂ ಪ್ರಗತಿದಾಯಕವಾದ ಕೆಲಸ ನಡೆದಿದೆಯೇ, ವ್ಯವಸಾಯಾಭಿವೃದ್ಧಿಯಾಗಿದೆಯೇ ಎನ್ನುವುದನ್ನು ಪರೀಕ್ಷೆ ಮಾಡಿ. ಅಲ್ಲಿ ಏನಾದರೂ ಅಭಿವೃದ್ಧಿಯಾಗಿದ್ದರೆ ಈ ಯೋಜನೆಯನ್ನು ಮುಂದುವರಿಸೋಣ, ಇಲ್ಲದೆ ಇದ್ದರೆ ತೆಗೆದು ಹಾಕೋಣ. ಈ ಯೋಜನೆಯನ್ನು ಮಧ್ಯ ಪ್ರದೇಶದಲ್ಲಿ ತೆಗೆದು ಹಾಕಿದರು, ಮಹಾರಾಷ್ಟ್ರದಲ್ಲಿ ತೆಗೆದು ಹಾಕಿದರು. ನಮ್ಮಲ್ಲಿಯೂ ಕೂಡ ವರ್ಷೇ ವರ್ಷೇ ಆರ್ಥಿಕ ಪರಿಸ್ಥಿತಿ ಶೋಚನೀಯವಾಗುತ್ತಿರುವುದರಿಂದ ಎನ್. ಇ. ಎಸ್. ಯೋಜನೆಯನ್ನು ರದ್ದುಮಾಡಿ ಅದಕ್ಕೆ ಖರ್ಚಾಗುವ ದುಡ್ಡನ್ನು ಉಳಿಸಿಕೊಂಡು ಬೇರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಉಪಯೋಗಿಸಿ ನೇರವಾಗಿ ರೈತನಿಗೆ ವ್ಯವಸಾಯಕ್ಕೆ ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಎನ್. ಇ. ಎಸ್. ಅಧಿಕಾರಿಗಳು ಏಕೆ ಇದ್ದಾರೆಂದರೆ, ಯಾವಾಗ ಬೇಕಾದರೂ ಯಾವ ಚುನಾವಣೆಗಳಿಗೆ ಬೇಕಾದರೂ ಅವರನ್ನು ಬಳಸಿಕೊಳ್ಳುವುದಕ್ಕೆ ಆಗುತ್ತದೆ ಎಂದು ಸರ್ಕಾರ ಇಟ್ಟುಕೊಂಡಿದೆ. ಅವರಿಗೆ ಜೀಪ್ ಕೊಟ್ಟು ಚುನಾವಣೆಗಳಲ್ಲಿ ಅವರಿಂದ ಸಹಾಯ ಪಡೆಯುತ್ತಾರೆ,

ಒಬ್ಬ ಮಾನ್ಯ ಸದಸ್ಯರು.—ಚುನಾವಣೆಗಳು ಯಾವತ್ತಿಗೂ ಇರುವುದಿಲ್ಲ,

ಶ್ರೀ ಬಿ. ಚನ್ನಬೈರೇಗೌಡ.—ಒಂದು ವರ್ಷದಲ್ಲಿ ಸುಮಾರು ಹತ್ತು ಚುನಾವಣೆಗಳಿರುತ್ತವೆ. ಇಂಡಸ್ಟ್ರೀಸ್ ಸೊಸೈಟಿ. ಮಲ್ಟಿಪರ್ಪಸ್ ಸೊಸೈಟಿ, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್, ಡಿಸ್ಟ್ರಿಕ್ಟ್ ಬ್ಯಾಂಕ್ ಹೀಗೆ ಒಂದಲ್ಲ ಒಂದು ಒಟ್ಟು ಹತ್ತು ಚುನಾವಣೆಗಳು ಒಂದು ವರ್ಷದಲ್ಲಿ ನಡೆಯುತ್ತವೆ. ಇಂಡಸ್ಟ್ರಿಯಲ್ ಕೋ-ಅಪರೇಟಿವ್ ಸೊಸೈಟಿಗಳ ಚುನಾವಣೆಗಳಲ್ಲಿ ಇಂಡಸ್ಟ್ರೀಸ್ ಎಕ್ಸ್‌ಟೆನ್‌ಷನ್ ಆಫೀಸರನ್ನು ಜೀಪ್ ಕೊಟ್ಟು ಸೊಸೈಟಿ ಇನ್‌ಸ್ಪೆಕ್ಷನ್ ಮಾಡುವ ನೆಪದಿಂದ ಕಳುಹಿಸಿ ಚುನಾವಣೆ

ಗಳಲ್ಲಿ ಅವರ ಸಹಾಯವನ್ನು ತೆಗೆದುಕೊಳ್ಳುತ್ತಾರೆ, ಇತರ ಸೊಸೈಟಿಗಳ ಚುನಾವಣೆಗಳಾದರೆ ಕೋ-ಅಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರನ್ನು ಕಳುಹಿಸುತ್ತಾರೆ. ಇಲ್ಲಿ ಕೆಲಸ ಮಾಡುವ ಅಧಿಕಾರಿಗಳು ಜೀಪನ್ನು ತಮ್ಮ ಮನಸ್ಸಿಗೆ ಬಂದ ಹಾಗೆ ಉಪಯೋಗಿಸಿಕೊಳ್ಳುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಹೀಗೆ ದುರುಪಯೋಗ ಮಾಡುತ್ತಿದ್ದ ವಿಚಾರದಲ್ಲಿ ಡೆಪ್ಯುಟಿ ಕಮಿಷನರ್ ಅವರಿಗೆ ದೂರು ಕೊಟ್ಟೆ. ಎರಡು ರಾತ್ರಿ ಜೀಪು ಎಲ್ಲಿತ್ತು ಎಂದು ಗೊತ್ತಾಗಲಿಲ್ಲ. ಮೂರನೆಯ ದಿನ ರಾತ್ರಿ ಬೆಂಗಳೂರಿನಲ್ಲಿ ಆಗ ನಡೆಯುತ್ತಿದ್ದ ಒಂದು ಸರ್ಕಸ್ ಪ್ರದರ್ಶನದ ಮುಂದೆ ನಿಂತಿತ್ತು. ಅದನ್ನು ಪತ್ತೆ ಹಚ್ಚಿ ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿ ಅವರ ಬಗ್ಗೆ ವಿಚಾರ ಮಾಡಬೇಕು ಎಂದು ಇದ್ದಾಗ ಮೈಸೂರು ಸರ್ಕಾರದ ರೆವಿನ್ಯೂ ಮಂತ್ರಿಗಳಿಂದ ಒಂದು ಕರೆ ಬಂತು. ಈ ಸಂಬಂಧದಲ್ಲಿ ಯಾರನ್ನೂ ಸಸ್ಪೆಂಡ್ ಮಾಡಬೇಡಿ, ಏನೂ ಕ್ರಮ ತೆಗೆದುಕೊಳ್ಳಬೇಡಿ, ಆ ಫೈಲನ್ನು ನನ್ನ ಕಡೆಗೆ ಕಳಿಸಿಕೊಡಿ ಎಂದು ಫೈಲನ್ನು ತರಿಸಿಕೊಂಡರು. ಅದರ ಮೇಲೆ ಏನೂ ಮಾಡಲಿಲ್ಲ. ಕೆಲವು ಕಾಲ ಕಳೆದ ಮೇಲೆ ಅವರನ್ನು ಯಾವುದೋ ಊರಿಗೆ ವರ್ಗ ಮಾಡಿದರು. ರಾಷ್ಟ್ರೀಯ ವಿಸ್ತರಣಾ ಯೋಜನೆಗಳಿಗೆ ಕೊಟ್ಟಿರುವ ಜೀಪುಗಳನ್ನು ಮದುವೆಗಳಿಗೆ ಉಪಯೋಗಿಸುತ್ತಾರೆ, ಹೆಣ್ಣು ಮಕ್ಕಳನ್ನು ಕರೆದುಕೊಂಡು ಹೋಗಲು ಉಪಯೋಗಿಸುತ್ತಾರೆ, ಆದರೆ ಅಭಿವೃದ್ಧಿ ಕಾರ್ಯಗಳು ಮಾತ್ರ ಆಗುತ್ತಿಲ್ಲ. ಒಂದು ಜೀಪನ್ನು ಮೇಂಟೇನ್ ಮಾಡಬೇಕಾದರೆ ಸುಮಾರು 600 ರೂಪಾಯಿಗಳ ರೆಕರಿಂಗ್ ಖರ್ಚು ಬರುತ್ತದೆ, ಡ್ರೈವರ್ ಸಂಬಳ 150 ರೂಪಾಯಿ ಆಗುತ್ತದೆ, ಒಟ್ಟು 750 ರೂಪಾಯಿ ದೇಶದ ದುಡ್ಡನ್ನು ಖರ್ಚು ಮಾಡಿ ಅದರಿಂದ ನಿಮ್ಮ ಅಭಿವೃದ್ಧಿ ಕಾರ್ಯಗಳ ಬೆಳವಣಿಗೆ ಆಗುತ್ತಿದೆ. ಕಾಂಗ್ರೆಸ್ ಪಕ್ಷದ ಉದ್ಧಾರ ಮಾಡುವುದಕ್ಕೆ ಎನ್. ಇ. ಎಸ್. ಅಧಿಕಾರಿಗಳನ್ನು ಉಪಯೋಗಿಸಿಕೊಳ್ಳುವುದು ಉಚಿತವಲ್ಲ, ಹೀಗೆ ಮಾಡುವುದರಿಂದ ದೇಶವು ಊರ್ಜಿತವಾಗುವುದಿಲ್ಲ. ಇದು ಯಾರಿಗೇ ಆಗಲಿ ಭೂಷಣ ತರುವಂಥ ಕಾರ್ಯವಲ್ಲ. ಆದಕಾರಣ ಎನ್. ಇ. ಎಸ್. ಅನ್ನು ತೆಗೆದುಹಾಕಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಮಾನ್ಯ ಮಂತ್ರಿಗಳು ಹೇಳಿದರು, ಪಂಚಾಯಿತಿಗಳಿಗೆ ಬೇರೆ ಸೆಕ್ರೆಟರಿಯನ್ನು ನೇಮಕಮಾಡುತ್ತೇವೆ ಎಂದು. ರೆವಿನ್ಯೂ ಮಂತ್ರಿಗಳು ವಿಲೇಜ್ ಆಫೀಸರ್ಸ್ ಕೆಲಸವನ್ನು ನೋಡಿಕೊಳ್ಳಲು ಬೇರೊಬ್ಬ ಸೆಕ್ರೆಟರಿಯನ್ನು ನೇಮಕ ಮಾಡುತ್ತಾರೆ. ಇದರಿಂದ ಗ್ರಾಮಗಳಲ್ಲಿ ಪಂಚಾಯಿತಿ ಸೆಕ್ರೆಟರಿ ಒಬ್ಬ, ರೆವಿನ್ಯೂ ವಸೂಲಿಗೆ ಒಬ್ಬ ಸೆಕ್ರೆಟರಿ ಹೀಗೆ ಇಬ್ಬರೂ ಸೇರಿದರೆ ಅವರ ಸಂಬಳಕ್ಕೆ ಎರಡರಷ್ಟು ದುಡ್ಡು ಖರ್ಚಾಗುತ್ತದೆ. ಇಷ್ಟು ಹಣವನ್ನು ಎಲ್ಲಿಂದ ತರುವುದು ? ಪಂಚಾಯಿತಿ ಸೆಕ್ರೆಟರಿ ಮತ್ತು ರೆವಿನ್ಯೂ ವಸೂಲಿಗೆ ಒಬ್ಬರನ್ನೇ ನೇಮಕ ಮಾಡಿದರೆ ಎರಡಕ್ಕೂ ಕೋಆರ್ಡಿನೇಷನ್ ಇದ್ದು ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುತ್ತವೆ. ಈ ಬಗ್ಗೆ ಸರ್ಕಾರದವರು ತೀವ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಪಂಚಾಯಿತಿಗಳಿಗೆ ಕೆಲವು ಕಡೆ ಸೆಕ್ರೆಟರಿಗಳನ್ನು ನೇಮಕ ಮಾಡಿದ್ದಾರೆ. ಯಾವ ಗ್ರಾಮ ಪಂಚಾಯಿತಿಯಲ್ಲಿಯೂ ಮೊಹತರ್ಫ ವಸೂಲ್ಮಾಡುತ್ತಿಲ್ಲ. ಸರ್ಕಾರದವರು ಕೊಡತಕ್ಕ ಭೂಮಿ ಮೇಲೆ ಬರುವ ಕಂದಾಯದ ಭಾಗಾಂಶದಲ್ಲಿ ಸಂಬಳವನ್ನು ತೆಗೆದುಕೊಂಡು ಕರೆಂಟ್ ಚಾರ್ಜನ್ನು ಕೊಡುತ್ತಿದ್ದಾರೆ. ಇದಕ್ಕೆ ಮಾತ್ರ ಪಂಚಾಯಿತಿ ಇದ್ದ ಹಾಗೆ ಆಗಿದೆ. ಇದುವರೆಗೂ, ಈ ಪಂಚಾಯಿತಿಗಳಿಂದ ಯಾವ ವಿಧವಾದ ಅಭಿವೃದ್ಧಿ ಕಾರ್ಯಗಳೂ ಆಗಿಲ್ಲ. ಮಾನ್ಯ ಗಾಂಜಿ ವೀರಪ್ಪನವರು ಹೇಳಿದರು, ಕೆಲವು ಅಧಿಕಾರಿಗಳಿಗೆ ಕೆಲಸವಿಲ್ಲ, ಅವರನ್ನು ತೆಗೆಯಬೇಕು ಎಂದು. ಕೆಲಸವಿಲ್ಲದ ಅಧಿಕಾರಿಗಳನ್ನು ತೆಗೆದು ಹಾಕಿದರೆ ಒಳ್ಳೆಯದು. ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನೇ ತೆಗೆದುಹಾಕಿದರೆ ಅದರಿಂದ ಹಣದ ಉಳಿತಾಯವಾದರೂ ಆಗುತ್ತದೆ. ಇದರಲ್ಲಿ ಕೆಲಸ ಮಾಡುವ ಅಧಿಕಾರಿಗಳ ಸಂಖ್ಯೆಯನ್ನು ನೋಡಿದರೆ, ಮಂಡ್ಯದಲ್ಲಿ ಪ್ಯಾಕೇಜ್ ಸ್ಕೀಂ ಎಂದು ಮಾಡಿದ್ದಾರೆ, ಹಾಗೆ ಇದು ಎನ್. ಇ. ಎಸ್. ಆಫೀಸರ್ಸ್ ಪ್ಯಾಕೇಜ್ ಸ್ಕೀಂ ಆಗಿದೆ ಎಂದು ಹೇಳಬಹುದು. ಈ ಅಧಿಕಾರಿಗಳು ಎಲ್ಲಿಗಾದರೂ ಹೋಗಬೇಕಾದರೆ ಒಂದು ಜೀಪ್ ಸಾಕಾಗುವುದಿಲ್ಲ. ಒಂದು ಸಲ ಕೆಲವರನ್ನು ಬಿಟ್ಟು ಬಂದು ಮತ್ತೊಂದು ಸಲ ಉಳಿದವರನ್ನು ಕರೆದುಕೊಂಡು ಹೋಗಬೇಕು. ಯಾವುದಾದರೂ ಒಂದು ಪ್ರಾರಂಭೋತ್ಸವಕ್ಕೆ ಅಥವಾ ಇತರ ಕೆಲಸಗಳಿಗೆ ಯಾರಾದರೂ ಬಂದರೆ ಅವರನ್ನು ಕರೆದುಕೊಂಡು ಬಂದು, ದೊಡ್ಡ ಭಾಷಣ ಮಾಡಿಸಿ, ಟಗರು ಕಾಳಗ, ಕುಣಿತ ಇಂಥವುಗಳನ್ನು ನಡೆಸಿ ಅವರನ್ನು ತೃಪ್ತಿಪಡಿಸಿ ಕಳಿಸಿಕೊಡುತ್ತಾರೆ. ಇಂಥ ಅವಿವೇಕಿಗಳು ನಡೆಸುತ್ತಿರುವ ರಾಷ್ಟ್ರೀಯ ವಿಸ್ತರಣಾ ಯೋಜನೆ ಕಾರ್ಯಕ್ರಮವನ್ನು ಕೂಡಲೇ ನಿಲ್ಲಿಸಿ, ಅದನ್ನು ತೆಗೆದು ಹಾಕಿ, ಆದರಿಂದ ಉಳಿತಾಯವಾಗುವ ಹಣವನ್ನು ರೈತರಿಗೆ ನೇರವಾಗಿ ಅನುಕೂಲವಾಗುವ ಕಾರ್ಯಗಳಿಗೆ ಉಪಯೋಗ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ಬಹಳ ಕಟುವಾಗಿ ಮಾತನಾಡಿದಂಥ ನಮ್ಮ ಸ್ನೇಹಿತರು ಬಹುತೇಕ ಗ್ರಾಮಾಂತರ ಪ್ರದೇಶದಿಂದ ಬಂದಿರುವವರು. ಅವರು ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಕುರಿತು ತೀವ್ರವಾಗಿ ವಿರೋಧಿಸಿ, ಈ ಯೋಜನೆಯಿಂದ ಗ್ರಾಮಾಂತರ ಪ್ರದೇಶದ ಜನಗಳಿಗೆ ಯಾವ ಪ್ರಯೋಜನವೂ ಆಗಿಲ್ಲ, ಹಣವೆಲ್ಲ ಬರೀ ಅಧಿಕಾರಿಗಳಿಗೋಸ್ಕರ ಖರ್ಚಾಗಿದೆ, ಜನಗಳಿಗೆ ಇದರಿಂದ ಏನೂ ಪ್ರಯೋಜನವಾಗಿಲ್ಲ, ಇದನ್ನು ರದ್ದು ಮಾಡಬೇಕು ಇತ್ಯಾದಿ ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ. ಇದನ್ನು ಕಂಡು ನನಗೆ ಬಹಳ ಅಶ್ಚರ್ಯವಾಗಿದೆ. ಅದರಲ್ಲಿಯೂ ಕೂಡ ಗ್ರಾಮಾಂತರ ಪ್ರದೇಶದಿಂದ ಬಂದಿರುವವರು, ಹಳ್ಳಿಗಳ ಜನರಲ್ಲಿ, ವ್ಯವಸಾಯದಲ್ಲಿ ಆಸಕ್ತಿ ಉಳ್ಳವರು, ಜನಗಗಲ್ಲಿ ಕ್ರಾಂತಿ ಆಗಬೇಕು, ಅವರ ಮನೋಭಾವ ಬದಲಾವಣೆಯಾಗಬೇಕು, ಅವರಿಗೆ ನೇರವಾಗಿ ಸಹಾಯ ದೊರೆಯಬೇಕು, ಅವರ ವ್ಯವಸಾಯಾಭಿವೃದ್ಧಿಯಾಗಬೇಕು, ಎಂಬ ವಿಚಾರಗಳಲ್ಲಿ, ರೈತರಲ್ಲಿ ಆಸಕ್ತಿ ಉಳ್ಳಂಥ ಸ್ನೇಹಿತರು ಈ ರೀತಿಯಾಗಿ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಟೀಕೆ ಮಾಡಿದ್ದು ವಾಸ್ತವಾಂಶಕ್ಕೆ ಬಹಳ ದೂರವಾಗಿದೆ ಎಂದು ನಾನು ಹೇಳುತ್ತೇನೆ. ಈ ಪಕ್ಷದವರು ಮಾತ್ರವಲ್ಲ ಇತರ ಅನೇಕ ಸ್ನೇಹಿತರೂ, ಈ ಸಭೆಯ ಸದಸ್ಯರು ತಾಲ್ಲೂಕು ಬೋರ್ಡ್ ಮೆಂಬರುಗಳಾಗಿ, ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕೆಲಸ ಕಾರ್ಯಗಳಲ್ಲಿ ಭಾಗವಹಿಸಿ, ಅಧಿಕಾರಿಗಳ ಜೊತೆಯಲ್ಲಿ ಮತ್ತು ತಾಲ್ಲೂಕ್ ಬೋರ್ಡ್ ಮೆಂಬರುಗಳ ಜೊತೆಯಲ್ಲಿ ಸೇರಿಕೊಂಡು ಅತ್ಯುತ್ತಮವಾಗಿ ಕೆಲಸಗಳನ್ನು ಕೆಲವು ಕ್ಷೇತ್ರಗಳಲ್ಲಿ ಮಾಡಿರುವುದನ್ನು ನಾನು ಖುದ್ದು ನೋಡಿದ್ದೇನೆ. ನಮ್ಮ ಸ್ನೇಹಿತರು, ಇಲ್ಲಿ ಮಾತನಾಡಿ ಟೀಕೆ ಮಾಡಿದಂಥವರಲ್ಲಿ ಕೆಲವರು ನಮ್ಮ ಭಾಗದಲ್ಲಿ ಅತ್ಯುತ್ತಮವಾಗಿ ಕೆಲಸ ಕಾರ್ಯಗಳು ನಡೆದಿವೆ, ನಮ್ಮ ಅದೃಷ್ಟವಶಾತ್ ಒಳ್ಳೆಯ ಬಿ.ಡಿ.ಓ. ಬಂದಿದ್ದಾರೆ, 50-60 ವರ್ಷಗಳಿಂದಲೂ ಆಗದೆ ಇದ್ದಂಥ ಉತ್ತಮವಾದ ಕೆಲಸ ಕಾರ್ಯಗಳು ನಾಲ್ಕಾರು ವರ್ಷಗಳಲ್ಲಿ ಆಗಿವೆ ಎಂದು ಮಾತನಾಡಿದ್ದನ್ನು ನಾನು ಕಿವಿಯಾರೆ ಕೇಳಿದ್ದೇನೆ. ಸ್ವಾತಂತ್ರ್ಯ ಬಂದ ಮೇಲೆ ಅದರ ಫಲ ಜನಗಳಿಗೂ ಲಭಿಸಬೇಕು ಎಂದು ಕಾಂಗ್ರೆಸ್ ಮುಖಂಡರು ಕುಳಿತುಕೊಂಡು ಆಲೋಚನೆ ಮಾಡಿ ಗ್ರಾಮಾಂತರಗಳಲ್ಲಿ ಶೇಕಡ 80ಕ್ಕಿಂತ ಹೆಚ್ಚು ಜನಗಳು ವಾಸ ಮಾಡುತ್ತಿದ್ದು, ವ್ಯವಸಾಯವನ್ನು ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಇಂಥವರ ಆರ್ಥಿಕ ಪರಿಸ್ಥಿತಿ ಉತ್ತಮವಾಗದೆ ಹೋದರೆ ಸಾಮಾಜಿಕವಾಗಿ, ನೈತಿಕವಾಗಿ, ಅವರು ಮುಂದೆ ಬಾರದೆ ಹೋದರೆ ಈ ಸ್ವಾತಂತ್ರ್ಯ ಸಂಪೂರ್ಣವಾಗಿ, ಅದರ ಫಲ ದೊರಕಿದಂತೆ ಆಗುವುದಿಲ್ಲ ಎಂದು ತಿಳಿದುಕೊಂಡು ರೈತರನ್ನು ಉದ್ಧಾರ ಮಾಡುವುದಕ್ಕೆ, ನಮ್ಮ ದೇಶದ ಹಳ್ಳಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಜಾರಿಗೆ ತಂದರು. ನನ್ನ ಅನುಭವದಲ್ಲಿ, ನಮ್ಮ ಸರ್ಕಾರದವರು ಮಾಡಿರತಕ್ಕ ಅನೇಕ ಯೋಜನೆಗಳಲ್ಲಿ ಈ ಸಾಮುದಾಯಿಕ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆ ಏನಿದೆ ಇದು ಬಹಳ ಶ್ರೇಷ್ಠವಾದದ್ದು, ಯೋಗ್ಯವಾದದ್ದು, ಅದರ ಪ್ರತಿಫಲ ಬಹುತೇಕ ಜನಗಳಿಗೆ ದೊರೆತಿದೆ, ನಮ್ಮ ಗ್ರಾಮಾಂತರ ಪ್ರದೇಶದ ಜನಗಳು ಹಿಂದೆ ನೌಕರರುಗಳ ಸಹಾಯವಿಲ್ಲದೆ, ಬುದ್ಧಿವಂತರ ಸಹಾಯ ಸಹ ಇಲ್ಲದೆ, ಜಿಲ್ಲಾ ಕೇಂದ್ರಗಳಿಗೆ ಬರುವುದಕ್ಕೆ ಸಾಧ್ಯವಿಲ್ಲದೆ ಇದ್ದಂಥ ರೈತರು ಇವತ್ತಿನ ದಿವಸ ಈ ಯೋಜನೆಯನ್ನು ತಂದ ಮೇಲೆ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಚುನಾವಣೆಗೆ ಟಿಕೆಟ್ ಸಿಕ್ಕಲಿ ಎಂದು ಮಾತನಾಡುತ್ತಿದ್ದೀರಾ!

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮಾನ್ಯ ಸದಸ್ಯರು ಹಾಗೆ ಬಾವಿಸಬೇಕಾಗಿಲ್ಲ. ಟಿಕೆಟ್ ನನಗೆ ಖಂಡಿತವಾಗಿಯೂ ಸಿಕ್ಕುತ್ತದೆ. ಅದಕ್ಕಾಗಿ ನಾನು ಹೀಗೆ ಮಾತನಾಡಬೇಕಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೇಂದ್ರ ಸರ್ಕಾರದ ಈಗಿನ ಆಹಾರ ಸಚಿವರು ಹೇಳಿದ್ದಾರೆ, ಇದನ್ನು ತೆಗೆದುಹಾಕಬೇಕು ಎಂದು. ಅದಕ್ಕೆ ಏನು ಹೇಳುತ್ತೀರಿ!

ಸರ್ಕಾರದವರು ಅನೇಕ ಯೋಜನೆಗಳನ್ನು ಮಾಡುವಾಗ ಲೋಪದೋಷಗಳು ಕೆಲವು ಬರುತ್ತವೆ. ಕೆಲವುಭಾಗ ವೇಸ್ಟೇಜ್ ಆಗುತ್ತದೆ. ಇವತ್ತಿನ ದಿವಸ ಡಿಫೆನ್ಸ್ ಬಹು ಮುಖ್ಯವಾದುದು. ಅದಕ್ಕಾಗಿ ಇವತ್ತು ನಾವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಅದರಲ್ಲಿ ಹಲವಾರು ಕೋಟಿ ರೂಪಾಯಿಗಳು ಅನಿವಾರ್ಯವಾಗಿ ವೇಸ್ಟ್ ಆದರೆ ಆ ಕಾರಣದಿಂದಲೇ ಈ ಯೋಜನೆಗಳು ಬೇಡವೆಂದು ಹೇಳುವುದು ನ್ಯಾಯವಲ್ಲ. ಗ್ರಾಮಾಂತರ ಪ್ರಾಂತಗಳಿಗೆ ಖರ್ಚು ಮಾಡುವುದು ಸ್ವಲ್ಪ ಮಟ್ಟಿಗೆ ನಷ್ಟವಾಗಬಹುದು. ಗ್ರಾಮಾಂತರ ಪ್ರದೇಶಗಳಿಗೆ ನೇರವಾಗಿ ಸಹಾಯವಾಗತಕ್ಕ ಯೋಜನೆ ಅಂದರೆ ರಾಷ್ಟ್ರೀಯ ವಿಸ್ತರಣ ಯೋಜನೆ. ಇವತ್ತಿನ ದಿವಸ ಇದರಲ್ಲಿ ಕೆಲವು ಕಡೆಗಳಲ್ಲಿ ಲೋಪದೋಷಗಳು ಕಂಡಿರಬಹುದು. ಎಂದಮಾತ್ರಕ್ಕೇ ಆ ಯೋಜನೆಯನ್ನೇ ಬೇಡವೆಂದು ಹೇಳುವುದು ಸರಿಯೇ? ನನ್ನ ಅನುಭವದಲ್ಲಿ ಹಿಂದೆ ಅನೇಕ ಗ್ರಾಮಗಳಿಗೆ ರಸ್ತೆಗಳೇ ಇರಲಿಲ್ಲ. ಕುಡಿಯುವ ನೀರಿನ ಭಾವಿಗಳೇ ಇರಲಿಲ್ಲ, ವ್ಯವಸಾಯವನ್ನೂ ಕೂಡ ನಮ್ಮ ರೈತರು ಹಳೆಯ ರೀತಿಯಲ್ಲಿ ಅಂದರೆ,

ಯಾವುದೋ ಒಬೀರಾಯನ ಕಾಲದಲ್ಲಿ ನಡೆದ ಹಾಗೆ ನಡೆಸುತ್ತಾ ಇದ್ದರು. ವ್ಯವಸಾಯೋತ್ಪತ್ತಿಯೂ ಕೂಡ ಬಹಳ ಕಡಮೆ ಬರುತ್ತಿತ್ತು ಇವತ್ತು ಯಾವ್ಯಾವ ಕ್ಷೇತ್ರದಲ್ಲಿ ಬಿ. ಡಿ. ಓ. ಗಳು ಒಳ್ಳೆಯವರಾಗಿ, ದಕ್ಷರಾಗಿ ಕೆಲಸ ಮಾಡಿದ್ದಾರೆ ಅಂತಹ ಕ್ಷೇತ್ರಗಳಲ್ಲಿ ಬಹಳ ಉತ್ತಮವಾದ ಕೆಲಸಗಳು ನಡೆದಿವೆ. ಗ್ರಾಮ ಸೇವಕರೂ ಹಾಗೂ ಗ್ರಾಮ ಸೇವಿಕೆಯರೂ ಸಹ ಅತ್ಯುತ್ತಮವಾದ ಕೆಲಸಗಳನ್ನು ಗ್ರಾಮಾಭಿವೃದ್ಧಿಗಾಗಿ ಮಾಡಿ ಸೇವೆ ಸಲ್ಲಿಸುತ್ತಿದ್ದಾರೆ. ಇದರಿಂದ ಜನಗಳಲ್ಲಿ ಒಂದು ಚೈತನ್ಯ ಬಂದಿದೆ. ಕಾರ್ಯದಕ್ಷತೆ ಗ್ರಾಮಾಂತರ ಪ್ರದೇಶಗಳಲ್ಲಿ ಉಂಟಾಗಿದೆ. ಗ್ರಾಮಾಂತರ ವಾಸಿಗಳೂ ಸಹ ಇನ್ನೂ ಹೆಚ್ಚಿಗೆ ಮುಂದುವರಿಯಬೇಕೆಂಬ ಆಶೆಯನ್ನು ಇಟ್ಟುಕೊಂಡಿದ್ದಾರೆ. ಬರೀ ಹಣವನ್ನು ಖರ್ಚು ಮಾಡುವುದೇ ಅಲ್ಲ. ಅಧಿಕಾರಿಗಳಿಗೆ ಒಂದು ಭಾಗ ಹಣ ಖರ್ಚಾಗುತ್ತದೆಯಾದರೂ ಉಳಿದ ಹಣ ಗ್ರಾಮಾಂತರ ಪ್ರದೇಶದ ಜನಗಳಿಗೆ ಖರ್ಚಾಗುತ್ತಿದೆ.

ಇನ್ನು ಜೀಪುಗಳ ವಿಷಯವಾಗಿ ವಿರೋಧ ಪಕ್ಷದವರು ಮಾತನಾಡುತ್ತಾ ಬಹಳ ಅಸಹಕಾರವಾಗಿ ಮತ್ತು ಕ್ಷುಲ್ಲಕವಾಗಿ ಮಾತನಾಡಿದರು. ಅವುಗಳ ಉಪಯೋಗ ಬ್ಲಾಕುಗಳಲ್ಲಿ ಬಹಳ ಮಟ್ಟಿಗೆ ಇದೆ. ಇವತ್ತಿನ ದಿವಸ ಮಳೆ ಬೆಳೆ ಹೋಯಿತು. ಬೇಸಿಗೆ ಬೆಳೆಯ ಕಾಲದಲ್ಲಿ ಯೋಗ್ಯವಾಗಿ ಬಿ. ಡಿ. ಓ. ಗಳು ಹಾಗೂ ಗ್ರಾಮಸೇವಕರು ಉತ್ತಮವಾದ ಬೀಜಗಳನ್ನು ರೈತರಿಗೆ ಯಾವ ರೀತಿಯಲ್ಲಿ ಹಂಚಿದ್ದಾರೆಂಬುದನ್ನೆಲ್ಲಾ ಬಿಟ್ಟು ಎಲ್ಲೋ ಯಾರೋ ಒಬ್ಬ lady social welfare officer ನ್ನು ಬಿ. ಡಿ. ಓ. ಜೀಪಿನಲ್ಲಿ ಕರೆದುಕೊಂಡು ಹೋದರು ಎಂಬುದಾಗಿ ಬಹಳ ಅಸಹ್ಯವಾದ ಮಾತನ್ನು ವಿರೋಧ ಪಕ್ಷದವರು ಮಾತನಾಡಿದರು. ಅದು ಖಂಡಿತವಾಗಿ ಸರಿಯಲ್ಲ. ಕಾಂಗ್ರೆಸ್ ಸರ್ಕಾರದವರು ಮಾಡಿದಂತಹ ಯೋಜನೆಗಳೆಲ್ಲಾ ಬಹಳ ಅತ್ಯುತ್ತಮವಾದ ಯೋಜನೆಗಳು ಎಂಬುದಾಗಿ ಜನಗಳು ತಿಳಿದುಕೊಂಡಿದ್ದಾರೆ. ಆದ್ದರಿಂದಲೇ ಜನಗಳು ಸರ್ಕಾರಕ್ಕೆ ಹೆಚ್ಚಿನ ಗೌರವ ಹಾಗೂ ಬೆಂಬಲವನ್ನು ಕೊಡುತ್ತಿದ್ದಾರೆಂಬುದನ್ನು ತಿಳಿದುಕೊಂಡು, ಇನ್ನೆಲ್ಲಿ ಕಾಂಗ್ರೆಸ್‌ನವರು ಇನ್ನೂ ಹೆಚ್ಚು ಜನಪ್ರಿಯರಾಗುತ್ತಾರೋ ಎಂಬ ಹೆದರಿಕೆ ಕೆಲವರಲ್ಲಿ ಉಂಟಾಗಿದೆ. ಕಾಂಗ್ರೆಸ್ ಸರ್ಕಾರದವರು ಜನಗಳಿಗೆ ಈ ಯೋಜನೆಗಳ ಮುಖಾಂತರ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಟ್ಟು ಜನರ ಒಲುವನ್ನು ಸಂಪಾದಿಸುತ್ತಿದ್ದಾರೆ. ಅದಕ್ಕೋಸ್ಕರ ಈ ಯೋಜನೆಗಳನ್ನು ಹೇಗಾದರೂ ಮಾಡಿ ಸ್ಕ್ರಾಪ್ ಮಾಡಬೇಕು ಎಂಬುದಾಗಿ ಇಲ್ಲ ಕೂಗಾಟ ಮಾಡುತ್ತಿದ್ದರೆ ನಿಜವಾಗಿ ಇವರ ಈ ಮರುಳು ಮಾತಿಗೆ ಕಾಂಗ್ರೆಸ್ ಸರ್ಕಾರದವರು ಅಥವಾ ಜನರು ಬೆರಗಾಗುತ್ತಾರೆಯೇ ಎಂದು ನಾನು ಕೇಳುತ್ತೇನೆ. ಅದು ವಿರೋಧ ಪಕ್ಷದವರ ಕಲ್ಪನೆಯ ಮಾತು ಎಂಬುದಾಗಿ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಕೆಲವು ಕಡೆಗಳಲ್ಲಿ ಅಲ್ಪ ಸ್ವಲ್ಪ ದೋಷಗಳಿದ್ದರೂ ಬಹಳ ಉಪಯುಕ್ತವಾದ ಯೋಜನೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಡೆದಿವೆ, ಎಲ್ಲಕ್ಕಿಂತಲೂ ಮೇಲಾಗಿ ಸರ್ಕಾರವೇ ಹಣ ಖರ್ಚು ಮಾಡುವುದೇ ಅಲ್ಲ. ಈಗ Peoples Contribution ಎಂಬುದಾಗಿ ಜನರು ಕೊಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಯಾವುದಾದರೂ ಒಂದು ಕೆಲಸವನ್ನು ಮಾಡಬೇಕು ಎಂದು ಹೇಳಿದರೆ ಅಲ್ಲಿಗೆ ಸರ್ಕಾರದವರು 5 ಸಾವಿರ ರೂಪಾಯಿಗಳ ನೆರವು ಮಾಡಿದರೆ ಜನಗಳು 10 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂತಹ ಯೋಜನೆಗಳು ಈಗ ಬಹಳ ಮುಖ್ಯವಾದುವು. ಎಲ್ಲಾ ಕೆಲಸ ಕಾರ್ಯಗಳೂ ಸರ್ಕಾರದ ಹಣದಿಂದಲೇ ಆಗಬೇಕೆಂದರೆ ಕಷ್ಟ. ಗ್ರಾಮೋದ್ಧಾರಕ್ಕೆ ಸರ್ಕಾರದ ನೆರವೂ ಬೇಕು ಜನಗಳ ಕಂಟ್ರಿಬ್ಯೂಷನ್ ಸಹ ಬೇಕು. ಹೀಗಾದರೆ ಸಾವಿರಾರು ಅಥವಾ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡಿ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಬಹಳ ಯಶಸ್ವಿಯಾಗಿ ಮಾಡಬಹುದು. ಇಲ್ಲದಿದ್ದರೆ ಯಾವ ರೀತಿಯಲ್ಲೂ ಗ್ರಾಮಾಭಿವೃದ್ಧಿಯಾಗಲಾರದು. ಆದ್ದರಿಂದ ಗ್ರಾಮಾಂತರ ವಾಸಿಗಳೂ ಸಹ ಬೃಹದಾಕಾರವಾದ ರೀತಿಯಲ್ಲಿ ಅಲ್ಪಸ್ವಲ್ಪ ಹಣವನ್ನು ಕೊಟ್ಟು ಅವರವರೇ ಕೆಲಸಗಳನ್ನು ಅವರವರೇ ಮಾಡಿಕೊಂಡು ಅವರ ಕಾಲಿನ ಮೇಲೆ ಅವರೇ ನಿಂತುಕೊಳ್ಳುವ ಹಾಗೆ ಮಾಡಿಕೊಂಡರೆ ಇನ್ನೂ ಹೆಚ್ಚಿಗೆ ಗ್ರಾಮಾಭಿವೃದ್ಧಿ ಕೆಲಸ ಕಾರ್ಯಗಳು ಆಗುತ್ತವೆ. ಗ್ರಾಮವಾಸಿಗಳಿಂದಲೇ ಗ್ರಾಮೋದ್ಧಾರವಾಗಬೇಕೆಂಬ ಪ್ರಚಾರ ದೃಷ್ಟಿಯಿಂದ ಬುದ್ಧಿವಂತರಾದ ಕೆಲವು ಬಿ.ಡಿ.ಓ. ಗಳು, ವಿಲೇಜ್ ವರ್ಕರ್ಸ್, ರೈತರಲ್ಲಿ ಸ್ನೇಹಿತರಾಗಿ, ಸಲಹೆಗಾರರಾಗಿ ಹಾಗೂ ಮಾರ್ಗದರ್ಶಕರಾಗಿ ಅನೇಕ ಬ್ಲಾಕುಗಳಲ್ಲಿ ಕೆಲಸ ಮಾಡಿರುವುದನ್ನು ನಮ್ಮ ಸ್ನೇಹಿತರನೇಕರು ನೋಡಿದ್ದಾರೆ. ಅವರೆಲ್ಲರೂ ಮೆಚ್ಚಿದ್ದಾರೆ. ಈಗಾಗಲೇ ಈ ಯೋಜನಾ ಕೆಲಸ ಕಾರ್ಯಗಳು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭವಾಗಿರುವುದರಿಂದ ಸರ್ಕಾರದವರು ಇದರಲ್ಲಿರತಕ್ಕ ಲೋಪದೋಷಗಳನ್ನು ತಿದ್ದಿ ಅಲ್ಲಲ್ಲೇ ಸರಿಪಡಿಸುವಂತೆ ಮಾಡಿದರೆ, ಆಗ ಈ ಯೋಜನೆಗಳು ಫಲಪ್ರದವಾಗಿ ಮುಂದುವರಿಯುತ್ತವೆ. ಹೀಗೆ ನಮ್ಮ ದೇಶದ ಕಲ್ಯಾಣಕ್ಕಾಗಿ ಸರ್ಕಾರದವರು ಭಾಗಿಗಳಾಗಬೇಕೆಂದು ನಾನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಅಧ್ಯಕ್ಷರೇ, ಇವತ್ತಿನದಿವಸ ಈ ಡೆವಲಪ್‌ಮೆಂಟ್ ಗ್ರಾಂಟುಗಳಿಗೆ ಮಂಜೂರಾತಿ ಕೊಡುವುದಕ್ಕೆ ಬದಲಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮಗೆ ಇವರು ಮಾಡತಕ್ಕ ಯಾವ ಯೋಜನೆಯೇ ಆಗಲೀ ಅದು ಕೆಟ್ಟದ್ದು ಅಲ್ಲ. ಆದರೆ ಅದನ್ನು ಕಾರ್ಯಗತಮಾಡತಕ್ಕಂಥ ರೀತಿನೀತಿಯಲ್ಲಿ ನಮ್ಮ ದೇಶ ದೌರ್ಭಾಗ್ಯದಿಂದ ಕೊಡಿದೆ. ರಾಜಕೀಯ ಭಿನ್ನಾಭಿಪ್ರಾಯಗಳ ದೆಸೆಯಿಂದ ಇವರಿವರ ತಿಕ್ಕಾಟದಲ್ಲಿ ಇಂತಹ ಒಳ್ಳೆಯ ಯೋಜನೆಗಳೆಲ್ಲಾ ಮಣ್ಣು ಪಾಲಾಗುವ ಸಂದರ್ಭ ಬರುತ್ತದೆ. ನನ್ನಮಟ್ಟಿಗೆ ಹೇಳುವುದಾದರೆ, ನಾನು ಮಂಡ್ಯಾ ಜಿಲ್ಲೆಯಿಂದ ಬರುತ್ತಿದ್ದೇನೆ. ಅಲ್ಲಿ ಏಳು ತಾಲ್ಲೂಕು ಬೋರ್ಡುಗಳಿವೆ. ಅವುಗಳಲ್ಲಿ ಮೂರು ಮಾತ್ರ ಬಹಳ ಚಾಕಕ್ಯತೆಯಿಂದ ಕೆಲಸಗಳನ್ನು ಚೆನ್ನಾಗಿ ಮಾಡಿಕೊಂಡು ಬರುತ್ತಾ ಇವೆ. ನನ್ನ ಕ್ಷೇತ್ರದ ವಿಚಾರವಾಗಿ ಹೇಳುವುದಾದರೆ ರಾಜಕೀಯದಲ್ಲಿ ನನಗೂ ಮತ್ತು ತಾಲ್ಲೂಕು ಬೋರ್ಡಿನ ಅಧ್ಯಕ್ಷರಿಗೂ ಭಿನ್ನಾಭಿಪ್ರಾಯವಿದ್ದರೂ ಅಭಿವೃದ್ಧಿ ವಿಷಯದಲ್ಲಿ ಯಾವಾಗಲೂ ಭಿನ್ನಾಭಿಪ್ರಾಯವಿಲ್ಲ. ಅವರು ಯಾವ ಕೆಲಸಗಳನ್ನು ಮಾಡಲಿ, ನಾನೂ ಅವರೂ ಕುಳಿತು ಚರ್ಚೆಮಾಡಿ ಯಾವುದು ಸೂಕ್ತವೆನ್ನುವುದನ್ನು ತಿಳಿದು ಎಲ್ಲಾ ಕಾರ್ಯಗಳನ್ನು ನಾವು ಮುಂದುವರಿಸುತ್ತಾ ಇದ್ದೇವೆ. ಆದರೆ ದೇಶದ ಅಭಿವೃದ್ಧಿ ಕಾರ್ಯಗಳು ಕಾಂಗ್ರೆಸ್‌ನ ಸ್ವತ್ತು ನಮ್ಮ ಸ್ವತ್ತೆಂದು ಹೇಳಿಕೊಳ್ಳುವುದು ಬುದ್ಧಿಗೇಡತನ. ಇಂಥಾದ್ದನ್ನೆಲ್ಲಾ ಉತ್ತಮ ಸ್ಥಿತಿಯಲ್ಲಿ ತರಬೇಕಾಗಿದ್ದರೆ ನಾವೂ ನೀವೂ ಕೂಡಿ ಹೆಚ್ಚಾಗಿರುವ ನಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ನಾವು ಕೆಲಸ ಮಾಡಿದರೆ ಯಶಸ್ಸು ಖಂಡಿತವೆಂದು ನನಗೆ ಭಾಸವಾಗುತ್ತದೆ. ಇದರಲ್ಲಿ ಎಲ್ಲರೂ ಒಂದು ದೊಡ್ಡ ನ್ಯೂನತೆ ಇದೆಯೆಂದು ಹೇಳುತ್ತಾರೆ. ಅದೇನೆಂದರೆ, ಕೊಆರ್ಡಿನೇಷನ್ ಮತ್ತು ಕೊಆಪರೇಷನ್ ಅಧಿಕಾರಿಗಳಲ್ಲಿ ಮತ್ತು ಖಾಸಗೀ ಜನಗಳಲ್ಲಿ ಇಲ್ಲವೆಂಬ ಭಾವನೆ ಬರುತ್ತಿದೆ. ಆ ಸಹಕಾರ ನಮ್ಮಲ್ಲಿ ಬಂದರೆ ಕೆಲಸಮಾಡುವ ಅಧಿಕಾರಿಗಳು ಆದಷ್ಟು ಸಲಹೆಗಳನ್ನು ಬಹಳ ಚೆನ್ನಾಗಿ ಕೊಡುತ್ತಾರೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಯಾರಾದರೂ ಸರಿಯೇ ಅವರು ದಯವಿಟ್ಟು ನಾಗಮಂಗಲಕ್ಕೆ ಬರಲಿ ಎಂದು ಅವರನ್ನು ನಾನು ಕೇಳುತ್ತೇನೆ. ಅಲ್ಲಿ ರಾಜಕೀಯ ಮಾಡುವ ವ್ಯಕ್ತಿಗಳು ಕೆಲವರು ಇದ್ದಾರೆ. ರಾಜಕೀಯ ಮಾಡುವ ವ್ಯಕ್ತಿಗಳು ನಮ್ಮಲ್ಲೂ ಇದ್ದಾರೆ, ಅವರ ಕಡೆಯಲ್ಲಿಯೂ ಇದ್ದಾರೆ. ನಮಗಿಂತಲೂ ಜಾಸ್ತಿ ಅವರ ಕಡೆಯಲ್ಲಿಯೇ ಇದ್ದಾರೆ. ಇಂಥಾ ಜನಗಳಿಂದ ಇಲ್ಲದಸಲ್ಲದ ಕ್ಷುಲ್ಲಕವಾದ ಅಪಪ್ರಚಾರಗಳು ಬರುತ್ತಾ ಇವೆ. ಶ್ರೀಮಾನ್ ಗೋಪಾಲಗೌಡರು ಮಾತನಾಡುತ್ತಾ ಬಹಳ ಅತ್ಯುತ್ತಮವಾದ ಸಲಹೆಗಳನ್ನು ಇವತ್ತು ಸರ್ಕಾರಕ್ಕೆ ಕೊಟ್ಟಿದ್ದಾರೆ. ನಾನಾದರೂ ಅವರು ಹೇಳಿದ ಪ್ರತಿಯೊಂದು ಮಾತನ್ನೂ ಅನುಮೋದಿಸುತ್ತೇನೆ. ಬಹಳ ಆಳವಾದ ವಿಚಾರಗಳನ್ನು ಕುರಿತು ವಿವೇಚಿಸಿ ಈ ಸಭೆಯ ಮುಂದೆ ಬಹು ತೂಕವಾದ ಮಾತುಗಳನ್ನು ಅವರು ಆಡಿದ್ದಾರೆಂದು ನಾನು ಭಾವಿಸುತ್ತೇನೆ.

ಈಗ ಕೆಲವು ಡಿಪಾರ್ಟ್‌ಮೆಂಟ್ ಅಧಿಕಾರಿಗಳು ತಾಲ್ಲೂಕ್ ಬೋರ್ಡ್ ಅಧ್ಯಕ್ಷರು ಹೇಳಿದ ಹಾಗೆ ಕೇಳಬೇಕು. ಈ ಕಡೆ ಡಿಪಾರ್ಟ್‌ಮೆಂಟಿನ ಡೈರೆಕ್ಟರ್ ಮತ್ತು ಅಸಿಸ್ಟೆಂಟ್ ಡೈರೆಕ್ಟರು ಹೇಳಿದ ಹಾಗೆ ಕೇಳಬೇಕು. ಇಂಥಾ ಸಂದರ್ಭದಲ್ಲಿ ಕೆಲವು ತಿಕ್ಕಾಟಗಳು ಬರುತ್ತವೆ. ಆದ್ದರಿಂದ ಕಟ್ಟುನಿಟ್ಟಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ತಾಲ್ಲೂಕು ಅಭಿವೃದ್ಧಿ ಸಮಿತಿಯ ತೀರ್ಮಾನಕ್ಕನುಗುಣವಾಗಿ ಅವರು ಹೇಳಿದ ಹಾಗೆ ನಡೆಯುವಂತೆ ಏರ್ಪಾಡು ಮಾಡಬೇಕು. ಇಲ್ಲದೇ ಹೋದರೆ ಅಲ್ಲಿ ಅನೇಕ ನ್ಯೂನತೆಗಳು ಆಗುವುದಕ್ಕೆ ಅವಕಾಶವಿದೆ. ಜೊತೆಗೆ ಯಾವ ಒಂದು ಘನವಾದ ಉದ್ದೇಶವನ್ನು ಇಟ್ಟುಕೊಂಡು ಸರ್ಕಾರದವರು ಪಂಚಾಯಿತಿ ರಾಜ್ಯವನ್ನು ಸ್ಥಾಪನೆ ಮಾಡಬೇಕು, ಅಧಿಕಾರವಿಕೇಂದ್ರೀಕರಣ ಆಗಬೇಕೆಂದು ಏನು ಆಶೆಯನ್ನು ಇಟ್ಟುಕೊಂಡಿದ್ದಾರೋ ಅದನ್ನು ಮಾತ್ರ ಮಾಡುವುದಕ್ಕೆ ಇವರಿಗೆ ಸಾಧ್ಯವಿಲ್ಲ. ಪಂಚಾಯಿತಿ ಮಟ್ಟದ, ತಾಲ್ಲೂಕು ಬೋರ್ಡು ಮಟ್ಟದ ಚುನಾವಣೆಗಳಲ್ಲಿ ನಮಗೆ ಬೆಂಬಲಗರಾದ ಜನ ಇರಬೇಕು, ಅವರು ನಮ್ಮ ಮಾತನ್ನು ಕೇಳಬೇಕು ಎನ್ನುವ ಒಂದು ಹಠವಾರಿತನ ರಾಜಕೀಯ ಮುಖಂಡರಲ್ಲಿ ಇರುವುದರಿಂದ ಅದರಲ್ಲಿ ಅನಾಹುತವಾಗುತ್ತದೆ. ಇಂಥವರು ಇರುವಾಗ ಪಂಚಾಯಿತಿಯ ಕೆಲಸ ಕಾರ್ಯಗಳು ಹೇಗೆ ನಡೆದುಕೊಂಡು ಹೋಗುತ್ತವೆ, ಯೋಜನೆಯ ಕೆಲಸ ಕಾರ್ಯಗಳನ್ನು ಹೇಗೆ ಕಾರ್ಯಗತ ಮಾಡುತ್ತಾರೆ ಎಂಬುದನು ಯೋಚನೆ ಮಾಡಬೇಕು. ಬೀಜ, ಗೊಬ್ಬರ ಮುಂತಾದ ವ್ಯವಸಾಯದ ಸಲಕರಣೆಗಳು ರೈತನಿಗೆ ಸರಿಯಾಗಿ ದೊರೆಯುತ್ತಿಲ್ಲ. ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಯಾವ ಸೊಸೈಟಿಗಳಿಂದ ನಮ್ಮ ಡೆವಲಪ್‌ಮೆಂಟ್ ವರ್ಕ್ಸ್ ಚೆನ್ನಾಗಿ ನಡೆಯುತ್ತದೆ ಎಂದು ತಿಳಿದುಕೊಂಡಿದ್ದೇವೋ ಆ ಸೊಸೈಟಿಗಳು ಸರಿಯಾಗಿ ಕೆಲಸ ಮಾಡದೇ ಹೋದರೆ, ಯೋಗ್ಯರಾದ ಡೈರೆಕ್ಟರು ಮತ್ತು ಅಧ್ಯಕ್ಷರು ಬಾರದೆ ಹೋದರೆ ಹೇಗೆ ಕೆಲಸಗಳಾಗುತ್ತವೆ ಎಂಬುದನ್ನು ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ಕಟ್ಟುನಿಟ್ಟಾಗಿ ನಿಗಾ ಇಟ್ಟು ಕೆಲಸ ಮಾಡುವಂತಹ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಪಂಚಾಯಿತಿಯ ಕಾರ್ಯದರ್ಶಿಯ

ವಿಚಾರವನ್ನು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಇನ್ನು ಎಲ್ಲಿ ಎಕಾನಮಿ ಮಾಡಬೇಕು, ಎಲ್ಲಿ ಜಾಸ್ತಿ ಖರ್ಚಾಗುತ್ತದೆ, ಅಧಿಕಾರಿಗಳು ಎಲ್ಲಿ ಜಾಸ್ತಿ ಇದ್ದಾರೆ, ನೌಕರರನ್ನು ಹೇಗೆ ತೆಗೆಯಬೇಕು ಎನ್ನತಕ್ಕ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಈ ವಿಲೇಜ್ ಲೆವೆಲ್‌ವರ್ಕರ್ಸ್ ಎಂದು ಏನು ಇಟ್ಟುಕೊಂಡಿದ್ದಾರೆ ಅವರಿಗೆ ಪಂಚಾಯಿತಿಯ ಕಾರ್ಯದರ್ಶಿಯ ಕೆಲಸವನ್ನು ವಹಿಸಿ ಅವರಿಂದ ಪಂಚಾಯಿತಿಯ ಕೆಲಸವನ್ನು ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಈ ರೀತಿ ಮಾಡುವುದಾದರೆ ಪಂಚಾಯಿತಿಗಳಿಗೂ ಒಂದು ಹೊರೆ ಆಗುವುದಿಲ್ಲ. ಸರ್ಕಾರಕ್ಕೆ ಒಂದು ನೇರವಾದ ಸಂಪರ್ಕ ಬರುತ್ತದೆ. ಇಲ್ಲಿಯವರೆಗೂ ಪಟೇಲರು ಶ್ಯಾನುಭೋಗರು ವಂಶಪಾರಂಪರ್ಯವಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದರು ಅವರು ಕಂದಾಯದ ಹಣವನ್ನು ವಸೂಲು ಮಾಡದೆ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಣೆ ಮಾಡದೇ ಹೋದರೆ ನಮ್ಮ ವಂಶದ ಹೆಸರು ಕೆಟ್ಟುಹೋಗುತ್ತದೆ, ಎನ್ನುವ ಭಯದಿಂದ ಅವರು ಕೆಲಸ ಮಾಡುತ್ತಿದ್ದರು. ಇವೊತ್ತು ಯಾರು ಯಾರನ್ನೋ ಅಧಿಕಾರವರ್ಗದವರನ್ನು ಪಂಚಾಯಿಗಳ ಕಲೆಕ್ಷನ್ನಿಗೆ ಹಾಕಿ ಅವನು ಸರಿಯಾಗಿ ಹಣ ವಸೂಲು ಮಾಡದೇ ಹೋದರೆ ಪಂಚಾಯಿಗಳ ಗತಿ ಏನಾಗಬಹುದು ಎಂಬುದನ್ನು ಸ್ವಲ್ಪ ವಿವೇಚನೆ ಮಾಡಬೇಕು. ಪಟೇಲರು ಮತ್ತು ಶ್ಯಾನುಭೋಗರು ಸುಪ್ರೀಮ್ ಕೋರ್ಟಿಗೆ ಹೋದರೂ ಕೂಡ ಅವರನ್ನು ತೆಗೆಯಬೇಕು ಎಂದು ತೀರ್ಮಾನವಾಯಿತು. ಅವರು ಬಹಳ ಹಿಂದಿನಿಂದ ಬಂದಂಥ ಜನ. ಮತ್ತು ಅರ್ಹತೆಯನ್ನು ಪಡೆದಿರತಕ್ಕ ಜನ. ಇಂಥ ವರು ಬಹಳ ಜನ ಇಂಥಾ ಒಂದು ಕಷ್ಟಕಾಲದಲ್ಲಿ ಕೆಲಸವನ್ನು ಕಳೆದುಕೊಂಡು ಪಡಬಾರದ ಸಂಕಟ ಪಡಬೇಕಾಗುತ್ತದೆ ಅವರನ್ನು ಹೊಸ ರೂಲ್ಸಿಗೆ ಅನುಸರಿಸಿ ಇಟ್ಟುಕೊಳ್ಳತಕ್ಕದ್ದು ಬಹಳ ಸೂಕ್ತ ಎಂದು ಹೇಳಿ ನಾನು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರು ಗಂಟೆ ಹೊಡಿಯುತ್ತಿರು ವುದರಿಂದ ನನ್ನ ಮಾತನ್ನು ಇನ್ನು ಮುಂದುವರಿಸಿದೆ, ಇಲ್ಲಿಗೆ ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ ಈ ದಿವಸ ಈ ಸಭೆಯ ಮುಂದಿಟ್ಟಿರುವ ಬೇಡಿಕೆಯ ಮೇಲೆ ಹೆಚ್ಚು ಮಾತನಾಡುವುದಕ್ಕೆ ಅವಕಾಶವಿಲ್ಲ. ಆದರೂ ಸಹ ನನಗೆ ಕೊಟ್ಟಿರುವ ಕಾಲಾವಕಾಶದಲ್ಲಿ ನಾನು ಒಂದೆರೆಡು ವಿಷಯಗಳನ್ನು ಹೇಳಬಯಸುತ್ತೇನೆ. ಅನೇಕ ಎನ್.ಇ.ಎಸ್. ಬ್ಲಾಕುಗಳಲ್ಲಿ ಶ್ರೀಮಾನ್ ಮಾದೇಗೌಡರು ಹೇಳಿದ ಹಾಗೆ ನಡೆಯುತ್ತಿರುವುದು ನಿಜ. ಆ ಬ್ಲಾಕುಗಳಲ್ಲಿ ಇರತಕ್ಕ ಜೀಪುಗಳು ತಹಶೀಲ್ದಾರರಿಗೆ ಸೇರಿವೆಯೋ, ಬಿ.ಡಿ.ಓಗಳಿಗೆ ಸೇರಿವೆಯೋ ಅಥವಾ ತಾಲ್ಲೂಕುಬೋರ್ಡು ಪ್ರೆಸಿಡೆಂಟರಿಗೆ ಸೇರಿವೆಯೇ ಎಂಬುದು ಇತ್ಯರ್ಥವಾದರೆ ಮೊದಲನೇ ವ್ಯಾಜ್ಯ ಬಗೆ ಹರಿಯುತ್ತದೆ. ಏತಕ್ಕೆಂದರೆ, ಅಲ್ಲಿ ಯಾರಾದರೂ ಯಾವುದಾದರೂ ಒಂದು ನಾಟಕಕ್ಕೆ ಹೋಗಬೇಕಾದರೂ ಜೀಪು ತೆಗೆದುಕೊಂಡು ಹೋಗಬೇಕಾಗುತ್ತದೆ. ಈ ವಿಚಾರದಲ್ಲಿ ಒಬ್ಬರಿಗೊಬ್ಬರಿಗೆ ವ್ಯಾಜ್ಯಗಳು ಆಗುತ್ತವೆ. ಆದ್ದರಿಂದ ಇಂಥಾ ಅಧಿಕಾರಿಗೆ ಇಂಥಾದ್ದರ ಮೇಲೆ ಅಧಿಕಾರ ಇದೆ ಎಂದು ನಿರ್ಧರವಾಗಿ ಹೇಳಬೇಕು. ಸರ್ಕಾರದವರು ರೈತನಿಗೆ ಬೀಜ, ಗೊಬ್ಬರಗಳನ್ನು ಒದಗಿಸುತ್ತೇವೆ ಎಂದು ಹೇಳುತ್ತಾರೆ ಈಗ ಕಾರು ರಾಗಿಯನ್ನ ಬೆಳೆಯಬೇಕು ಎಂದು ಒಂದು ದೊಡ್ಡ ಆಂದೋಳನ ವನ್ನೇ ಮಾಡುತ್ತಿದ್ದಾರೆ. ಅದರಲ್ಲಿ ನಾನೂ ಭಾಗವಹಿಸಬೇಕೆಂದು ರೈತರಿಗೆ ಹೇಳಿ ಎಲ್ಲರೂ ರಾಗಿ ಬೆಳೆಯಬೇಕು ಇಲ್ಲದಿದ್ದರೆ ಡಿ.ಐ.ಆರ್. ರೂಲ್ಸ್ ಪ್ರಕಾರ ಕೇಸು ಹಾಕುತ್ತಾರೆ ಎಂದು ಹೇಳಿ ಕಾರು ರಾಗಿ ಬೆಳೆಯುವಂತೆ ಒಪ್ಪಿಸಿದೆ. ಆದರೆ ಬೀಜ ಸಿಕ್ಕಲಿಲ್ಲ. ಅದ್ದರಿಂದ ತಾಲ್ಲೂಕುಬೋರ್ಡು ಪ್ರೆಸಿಡೆಂಟರಿಗೆ ಬೀಜ ತರಿಸಿಕೊಡಿ ಎಂದು ಕೇಳಿದ್ದಕ್ಕೆ ಅವರು ಮಂಡ್ಯಾಕ್ಕೆ ಬರೆದಿದ್ದೇವೆ, ನಾಗಮಂಗಲಕ್ಕೆ ಬರೆದಿದ್ದೇವೆ, ಸೊಸೈಟಿಗಳಿಗೆ ಒದಗಿಸುವಂತೆ ಹೇಳಿದ್ದೇವೆ ಎಂದು ಹೇಳಿದರು. ಸೊಸೈಟಿಗಳವರನ್ನು ಕೇಳಿದರೆ ತಾಲ್ಲೂಕು ಬೋರ್ಡಿನವರು ನಮಗೆ ದುಡ್ಡು ಕೊಟ್ಟಿಲ್ಲ ನಾವೇನು ಮಾಡೋಣ ಎಂದು ಹೇಳುತ್ತಾರೆ. ಇದಕ್ಕೆ ಯಾರು ಜವಾಬ್ದಾರರು ? ಹೀಗಾಗಿ ಸೊಸೈಟಿಗಳ ಮುಖಾಂತರ ರೈತರಿಗೆ ಬೀಜ, ಗೊಬ್ಬರವನ್ನ ಸರಿಯಾಗಿ ಒದಗಿಸುವ ವ್ಯವಸ್ಥೆಯನ್ನು ಮಾಡಿಲ್ಲ. ಸ್ಕೂಲ್ ಬಿಲ್ಡಿಂಗ್ ರಿಪೇರಿ ಕೆಲಸವನ್ನು ತಾಲ್ಲೂಕು ಬೋರ್ಡಿನವರು ಮಾಡಿಸಬೇಕೇ ಅಥವಾ ಇನ್ನು ಯಾವುದಾದರೂ ಬೇರೆ ಇಲಾಖೆಯವರು ಮಾಡಿಸಬೇಕೇ ಎನ್ನುವ ಜಿಜ್ಞಾಸೆ ಬಂದು ಆ ಕೆಲಸವೂ ಸರಿಯಾಗಿ ನಡೆಯುತ್ತಿಲ್ಲ. ಇದರಿಂದ ಜನಗಳು ಬೇಸತ್ತು ಹೋಗಿದ್ದಾರೆ. ಯಾರೋ ತಮಗೆ ಬೇಕಾದವರನ್ನು ಬಿ.ಡಿ.ಓ. ಆಗಿ ಮಾಡಿ ಅವರನ್ನು ಉತ್ತಮ ಮಟ್ಟಕ್ಕೆ ತರಬೇಕೆಂದು ಈ ಬ್ಲಾಕು ಗಳನ್ನು ಮಾಡಿದ್ದಾರೆಯೇ ಹೊರತು, ಜನ ಸಾಮಾನ್ಯರನ್ನು ಉತ್ತಮ ಮಟ್ಟಕ್ಕೆ ತರಬೇಕೆಂಬ ಉದ್ದೇಶದಿಂದ ಇವುಗಳನ್ನು ಮಾಡಿಲ್ಲ. ಈಗ ಎನ್.ಇ.ಎಸ್. ಬ್ಲಾಕುಗಳಲ್ಲಿ, ತಾಲ್ಲೂಕುಬೋರ್ಡು ಗಳಲ್ಲಿ ''ಸ್ಮೋಕ್‌ಲೆಸ್ ಚುಲ್ಲಾ,'' ಎಂದರೆ ಹೊಗೆ ಇಲ್ಲದ ಒಲೆ ಬಂದಿದೆಯೆಂದು ಹೇಳುತ್ತಾರೆ. ಅದು ಎಲ್ಲಿ ಸಿಕ್ಕುತ್ತದೆಯೋ ಗೊತ್ತಿಲ್ಲ. ನಾನು ಅದನ್ನ ಅನೇಕ ಕಡೆ ವಿಚಾರಿಸಿದೆ. ಅದು ಎಲ್ಲಿಯೂ ಸಿಕ್ಕಲಿಲ್ಲ. ಅದು ಎಲ್ಲಿಯಾದರೂ ಸಿಕ್ಕುತ್ತದೆ ಎಂದು ಹೇಳಿದರೆ ಅವರ ಜೊತೆಯಲ್ಲಿ ನಾನು ನಾಳೆ ಬೆಳಗ್ಗೆಯೇ ಬರುವುದಕ್ಕೆ ಸಿದ್ಧನಾಗಿದ್ದೇನೆ.

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಇನ್ನು ಮಂತ್ರಿಗಳು ತವ್ಮ ಭಾಷಣದಲ್ಲಿ ದನಗಳ ಕೊಟ್ಟಿಗೆಯಲ್ಲಿ ಗಂಜಲವನ್ನ ಶೇಖರಣೆ ಮಾಡಿ ಉಪಯೋಗ ಮಾಡಬೇಕೆಂದು ಹೇಳುತ್ತಾರೆ. ಅದನ್ನ ಶೇಖರಣೆ ಮಾಡುವುದಕ್ಕೆ ಸರ್ಕಾರದವರು ದನದ ಕೊಟ್ಟಿಗೆಗಳನ್ನೇನಾದರೂ ಕಟ್ಟಿಸಿ ಕೊಟ್ಟು ಇದನ್ನು ಶೇಖರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದಾರೆಯೇ ಎಂದು ನಾನು ಸರ್ಕಾರದವರನ್ನು ಕೇಳಬೇಕಾಗಿದೆ. ಈ ಕಾರು ರಾಗಿಯನ್ನು ಬೆಳೆಯುವುದಕ್ಕೆ ಅನೇಕ ಜನ ರೈತರು 400-500 ರೂಪಾಯಿಗಳನ್ನ ಖರ್ಚು ಮಾಡಿ ವ್ಯವಸಾಯ ಮಾಡಿದ್ದಾರೆ. ಪಾಪ ಅವರಿಗೆ ನೀರೂ ಹೋಯಿತು, ಬೀಜವೂ ಹೋಯಿತು, ಪೈರೂ ಹೋಯಿತು. ಒಂದು ಆಣೆ ಬೆಳೆಯನ್ನು ಕೂಡ ಬೆಳೆಯುವುದಕ್ಕೆ ಸಾಧ್ಯವಾಗಲಿಲ್ಲ. ಪಾಪ ! ಅವರು ಸಾಲ ಸೋಲ ಮಾಡಿ ವ್ಯವಸಾಯ ಮಾಡಿದ್ದೂ ಹೋಯಿತು. ಹೊಟ್ಟೆಗೆ ತಿನ್ನುವುದಕ್ಕೂ ಇಲ್ಲದಂತಾಯಿತು. ಹೀಗಾದರೆ ದೇಶಕ್ಕೆ ಬೇಕಾದ ಆಹಾರವನ್ನು ಬೆಳೆಯಿರಿ, ಪುಣ್ಯ ಪಡೆದುಕೊಳ್ಳಿ ಎಂದು ಹೇಳಿದರೆ ಹೇಗೆ ? ನಾವು ಜನಗಳಿಗೆ ಕಾರು ರಾಗಿಯನ್ನು ಬೆಳೆಯಿರಿ ಎಂದು ಹೇಳಿ ಪ್ರಚಾರ ಮಾಡಿ ಅದು ಸರಿಯಾಗಿ ಬೆಳೆಯದಿದ್ದರೆ ನಾವು ಜನಗಳಿಗೆ ಮುಖ ತೋರಿಸುವುದು ಹೇಗೆ ? ಈ ಬೇಡಿಕೆಗೆ ಸಂಬಂಧ ಪಟ್ಟ ಮಂತ್ರಿಗಳು ಮೊದಲು ಪೋಲೀಸು ಇಲಾಖೆಯಲ್ಲಿದ್ದರು ಪಾಪ ಅಲ್ಲಿ ಏನೇನೋ ಗಲಾಟೆ ಆಯಿತು, ಜೊತೆಗೆ ಸ್ವಲ್ಪ ಪ್ರೆಷರ್ ಬಂತು, ಆದ್ದರಿಂದ ಖಾತೆ ಬದಲಾಯಿಸಿಕೊಂಡು ಮುಖ ಬದಲಾಯಿಸಿಕೊಂಡು ಬಂದು ಇಲ್ಲಿ ಕುಳಿತುಕೊಂಡಿದ್ದಾರೆ. ಆದರೆ ಈ ರೀತಿ ನಾವು ಹೇಗೆ ಮುಖ ಬದಲಾಯಿಸಿಕೊಂಡು ಹೋಗಿ ಜನತೆಯ ಮುಂದೆ ಹೋಗುವುದಕ್ಕೆ ಆಗುತ್ತದೆ ?

ಇನ್ನು ಅನೇಕ ಇಲಾಖೆಗಳಲ್ಲಿ ಹಂದಿ ಮರಿಗಳನ್ನು ಹಾಕಿದ ಹಾಗೆ ಅಧಿಕಾರಿಗಳ ಸಂಖ್ಯೆ ಜಾಸ್ತಿ ಆಗುತ್ತಿದೆ. ಆದರೆ ಅವರಿಂದ ನಾವು ನಿರೀಕ್ಷಿಸಿದಷ್ಟು ಕೆಲಸ ಆಗಿಲ್ಲ. ಆದ್ದರಿಂದ ದಯವಿಟ್ಟು ಅಧಿಕಾರಿಗಳ ಸಂಖ್ಯೆಯನ್ನ ಕಡಿಮೆ ಮಾಡಬೇಕು. ಬಿ.ಡಿ.ಓ. ಮಾಡುವ ಕೆಲಸವನ್ನು ತಹಶೀಲ್ದಾರ ರಿಗೆ ವಹಿಸಿ ಅದರಿಂದ ಉಳಿಯತಕ್ಕ ಹಣವನ್ನು ಎನ್.ಇ.ಎಸ್. ಯೋಜನೆಗೆ ಉಪಯೋಗಿಸಬೇಕೆಂದು ಹೇಳಿ ನಾನು ನನ್ನ ಮಾತನ್ನ ಮುಗಿಸುತ್ತೇನೆ.

5-30 P.M.

† ಶ್ರೀ ಆರ್. ಎಂ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೂಲಂಕಷವಾಗಿ ವಿಚಾರ ಮಾಡಿ ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದಕ್ಕಾಗಿ ನಾನು ಅವರಿಗೆ ತೃಪ್ತಿಕರ ವಾದ ಹಾಗೂ ಸಮರ್ಥಿಸಿ ಹೇಳಬೇಕಾದ ವಿಷಯಗಳನ್ನು ಹೇಳಬೇಕಾಗುತ್ತದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಆಸ್ತೆ ವಹಿಸಿ, ತ್ಯಾಗ ಮಾಡಿ ರಾಷ್ಟ್ರದ ಮುಖಂಡರುಗಳಿಗೆ ಸಹಾಯ ಮಾಡಿ ಸ್ವಾತಂತ್ರ್ಯ ಗಳಿಸುವುದಕ್ಕೆ ನೆರವಾದ ಮತ್ತು ದೇಶದ ಬೆನ್ನೆಲಬು ಎನ್ನುವಂತಹ ಹಳ್ಳಿಯ ಜನತೆಗೆ, ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಸಿಕ್ಕಿದ ನಂತರ ಯಾವ ರೀತಿಯಾಗಿ ಸಹಾಯ ಮಾಡಬೇಕು, ಸಾಮಾನ್ಯ ಹಳ್ಳಿಯ ಜನರಿಗೆ ಕೊಟ್ಟಂಥ ಭರವಸೆಗಳನ್ನು ಯಾವ ರೀತಿಯಿಂದ ಕಾರ್ಯಗತ ಮಾಡಬೇಕು ಎಂದು ಯೋಚಿಸಿ, ಒಂದು ಉದಾತ್ತ ಧ್ಯೇಯದಿಂದ ಸಾಮೂಹಿಕ ಅಭಿವೃದ್ಧಿಯ ಸಮಾಜ ಅಭಿವೃದ್ಧಿಯ ಬಗೆಗೆ ಅನೇಕ ಯೋಜನೆಗಳನ್ನು ಅಳವಡಿಸಿಕೊಂಡು ಅದರಿಂದ ಸಾಮೂಹಿಕವಾಗಿ ಉಪಯೋಗ ಜನ ಸಾಮಾನ್ಯರಿಗೆ ಆಗಲ ಎನ್ನುವ ಘನ ಉದ್ದೇಶದಿಂದ ಈ ಅಭಿವೃದ್ಧಿ ಯೋಜನೆಗಳನ್ನು ರಚಿಸಿದ್ದು. 1952ರಿಂದ 1963 ರೊಳಗೆ ರಾಷ್ಟ್ರದಾದ್ಯಂತ ಪ್ರತಿಯೊಂದು ಹಳ್ಳಿಯಲ್ಲಿಯೂ ಈ ಯೋಜನೆಗಳು ಅವರಿಸಿಕೊಂಡಿವೆ. ಇದರ ಮೇಲೆ ವಿಚಾರ ಮಾಡುವಾಗ, ಇಷ್ಟೊಂದು ಘನ ಉದ್ದೇಶದಿಂದ ಮಾಡಿದ ಈ ಯೋಜನೆ ಬೃಹದಾಕಾರವಾಗಿ ಬೆಳೆದು ಇಡೀ ಜಗತ್ತಿನೊಳಗೆ ಯಾವ ರಾಷ್ಟ್ರದಲ್ಲಿಯೂ ಇಲ್ಲ ಎನ್ನುವಂತೆ ಆಗಿರುವುದು ಒಂದು ಹೆಮ್ಮೆಯ ವಿಷಯ. ಆದರೆ ಯಾವ ರೀತಿಯಿಂದ ಇದನ್ನು ಚಾಲನೆ ಗಳಿಗೆ ಇಡಬೇಕು ಎನ್ನುವ ವಿಷಯಗಳನ್ನು ಹೇಳುವಾಗ ಮೊದಲಿಗೆ ಕೇವಲ ಸರ್ಕಾರಿ ಅಧಿಕಾರಿಗಳಿಂದ ಇದರ ಕೆಲಸಗಳು ನಡೆಯಬೇಕು, ಜನತೆ ಅಧಿಕಾರಿಗಳಿಗೆ ಸಹಾಯ ಮಾಡಬೇಕು ಎಂದು ಇತ್ತು. ಜನತೆಯಲ್ಲಿ ಉತ್ಸಾಹ ಹುಟ್ಟಬೇಕು, ಹಾಗೂ ಅವರಿಂದ ಉತ್ತೇಜನ ಇದಕ್ಕೆ ಹೆಚ್ಚಾಗಿ ದೊರಕಬೇಕು. ಅಂತಹ ಒಂದು ಯೋಜನೆ ಇದು. ಇದರಲ್ಲಿ ಅಧಿಕಾರಿಗಳು ಮತ್ತು ಮುಖಂಡರುಗಳು ಸಾಮೂಹಿಕ ವಾಗಿ ಬಹಳ ಸಹಕಾರದಿಂದ ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೋ ಅಲ್ಲೆಲ್ಲಾ ಬಹಳ ಉತ್ತಮವಾಗಿ ಕೆಲಸಗಳು ಆಗುತ್ತಿವೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಎಲ್ಲಿ ಜನ ಮುಖಂಡರುಗಳು ಅಧಿಕಾರಿಗಳಿಗೆ ಸಹಾಯ ಮಾಡುತ್ತಿಲ್ಲ ಅಂತಹ ಕಡೆಗಳಲ್ಲಿ ಅನೇಕ ಲೋಪದೋಷಗಳು ಬಂದಿವೆ ಅದು ಸರಕಾರದ ಜನರಿಗೂ ಬಂದಿದೆ. ಯೋಜನೆಗಳು ಅಮಲಿನಲ್ಲಿ ಬರುವಾಗ ಅವುಗಳಲ್ಲಿ ಅನೇಕ ಲೋಪ ದೋಷಗಳು ಬರುತ್ತವೆ. ಅಂತಹವುಗಳಲ್ಲಿ ಕ್ರಾಷ್ ಪ್ರೋಗ್ರಾಂ ಎಂದು ಈ ವರ್ಷ ಬರಗಾಲದಿಂದಾಗಿ

ಹೆಚ್ಚು ಉತ್ಪತ್ತಿ ಆದೀತು ಮತ್ತು ದೇಶದ ಅಭಾವದ ಆಹಾರ ಪರಿಸ್ಥಿತಿ ಸುಧಾರಿತವಾದೀತು ಎಂದು ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡಲು ಇಲ್ಲಿನ ಸಮಿತಿಗಳು ವಿಶೇಷವಾಗಿ ಆಸಕ್ತಿ ವಹಿಸಿ ಕೆಲಸ ಮಾಡುತ್ತವೆಂದು ಇದ್ದೆವು. ಇದರಲ್ಲಿ ಪ್ರೆಸಿಡೆಂಟರೇ ಬರಲಿ ಮುಖ್ಯ ಕಾರ್ಯದರ್ಶಿಗಳೇ ಬರಲಿ ಯಾರೇ ಬರಲಿ ಅವರುಗಳು ಆಸ್ಥೆಯಿಂದ ಕೆಲಸ ಮಾಡದಿರುವಾಗ, ಕೆಲವು ಅಡೆ ತಡೆಗಳಿಂದಾಗಿ ಕೆಲವು ಕಡೆಗಳಲ್ಲಿ ನ್ಯೂನತೆಗಳು ಕಂಡುಬಂದಿರಬಹುದು. ಸುಮಾರು ಈಗ್ಗೆ ಒಂದು ಒಂದೂವರೆ ತಿಂಗಳಿಂದ ವಿಶೇಷವಾಗಿ ಆಸ್ಥೆ ವಹಿಸಿ, ಕೆಲವು ಭಾಗಗಳಲ್ಲಿ ರಭಸದಿಂದ ಕೆಲಸಗಳು ಕಾರ್ಯರೂಪದಲ್ಲಿ ಬರಲು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ.

ಈಗ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಇಂತಹ ಕಾರ್ಯಗಳನ್ನು ಕಾರ್ಯ ರೂಪದಲ್ಲಿ ತರುವಾಗ ದೋಷಗಳು ಕಡಿಮೆಯಾಗಿರಬೇಕು ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಎರಡನೇದು ಬಿ. ಡಿ. ಆಫೀಸುಗಳೊಳಗೆ ಬಹಳ ಜನ ನೌಕರರುಗಳಿದ್ದಾರೆ ಎಂದು ಒಂದು ವಾದ. ಇನ್ನು ಎಷ್ಟೋ ಸದಸ್ಯರು ಅಷ್ಟು ನೌಕರರುಗಳು ಇದ್ದರು ಇನ್ನೂ ನೌಕರರುಗಳು ಕಡಿಮೆ ಇದ್ದಾರೆ, ಇಂತಹವರನ್ನು ಸರಿಯಾಗಿ ನಡೆಸಿಕೊಂಡು ಹೋಗಲು ಹೆಚ್ಚು ಜನರಿಲ್ಲದೆ ಸರಿಯಾಗಿ ಕೆಲಸ ನಡೆಯುವುದಿಲ್ಲ ಎನ್ನುವುದೂ ಒಂದು. ಈ ತರಹ ವಾದಗಳು ಇವೆ. ಇದರೊಳಗೆ ಹಲಕೆಲವು ನೌಕರರು ದಾರರುಗಳಿಗೆ ಸಾಕಷ್ಟು ಕೆಲಸವೇ ಇಲ್ಲ ಎನ್ನುವುದು, ನಿಜ. ಆದರೆ ಯಾವ ರೀತಿಯಿಂದ ಇಂತಹವರಿಗೆ ಕೆಲಸಗಳನ್ನು ಕೊಟ್ಟು ಆ ಕೆಲಸಗಳನ್ನು ತೀವ್ರಗತಿಯಿಂದ ಮಾಡಬೇಕು ಎನ್ನುವುದು ಸರಕಾರದ ವಿವೇಚನೆಯಲ್ಲಿದೆ. ಇದು ಸತ್ಯವಾಗಿದ್ದರೆ ಇಂತಹ ಭಾಗಗಳನ್ನು ವಿಚಾರ ಮಾಡಿ ನೋಡಬೇಕಾಗುತ್ತದೆ. ನಿರ್ದಿಷ್ಟವಾಗಿ ಇಂತಹ ಆಫೀಸರುಗಳು ಹೆಚ್ಚು, ಇಲ್ಲಿ ಕೆಲಸಗಳಾಗುತ್ತಿಲ್ಲ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಆದರೆ ಒಂದು ವಿಷಯವನ್ನು ಲಕ್ಷ್ಯದಲ್ಲಿಡಬೇಕು. ಖರ್ಚು ಮಾಡುತ್ತಿರುವುದು ನಾವು ಅಭಿವೃದ್ಧಿ ಕಾರ್ಯಗಳಿಗಾಗಿ. ಖರ್ಚು ಮಾಡುತ್ತಿರುವುದನ್ನು ಮತ್ತು ಇಲ್ಲಿನ ಜನರನ್ನು ತುಲನ ಮಾಡಿ ನೋಡಿದರೆ ಈಗ ಸ್ಟಾಫ್‌ಗಾಗಿ ಖರ್ಚು ಹೆಚ್ಚು ಮಾಡುವುದು ಅನಿವಾರ್ಯವಾಗುತ್ತದೆ. ಕೆಲವಾರು ದಿನಗಳ ನಂತರ ಇದನ್ನು ಕಡಿಮೆ ಮಾಡಲಿಕ್ಕೆ ಸಾಧ್ಯ. ಇದರಲ್ಲಿ ಕಮ್ಯೂನಿಟಿ ಡೆವಲಪ್‌ಮೆಂಟು, ಟಿ. ಡಿ. ಬೋರ್ಡು, ಲೋಕಲ್ ಡೆವಲಪ್‌ಮೆಂಟು ಬೋರ್ಡು, ರೂರಲ್ ಡೆವಲಪ್‌ಮೆಂಟು ಹೀಗೆ ಇನ್ನೂ ಅನೇಕ ರೀತಿಯಿಂದ ಫಂಡ್ಸ್‌ಗಳು ಇದಕ್ಕೆ ಬೇರೆ ಬೇರೆ ಬರುವುದರಿಂದ ಅವನ್ನೆಲ್ಲಾ ಕ್ರೋಢೀಕರಿಸಿ ಬರೀ ರಿಪೋರ್ಟು ಹೆಚ್ಚಾಗಿ ಬರುವುದನ್ನು ಕಡಿಮೆ ಮಾಡಬೇಕು ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸ್ವಲ್ಪ ಹೆಚ್ಚು ಲಕ್ಷ್ಯ ಕೊಟ್ಟರೆ ಸಾಕಷ್ಟು ಕೆಲಸ ಮಾಡುವ ಶಕ್ತಿ ಬರುತ್ತದೆ. ಆದುದರಿಂದ ಕಳೆದ ಐದು ತಿಂಗಳಿಂದ ಒಂದು ಕಾರ್ಯಕ್ಷೇತ್ರದಲ್ಲಿ ತುಲನಮಾಡಿ ನೋಡಿದರೆ ಅವರಲ್ಲಿ ಕೆಲಸ ಮಾಡುವ ಶಕ್ತಿ ಇದೆ ಎನ್ನುವುದು ಕಂಡುಬಂದಿದೆ. ಎರಡನೆಯದು ಈ ಆಫೀಸರುಗಳಿಗೆ ಇನ್ನೂ ಹೆಚ್ಚು ಅಧಿಕಾರ ಕೊಡಬೇಕು ಎನ್ನುವುದು. ಅಮಲಿನಲ್ಲಿರುವ ಕಾನೂನು ಅವರಿಗೆ ಬೇಕಾದಷ್ಟು ಪವರುಗಳನ್ನು ಕೊಟ್ಟಿದೆ; ಆದರೆ ಹಣ ನಾವು ಕೊಟ್ಟಿಲ್ಲ ಎನ್ನುವುದು ನಿಜ. ನೂರಕ್ಕೆ ಈಗ ತಾಲ್ಲೂಕಾ ಸಮಿತಿಯವರಿಗೆ 20 ರೂಪಾಯಿ ಪಂಚಾಯತಿಗಳವರಿಗೆ 30 ರೂಪಾಯಿ; ಶೇಕಡಾ ಐದರಷ್ಟು ಪಂಚಾಯತಿಗಳಿಗೆ, ಶೇಕಡಾ ಐದರಷ್ಟು ತಾಲ್ಲೂಕುಗಳವರಿಗೆ ಹೀಗಾಗಿ ಲ್ಯಾಂಡು ರೆವೆನ್ಯೂ ಕಂದಾಯದಲ್ಲಿ ಅರ್ಧದಷ್ಟು ಭಾಗ ಇವರ ಅಭಿವೃದ್ಧಿ ಕೆಲಸಗಳಿಗಾಗಿ ಕೊಡುತ್ತಿದ್ದೇವೆ. ಲ್ಯಾಂಡ್‌ರೆವೆನ್ಯೂ ಪೂರ್ತಿಯಾಗಿ ಹಣ ಕೊಟ್ಟಿಲ್ಲ. ಇದಕ್ಕೆ ನೆರವನ್ನು ಸರಕಾರ ಇನ್ನೂ ಹೆಚ್ಚಾಗಿ ಕೊಡಬೇಕೆಂದು ಆಸೆ ಇದೆ, ಅದರಂತೆ ಜನತೆಗೂ ಇದೆ ಎಂದು ಹೇಳಿದರೂ ಅದು ತಪ್ಪಾಗುವುದಿಲ್ಲ. ಇದನ್ನು ಸುಧಾರಿಸಲು ಈಗಿರುವ ಕಾನೂನನ್ನು ಸ್ವಲ್ಪ ಬದಲಾವಣೆ ಮಾಡಿದರೆ ಅದು ಅನುಕೂಲವಾಗುತ್ತದೆ.

ಈ ಬಿಲ್ಲಿನೊಳಗೆ ಮೂರನೇ ಟಿಯರ್ ಕ್ರಿಯೇಟು ಮಾಡಬೇಕು ಎಂದು ಜಂಟಿ ಸೆಲೆಕ್ಟು ಕಮಿಟಿಯವರು ಹೇಳಿದ್ದಾರೆ. ಅದು ಹೇಗಿರಬೇಕು ಎಂದು ಚರ್ಚೆ ಮಾಡಲು ಈ ಮಸೂದೆ ಈಗ ನಮ್ಮ ಮುಂದೆ ಬರಲಿದೆ. ಆದರೆ ಈಗಿರುವ ಕಾನೂನಿನೊಳಗೆ ಇದನ್ನೆಲ್ಲಾ ಒಂದು ಪಕ್ಕಾ ಕಾನೂನಾಗಿ ಮಾಡಿ ಇದನ್ನು ರೂಲ್ಸುಗಳಲ್ಲಿ ಅಳವಡಿಸಿ ಆ ನಂತರ ಎಲೆಕ್ಷನ್ನುಗಳನ್ನು ಅಮಲು ಬಜಾವಣೆ ಮಾಡಲು ತರಬೇಕೆಂದರೆ ಕನಿಷ್ಟಪಕ್ಷ ಸುಮಾರು ಎರಡು ಎರಡೂವರೆ ವರ್ಷಗಳು ಕಾಲವಾದರೂ ಬೇಕಾಗುತ್ತದೆ. ಇದನ್ನು ಮಾಡಲು ಈಗ ತುರ್ತು ಪರಿಸ್ಥಿತಿ ಬಂದುದರಿಂದ ಬಜೆಟ್ಟಿನೊಳಗೆ ಇದಕ್ಕೆ ಸಾಕಷ್ಟು ಹಣದ ನೆರವನ್ನು ತಾಲ್ಲೂಕ್ ಸಮಿತಿಯವರಿಗೆ ಪಂಚಾಯತಿಗಳಿಗೆ ಕೊಡುವುದಕ್ಕೆ ಅದಕ್ಕೆ ಕಾನೂನಿನಲ್ಲಿ ಒಂದು ತೆರದ ಅವಕಾಶವೂ ಇದೆ. ಈ ವಿಷಯದಲ್ಲಿ ಹೆಚ್ಚು ಹಣ ಕೊಟ್ಟು ಇವರಿಂದ ಹೆಚ್ಚು ಕೆಲಸಗಳನ್ನು ಮಾಡಿಸಲು ಸಾಧ್ಯವಿದೆ. ಹಣ ಹೆಚ್ಚಾಗಿ ಕೊಡಬೇಕೆಂದರೆ ಸ್ವಲ್ಪ ಕೊಡಬಹುದು. ಈಗಾಗಲೇ ಅಡ್ಮಿನಿಸ್ಟ್ರೇಷನ್ ಪ್ರೊಸೆಸ್‌ನಲ್ಲಿ ಅನೇಕ ತೊಂದರೆಗಳು ಕಾನೂನುಗಳಲ್ಲಿದ್ದುವು ಎಂದು ಅದರಿಂದ ಕೆಲವು ಕಡೆ ದುರುಪಯೋಗಗಳು ನಡೆದಿವೆ ಎಂದು ತಿಳಿದು ಬಂದಿದೆ. ಕಾನೂನಿನಲ್ಲಿರು

(ಶ್ರೀ ಆರ್. ಎಂ. ಪಾಟೀಲ್)

ವಂತೆ ತಾಲ್ಲೂಕು ಸಮಿತಿಗಳವರಿಗೆ ಬಡ್ಜೆಟ್ಟುಗಳನ್ನು ಕಳುಹಿಸುವಾಗ ಅದು ಡೆವಲಪ್‌ಮೆಂಟು ಕೌನ್ಸಿಲ್‌ನಲ್ಲಿ ಹೋಗುತ್ತದೆ. ಆಗ ಅಲ್ಲಿನ ಕಾರ್ಯದರ್ಶಿಗಳು ಮಾಡುವ ಕೆಲಸಗಳಿಗಾಗಿ ಹಣ ಕೊಡಬೇಕೆಂದು ಅಲ್ಲಿ ಮಾಡುವುದಕ್ಕೆ ಯಾವ ತರದ ಆತಂಕವೂ ಇಲ್ಲ. ದೊಡ್ಡ ಕೆಲಸಗಳನ್ನು ಮಾಡ ಬೇಕೆಂದಾಗ ಅದರ ಬಗ್ಗೆ ವಿಶೇಷವಾಗಿ ಕೂಲಂಕಷವಾಗಿ ವಿಚಾರ ಮಾಡಿ ಕಾನೂನುಗಳನ್ನು ತಿದ್ದುಪಡಿ ಮಾಡಲಿಕ್ಕೆ ಸರ್ಕಾರದವರು ಒಪ್ಪುತ್ತಾರೆ ಎಂದರೆ ತಪ್ಪಾಗಲಾರದು. ಎರಡನೆಯದಾಗಿ, ಶ್ರೀಮಾನ್ ಘೋರ್‌ಪಡೆಯವರು ಹೇಳಿದ ಹಾಗೆ ಸ್ಟೇಟ್ ಫೈನಾನ್ಸ್ ಕಮಿಷನ್ ಆಗಬೇಕೆನ್ನುವುದು ಏನಿದೆ ಅದರ ವಿಷಯ ಹೇಳುವುದಾದರೆ, ಈಗ ಇದ್ದ ಅಡತಡೆಯೇ ಬೇಕಾದಷ್ಟು ಆಗುತ್ತಾ ಇರುವಾಗ ಅದರಿಂದ ಮತ್ತೊಂದು ತೊಡಕು ಬಂದೀತು ಎಂಬ ಭಯ ನನಗೆ ಇದೆ. ಸರ್ಕಾರದ ಕೆಲಸ ನಡೆಯು ವುದೇ ಒಂದು ದೊಡ್ಡ ಮಹತ್ ಸಾಧನೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಮತ್ತೊಂದು ಕಮಿಷನ್ ಮಾಡುವುದರಿಂದ ಅದಕ್ಕೆ ಆತಂಕ ಬಂದೀತು. ಆದ್ದರಿಂದ ಎಲ್ಲಿ ತೊಂದರೆ ಇದೆ ಎಂಬುದನ್ನು ಪೂರ್ತಿಯಾಗಿ ವಿಚಾರ ಮಾಡುವಂತಹ ಕಾಲ ಬಂದಾಗ ಮಾಡಬಹುದು. ಅದನ್ನು ನಿರ್ದಿಷ್ಟವಾಗಿ ಈಗ ಹೇಳಲಿಕ್ಕೆ ಬರುವುದಿಲ್ಲ. ಅನೇಕ ಸದಸ್ಯರುಗಳು ಸಣ್ಣ ವಿಷಯಗಳಾದಂತಹ ಜೀಪು ಮುಂತಾದುವುಗಳ ಬಗ್ಗೆ ಮಾತನಾಡಿದ್ದಾರೆ. ಅವು ಬಹಳ ಸಾಮಾನ್ಯವಾದಂತಹ ಟೀಕೆ ಮತ್ತು ಎಲ್ಲರಿಗೂ ಅನ್ವಯಿಸುವಂತಹ ಟೀಕೆ ಮಾಡಿರುವುದು ಸರಿಯಲ್ಲ. ಈಗಿನ ನನ್ನ ಅನುಭವದಲ್ಲಿ ಹೇಳಬೇಕೆಂದರೆ, ಸರ್ವಸಾಧಾರಣವಾಗಿ ಬಿ. ಡಿ. ಓ. ಗಳು ನೂರಕ್ಕೆ 90 ರಿಂದ 95 ರಷ್ಟು ಜನ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಯಾವ ರೀತಿಯಿಂದಲೂ ಅಪಮಾನಕರವಾದ ಮಾತನ್ನು ಮಾತನಾಡುವುದರಿಂದ ಕೆಲಸವಾಗುತ್ತದೆ ಎಂದು ತಾವು ಭಾವಿಸಿಕೊಂಡಿದ್ದರೆ ಅದು ಸರಿಯಾದ್ದಲ್ಲ ಎಂದು ಹೇಳದೇ ಇರಲಾರೆ.

ಇನ್ನು ಚುನಾವಣೆಗಳನ್ನು ಮುಂದೆ ಹಾಕಿದರು ಎಂಬ ಮಾತು ಇದೆ. ಸಭಾ ಪತಿಗಳೇ, ಈ ವಿಷಯವನ್ನು ಸರ್ಕಾರ ಕೇವಲ ಯಾವುದೋ ಒಂದು ಹಿತಸಾಧನೆಗಾಗಿ ಮಾಡಿದ್ದು ಎಂದು ಭಾವಿಸಿ ಕೊಳ್ಳುವುದು ಮಾನ್ಯ ಸದಸ್ಯರಿಗೆ ಶೋಭಿಸುವುದಿಲ್ಲ. ಏಕೆಂದರೆ ಪಾಕೀಸ್ತಾನದ ಆಕ್ರಮಣದಿಂದ ಒಂದು ಪ್ರಕ್ಷುಬ್ಧ ವಾತಾವರಣ ಆಗಿನ ಕಾಲದಲ್ಲಿ ಪ್ರಾಪ್ತವಾದದ್ದರಿಂದ ಆಗ ಸರ್ಕಾರದವರು ಒಂದು ಆರ್ಡಿನೆನ್ಸ್ ತೆಗೆದದ್ದು ನಿಜ. ಅದು ಆದಮೇಲೆ 15-20 ದಿವಸಗಳಲ್ಲಿ ಈ ಮನೆಯಲ್ಲೂ ಮತ್ತು ಮೇಲ್‌ಮನೆಯಲ್ಲೂ ಅದೇ ವಿಷಯದಲ್ಲಿ ಒಂದು ಕಾನೂನನ್ನೂ ಸಹ ಮಾಡಿದ್ದು ಉಂಟು. ಇದು ಎಲ್ಲರಿಗೂ ತಿಳಿದ ವಿಷಯ ಇದ್ದರೂ ಕೂಡ ಸರ್ಕಾರದವರನ್ನು ತೆಗಳುವ ಬದ್ಧಿಯಿಂದ ತೆಗಳುವುದರಲ್ಲಿ ಅಷ್ಟೊಂದು ಮಹತ್ ಸಾಧನೆಯನ್ನು ಸಾಧಿಸಲಾರರು ಮತ್ತು ಚುನಾವಣೆ ಆದರೂ ಕೂಡ ಸರ್ಕಾರ ನಡೆಸತಕ್ಕ ಪಕ್ಷಕ್ಕೆ ಯಾವ ತರಹದ ಧಕ್ಕೆಯೂ ಇಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ತುರ್ತುಪರಿಸ್ಥಿತಿ ಹೋದ ನಂತರ ಚುನಾವಣೆ ನಡೆಸುತ್ತೇವೆ ಎಂದು ಹೇಳಿದಿರಿ, ಯಾವಾಗ ಹೋಗುತ್ತದೆ ಎಂದು ಅವರಿಗೆ ತಿಳಿದು ಬಂದಿದೆಯೇ? ಅದು ಹೋಗ ದಿದ್ದರೆ ಚುನಾವಣೆ ಮಾಡುವುದೇ ಇಲ್ಲವೇ? ಇದನ್ನು ಸ್ಪಷ್ಟಪಡಿಸಿದರೆ ನಾವು ಪದೇ ಪದೇ ಇದನ್ನು ಹೇಳುವುದೇ ಇಲ್ಲ.

ಶ್ರೀ ಆರ್. ಎಂ. ಪಾಟೀಲ್.—ಕಾನೂನಿನಲ್ಲಿ ಹೇಳಿದ ಹಾಗೆ ತುರ್ತುಪರಿಸ್ಥಿತಿ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿವರೆಗೂ ಚುನಾವಣೆ ಮಾಡಲಿಕ್ಕೆ ಆಗುವುದಿಲ್ಲ. ತುರ್ತು ಪರಿಸ್ಥಿತಿ ಎಲ್ಲಿಯವರೆಗೆ ಇರುತ್ತದೆ ಎಂದು ನಾನು ಹೇಳುವಂತಹ ಯೋಗ ಇನ್ನೂ ಬಂದಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ತುರ್ತುಪರಿಸ್ಥಿತಿ ತೆಗೆದ ಮೇಲೆ 15 ದಿವಸದೊಳಗೆ ಚುನಾವಣೆ ನಡೆಸುತ್ತೀರಾ?

ಶ್ರೀ ಆರ್. ಎಂ. ಪಾಟೀಲ್.—15 ದಿವಸದೊಳಗೆ ಆಗಬಹುದು, ಅವತ್ತೇ ಆಗಬಹುದು. ಅದನ್ನು ಈಗ ಹೇಳುವುದು ಹೇಗೆ? ಕೆಲವು ಮಂದಿ ಮಾನ್ಯ ಸದಸ್ಯರು ಡ್ಯೂಯರ್ ಕಂಟ್ರೋಲ್ ಇದೆ ಎನ್ನುವಂತಹ ಒಂದು ವಾದವನ್ನು ಮುಂದೆ ಮಾಡಿದರು. ಅದನ್ನು ಸರಿಪಡಿಸಲಿಕ್ಕೆ ಎಷ್ಟುಮಾತ್ರ ಸಾಧ್ಯವಿದೆ ಅಷ್ಟನ್ನೂ ಮಾಡಿದೆ. ಅದರಿಂದ ಒಂದು ಉತ್ತಮವಾದಂತಹ ವಾತಾವರಣ ಮತ್ತು ಒಳ್ಳೆಯ ಉತ್ತೇಜನಕರವಾದ ಕಾರ್ಯಕ್ರಮ ನಡೆದಿದೆ ಎಂದು ನಾನು ಹೇಳದೇ ಇರಲಾರೆ. ಇನ್ನೂ ಎಲ್ಲಿ ಯಾವ ತರಹದ ಆತಂಕ ಬರುತ್ತದೆ ಅದನ್ನೂ ವಿಚಾರ ಮಾಡಿ ಹೆಚ್ಚಿನ ಕಾರ್ಯಕ್ರಮ ತೆಗೆದು ಕೊಳ್ಳಬಹುದು ಎಂದು ಹೇಳುತ್ತೇನೆ.

ಪ್ರಜಾಸತ್ತಾತ್ಮಕ ಆಡಳಿತದಲ್ಲಿ ಅವಶ್ಯಕವಾದ ಘಟನೆ ಪಂಚಾಯ್ತಿ. ಪಂಚಾಯ್ತಿ ಸರಿಯಾಗಿ ನಡೆಯಬೇಕೆಂದಾಗ ಬರೀ, ಕೇವಲ ಜನತೆಯಿಂದ ಆರಿಸಿಬಂದಂಥ ಪ್ರತಿನಿಧಿಗಳಿಂದ ಅಲ್ಲ, ಅದಕ್ಕೆ ಒಬ್ಬ ಆಫೀಸರು, ಸೆಕ್ರೆಟರಿ ಅನ್ನುವವರು ಇರಬೇಕು ಎನ್ನುವುದನ್ನು ಕಾನೂನಿನಲ್ಲಿ ಅಳವಡಿಸಿಕೊಂಡಿದೆ. ಈ ಸೆಕ್ರೆಟರಿಗಳ ನೇಮಕದಲ್ಲಿ ಸ್ವಲ್ಪ ವ್ಯತ್ಯಾಸವಿದ್ದದ್ದರಿಂದ ಅದು ಸುಪ್ರೀಂ ಕೋರ್ಟಿನ ವರೆಗೂ ಹೋಗಿ ತೀರ್ಮಾನವಾಗಿ ಬಂದಿದೆ. ರೆವಿನ್ಯೂ ಡಿಪಾರ್ಟಮೆಂಟಿನವರು ಈ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಿ ಪ್ರತ್ಯೇಕವಾತ ಪ್ರತಿಯೊಂದು ಹಳ್ಳಿಗೂ ತಲಾಟಿ ಇರಬೇಕು ಅಥವಾ ಎರಡು ಮೂರು ಹಳ್ಳಿಗಳಿಗೆ ಒಬ್ಬ ತಲಾಟಿ ಇರಬೇಕೆಂದು ಅವರು ವಿಚಾರ ಮಾಡಿದ್ದಾರೆ. ಪಂಚಾಯ್ತಿಯವರು ಎಲ್ಲಿ ಸಾಧ್ಯವಿದೆ ಪಂಚಾಯ್ತಿ ಸೆಕ್ರೆಟರಿ ಪಗಾರ ಹೊರುವಷ್ಟು ಮತ್ತು ಪಂಚಾಯ್ತಿ ಅಭಿವೃದ್ಧಿ ಆಗುವಷ್ಟು ಧನ ಸಹಾಯ ಇದೆ ಅಂದಲ್ಲಿ ಪ್ರತ್ಯೇಕವಾಗಿ ಒಬ್ಬ ಪಂಚಾಯ್ತಿ ಸೆಕ್ರೆಟರಿಯನ್ನು ಕೊಡಬಹುದು, ಎಲ್ಲಿ ಹಣದ ಭಾರ ಆನಿಸುತ್ತದೆ ಅಂಥಲ್ಲಿ ಎರಡು ಮೂರು ನಾಲ್ಕು ಪಂಚಾಯ್ತಿ ಕೂಡಿಸಿ ಒಬ್ಬ ಪಂಚಾಯ್ತಿ ಸೆಕ್ರೆಟರಿ ಕೊಡಬಹುದು ಮತ್ತು ಪಂಚಾಯ್ತಿ ಸೆಕ್ರೆಟರಿಗೆ ಅವಶ್ಯಕವಾದ ಟ್ರೈನಿಂಗ್ ಕೂಡ ಕೊಡಬೇಕಾಗುತ್ತದೆ. ಇದನ್ನೆಲ್ಲಾ ವಿಚಾರ ಮಾಡಿಕೊಂಡು ಪಂಚಾಯ್ತಿ ಸೆಕ್ರೆಟರಿ—3 ಗ್ರೇಡ್—ನೇಮಕ ಮಾಡುವ ಬಗ್ಗೆ ತಾತ್ಪೂರ್ತಿಕವಾಗಿ ಒಂದು ನಿಯಮ, ಹುಕುಂನ್ನು ಮಾಡಿದ್ದೇವೆ. ರೂಲ್ಸ್ ಬದಲಾವಣೆ ಆಗಬೇಕಾಗುತ್ತದೆ ಅದಕ್ಕೆ ಅಬ್ಜಕ್ಷನ್ಸ್ ಇನ್‌ವೈಟ್ ಮಾಡಿದ್ದಾರೆ, ಆದು ಬರುತ್ತದೆ. ಎರಡನೆಯದಾಗಿ ಪಂಚಾಯ್ತಿ ಸೆಕ್ರೆಟರಿ, ಗ್ರಾಮ ಸೇವಕ ಇವರುಗಳ ಸರ್ವೀಸಸ್ ಹಳ್ಳಿಯ ಮಟ್ಟದಲ್ಲಿ ಬಹಳ ಅವಶ್ಯಕ, ಇದನ್ನು ಆದಷ್ಟು ಹೆಚ್ಚು ತೀವ್ರವಾಗಿ ಮಾಡುವಂತಹ ಕಾರ್ಯಕ್ರಮ ಇದೆ. ಹಳ್ಳಿಯ ಸುಖಕ್ಕಾಗಿ ಮತ್ತು ಹಳ್ಳಿಯ ಅಭಿವೃದ್ಧಿಗಾಗಿ ಮತ್ತು ಅನುಕೂಲತೆಗಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರೊಳಗೆ ಸದ್ಯದ ಪರಿಸ್ಥಿತಿಯಲ್ಲಿ ವ್ಯವಸಾಯಕ್ಕೆ ಹೆಚ್ಚು ಪುಷ್ಟೀಕರಣ ಮಾಡಿ ಆಹಾರ ಉತ್ಪನ್ನವನ್ನು ಹೆಚ್ಚು ಮಾಡುವ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳನ್ನು ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನವರು ಮಾಡಿದ್ದಾರೆ.
ಎಕ್ಸ್‌ಟೆನ್‌ಷನ್ ಆಫೀಸರು ಮತ್ತು ಬಿ.ಡಿ.ಓ.ಗಳು ಒಬ್ಬರೊಂದಿಗೆ ಒಬ್ಬರು ಸಹಕರಿಸಬೇಕು. ಶ್ರೀ ಮಾದಪ್ಪಗೌಡರು ಹೇಳಿದ ಹಾಗೆ ಸಹಕಾರ ಮತ್ತು ಸೌಹಾರ್ದವಿಲ್ಲದೆ ಅಲ್ಲ ಪ್ಲಾನ್, ಯೋಜನೆ, ಸಿ.ಡಿ. ಪ್ರೋಗ್ರಾಂ ಮುಂತಾದುವೆಲ್ಲಾ ಜಯಪ್ರದವಾಗಿವೆ. ಸಹಕಾರ ಇಲ್ಲದ ಕಡೆ ಜಯಪ್ರದವಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಒಂದು ವಿಚಾರ ವ್ಯಸನದಿಂದ ಹೇಳುವುದು, ಕಳೆದ 6 ತಿಂಗಳಿಂದ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಸೆಮಿನಾರುಗಳು ನಡೆದುವು, ಅಲ್ಲೆಲ್ಲಾ ನಾನು ಹಾಜರಿದ್ದೆ, ಪ್ರತಿಯೊಂದು ವಿಷಯದ ಬಗ್ಗೆ ಕೂಡ ಚರ್ಚೆಯಾಯಿತು ಯಾವ ಯಾವ ಕ್ಷೇತ್ರದಲ್ಲಿ ಏನೇನು ಕೆಲಸ ಮಾಡಿದ್ದಾರೆ ಎಂಬುದೆಲ್ಲಾ ತಿಳಿಸಲಾಯ್ತು. ಆದರೆ ಆ ಭಾಗಗಳ ಅಸೆಂಬ್ಲಿ ಮತ್ತು ಪರಿಷತ್ತಿನ ಸದಸ್ಯರು ಅಲ್ಲಿಗೆ ಬಂದು ಅದರ ಕಾರ್ಯಕಲಾಪಗಳಲ್ಲಿ ಭಾಗವಹಿಸಲಿಲ್ಲ ಎಂಬುದನ್ನು ದುಃಖದಿಂದ ಹೇಳದೆ ಇರಲಾರೆ. ಅದಕ್ಕೆ ಯಾರೂ ಹಣ ಕೊಡಬೇಕಾಗಿಲ್ಲ, ಯಾರಿಗೆ ಸಾಮೂಹಿಕ ಅಭಿವೃದ್ಧಿಯಲ್ಲಿ ಆಸ್ತೆವಹಿಸಬೇಕು, ಸೂಕ್ತ ಸಲಹೆ ಕೊಡಬೇಕು ಎಂಬ ಅಪೇಕ್ಷೆ ಇದೆಯೋ ಅಂಥವರು ಆ ಸೆಮಿನಾರ್‌ಗಳಿಗೆ ಬರಬಹುದಾಗಿತ್ತು. ಕೆಲವು ಸೆಮಿನಾರ್‌ಗಳಲ್ಲಿ ಕೆಲವು ಸದಸ್ಯರು ಬಂದು ಸಲಹೆ ನೀಡಿದ್ದಾರೆ. ಅವರನ್ನು ನಾನು ಆಕ್ಷೇಪ ಮಾಡಲಾರೆ. ಯಾರು ಹಿಂದೆ ಬರಲಿಲ್ಲವೋ ಅವರು ಮುಂದಾದರೂ ಬಂದು ಸಹಾಯ ಮಾಡಿ ಸಲಹೆ ಕೊಡಬೇಕು. ಇದನ್ನು ಅವಶ್ಯಕವಾಗಿ ಮಾಡಲೇಬೇಕು. ಸದಸ್ಯರ ಸಹಕಾರ ಸಂಪೂರ್ಣವಾಗಿ ಬೇಕು. ಬರೀ ಟೀಕೆಯಿಂದ ಅಭಿವೃದ್ಧಿಯಾಗುತ್ತದೆಂದು ಯಾರಾದರೂ ಭಾವಿಸಿದ್ದರೆ ಅದು ಶುದ್ಧ ತಪ್ಪು. ಎಲ್ಲರೂ ಸೂಕ್ತವಾದ ಸಲಹೆಗಳನ್ನು ನೀಡಿ ಸಹಕರಿಸಬೇಕು ಎಂದು ಇಷ್ಟು ಹೇಳಿ ಸಭೆಯ ಮುಂದೆ ಮಂಡಿಸಿರುವ ಡಿಮ್ಯಾಂಡುಗಳಿಗೆ ಅನುಮೋದನೆ ನೀಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಈ ಸಭೆಯ ಸದಸ್ಯರು ಸಹಕರಿಸದಿರುವುದು ವಿಷಾದಕರ ಎಂದು ಹೇಳಿದರು. ಯಾವ ರೀತಿ ಹೇಗೆ ಸಹಕರಿಸಬೇಕು ಎಂಬುದನ್ನು ಕೂಡ ಸರಕಾರದವರು ಸೂಚಿಸುವುದು ಒಳ್ಳೆಯದು. ತಾಲ್ಲೂಕು ಬೋರ್ಡು ಸದಸ್ಯರು ಈ ಸಭೆಯ ಸದಸ್ಯರೂ ಆಗಿರುತ್ತಾರೆ, ಅಲ್ಲಿ ಕೆಲಸ ಮಾಡುವಾಗ ಅವರು ಸಲಹೆ ಕೊಡಬಹುದು. ಆದರೆ ಅವರ ಸಹಕಾರ ತೆಗೆದುಕೊಂಡು ಕೆಲಸ ಮಾಡಲು ಯಾವ ಕಾರ್ಯಕ್ರಮವಿದೆ, ಸಹಕಾರ ಕೇಳಿದಾಗ ಕೊಡುತ್ತಿಲ್ಲವೇ ಎಂಬುದನ್ನು ವಿಚಾರ ಮಾಡಬೇಕು. ಯಾರಾದರೂ ರಾಜಕೀಯ ಕಾರಣಗಳಿಗಾಗಿ ಕೊಡದಿದ್ದರೆ ಅಪಾದನೆ ಮಾಡುವುದು ಸೂಕ್ತವೇ ಹೊರತು ಸುಮ್ಮನೆ ಅಪಾದನೆ ಮಾಡುವುದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಎರಡೆರಡು ಬ್ಲಾಕುಗಳಿವೆ, ಅವನ್ನು ಕ್ಲಬ್ ಮಾಡುವ ವಿಚಾರದಲ್ಲಿ ಸರಕಾರದ ನಿಲುವೇನು ?

ಶ್ರೀ ಆರ್. ಎಂ. ಪಾಟೀಲ್.—ಎಲ್ಲೆಲ್ಲಿ ಅಭಿವೃದ್ಧಿ ಕಾರ್ಯ ಸಾಕಷ್ಟು ನಡೆದಿದೆ ಅಂಥ ಕಡೆ ಎರಡನ್ನು ತೆಗೆದು ಒಂದು ಬ್ಲಾಕ್ ಮಾಡಬಹುದು. ಎಲ್ಲಿ ಸರಿಯಾದ ಕೆಲಸವಾಗಿಲ್ಲ ಅಲ್ಲಿ ಖಾಯಂ ಮಾಡಿ ಮುಂದುವರಿಸಬೇಕಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಬಿ.ಡಿ.ಓ. ಗೆ ಅವಮಾನವಾಗುವಂತೆ ಮಾತನಾಡುವುದು ಸರಿಯಲ್ಲವೆಂದು ಹೇಳಿದರು. ಆದರೆ ಯಾವ ರೀತಿಯಲ್ಲಿ ಏನು ಮಾಡಿದರು ಎಂಬುದನ್ನು ಮಂತ್ರಿಗಳು ಹೇಳಬೇಕು.

ಶ್ರೀ ಆರ್. ಎಂ. ಪಾಟೀಲ್.—ಸರಕಾರಿ ನೌಕರರನ್ನು ಅವಹೇಳನ ಮಾಡುವುದಾಗಲಿ ಅವರ ಬಗ್ಗೆ ಯಾವುದೇ ತರದ ಟೀಕೆ ಮಾಡುವುದಾಗಲಿ ಸರಿಯಲ್ಲ ಎಂಬುದನ್ನು ಸೂಚಿಸುವುದಕ್ಕೆ ಅದನ್ನು ಹೇಳಿದೆ. ಮಾನ್ಯ ಸದಸ್ಯರು ಕೇಳುವುದನ್ನು ಬೇಕಾದರೆ ಹೇಳಬಹುದು.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಈಗ ವಿರೋಧ ಪಕ್ಷದ ಸದಸ್ಯರು ಎನ್ ಇ.ಎಸ್.ನ ಆಫೀಸರುಗಳನ್ನು ತೆಗೆಯಿರಿ ಎಂದು ಹೇಳುವುದಕ್ಕೆ ಗಮನಕೊಟ್ಟು ತೆಗೆಯಬಾರದು, ತೆಗೆದರೆ ತೆಗೆಯಿರಿ ಎಂದು ಹೇಳುವವರೇ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಉಪವಾಸ ಮಾಡುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಸಚಿವರು ಈಗ 6 ತಿಂಗಳಿಂದ ಈ ಖಾತೆ ವಹಿಸಿಕೊಂಡು ಸಾಕಷ್ಟು ಅನುಭವ ಪಡೆದಿರುವುದಾಗಿ ಹೇಳಿದರು. ರಾಜ್ಯದಲ್ಲಿ ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಅಭಿವೃದ್ಧಿ ಕಾರ್ಯ ಮಾಡಿರುವುದು ಗೊತ್ತಿದ್ದರೆ ಅದನ್ನು ಅವರು ತಿಳಿಸುವುದು ಒಳ್ಳೆಯದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ ಬ್ಲಾಕಿನಲ್ಲಿ ಅಭಿವೃದ್ಧಿಯಾಗಿದೆ ಎಂದು ಹೇಳಿ.

ಶ್ರೀ ಆರ್. ಎಂ. ಪಾಟೀಲ್.—ಆ ವಿಚಾರದಲ್ಲಿ ಬಹಳ ದೊಡ್ಡ ಪಟ್ಟಿ ಇರುವುದರಿಂದ ಈಗ ಹೇಳಲು ಕಷ್ಟವಾಗುತ್ತದೆ.

Mr. SPEAKER.—The question is :

"That the Government be granted a sum not exceeding Rs. 32,30,000 under Demand No. 21 Rural Development and a sum not exceeding Rs. 4,02,07,000 under Demand No. 25 Community Development Projects, National Extension Service and Local Development Works to defray the charges which will come in course of payment during the financial year ending with 31st day of March 1967."

The motion was adopted.

Mr. SPEAKER.—The House will now adjourn to meet tomorrow at One of the Clock.

The House adjourned at Six of the Clock to meet again at One of the Clock on Friday, the 11th March 1966.

WD 6450—GPB—500—7-6-66